ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 18 ಮಂಗಳವಾರ 2025

₹4

ಸಂಪುಟ: 45 | ಸಂಚಿಕೆ: 301 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com







ಮಾಸದ ನೆನಪು – ನಮ್ಮ ಬೆಳಕು



ಶ್ರೀಮತಿ ಗೌರಮ್ಮ ಬಿ.ರಾಚಯ್ಯ **ಶ್ರೀ ಬಿ.ರಾಚಯ್ಯ** ಮಾಜಿ ರಾಜ್ಯಪಾಲರು

ನಮ್ಮ ಮಾತೃಶ್ರೀ ಶ್ರೀಮತಿ ಗೌರಮ್ಮರವರು ದಿನಾಂಕ **07-02-2025ರ ಶುಕ್ರವಾರ** ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಯನ್ನು ದಿನಾಂಕ **17-02-2025 ಸೋಮವಾರ** ಆಲೂರಿನ ಮೃತರ ಸ್ವಗೃಹದಲ್ಲಿ ಕುಟುಂಬಸ್ಥರು ಹಮ್ಮಿಕೊಂಡಿರುತ್ತೇವೆ.

ದಿನಾಂಕ **18-02-2025ರ ಮಂಗಳವಾರ** ಅವರ ಸ್ಮರಣಾರ್ಥ ನಮನ, ಕಾವ್ಯಕಥನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ದಿನಾಂಕ 14-02-2025ರಂದು ನಡೆಯಬೇಕಾಗಿದ್ದ ಪೂಜ್ಯ ತಂದೆಯವರು ಮಾಜಿ ರಾಜ್ಯಪಾಲರೂ ಆದ **ದಿ॥ ಬಿ.ರಾಚಯ್ಯ** ಅವರ 25ನೇ ವರ್ಷದ ಸಂಸ್ಮರಣೆಯು ಸಹ ನಡೆಯಲಿದೆ, ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ದಿನಾಂಕ 18-02-2025ರ ಮಂಗಳವಾರ ಬೆಳಗ್ಗೆ 11.00 ರಿಂದ ಸಂಜೆ 6.00ವರೆಗೆ ಹರಿಕಥೆ ನಿಪುಣ ಶ್ರೀ ಕೆ.ರಾಮದಾಸ ಮತ್ತು ತಂಡದವರಿಂದ **ಶ್ರೀ ಮಂಟೇಸ್ವಾಮಿರವರ ಕಾವ್ಯ ಕಥನವನ್ನು** ಏರ್ಪಡಿಸಲಾಗಿದೆ.
ಭೋಜನ ಮಧ್ಯಾಹ್ನ 12.00 ಗಂಟೆಗೆ.

ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಮನ್ನಿಸಿ ಸಂಸ್ಮರಣ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಕೋರುತ್ತೇವೆ.

ಸ್ಥಳ : **ಚಿರಶಾಂತಿಧಾಮ, ಶ್ರೀ ಬಿ.ರಾಚಯ್ಯ ಸ್ಮಾರಕ ಭವನದ ಆವರಣ**
ಆಲೂರು ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

ಇಂತಿ ದುಃಖತಪ್ತರು :
ಶ್ರೀ ಎ.ಆರ್.ಕೃಷ್ಣಮೂರ್ತಿ, ಶಾಸಕರು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ
ಶ್ರೀ ಆರ್.ಬಾಲರಾಜ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು, ಚಾಮರಾಜನಗರ
ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು
ಬಂಧು-ಮಿತ್ರರು ಹಾಗೂ ಆಲೂರು ಗ್ರಾಮಸ್ಥರು.



ಎಂಆರ್‌ಸಿ ಅಧ್ಯಕ್ಷರಾಗಿ ಜಿ.ವೆಂಕಟೇಶ್ ಅವಿರೋಧ ಆಯ್ಕೆ

ಮೈಸೂರು, ಫೆ.17– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಅಧ್ಯಕ್ಷರಾಗಿ ಜಿ. ವೆಂಕಟೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಂದು ಸಂಜೆ ಎಂಆರ್‌ಸಿ ವ್ಯವಸ್ಥಾಪನಾ ಸಮಿತಿ ಸಭೆ ನಡೆದು, ವೆಂಕಟೇಶ್ ಅವರನ್ನು ಕ್ಲಬ್‌ನ ಮುಂದಿನ ವಾರ್ಷಿಕ ಮಹಾಸಭೆವರೆಗೂ ಅಧ್ಯಕ್ಷರು ಹಾಗೂ ಸೀನಿಯರ್ ಸ್ಟೀವರ್ಡ್ ಆಗಿ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಜಿ. ವೆಂಕಟೇಶ್

ಗಾಲ್ಫ್ ಕ್ಲಬ್‌ನಲ್ಲಿ ಗಾಲ್ಫ್ ಹಟ್ ನಿರ್ಮಾಣ ವಿಷಯದಲ್ಲಿ ಎಂಆರ್‌ಸಿ ಅಧ್ಯಕ್ಷರಾಗಿದ್ದ ಕೆ.ಎನ್. ಸುರೇಶ್‌ಕುಮಾರ್ ಅವರು ಕಳೆದ ಫೆ.13ರ ಗುರುವಾರದಂದು ರಾಜೀನಾಮೆ ನೀಡಿದ್ದರು. ಅಂದೇ ವೆಂಕಟೇಶ್ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

ಫೆ.20 ರಿಂದ ಮೈಸೂರಲ್ಲಿ 'ಸಿಲ್ಕ್ ಇಂಡಿಯಾ'

ರೇಷ್ಮೆ ಸೀರೆಗಳ ಪ್ರದರ್ಶನ–ಮಾರಾಟ



ಮೈಸೂರು, ಫೆ.17(ಎಂಕೆ)– ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಫೆ.20 ರಿಂದ 25ರವರೆಗಿನ 6 ದಿನಗಳ 'ಸಿಲ್ಕ್ ಇಂಡಿಯಾ–2025' ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ.

ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳ 60ಕ್ಕೂ ಹೆಚ್ಚು ಮಳಿಗೆಗಳು ಇರಲಿದ್ದು, ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆಗಳು ಸೇರಿದಂತೆ ಹಲವು ರಾಜ್ಯಗಳ ಪ್ರಸಿದ್ಧ ವಿನ್ಯಾಸದ ಸೀರೆಗಳು ಲಭ್ಯವಿವೆ.

ಹಾಗೆಯೇ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳು ಇರಲಿದ್ದು, ಮೈಸೂರಿನ ಜನತೆ, ಪ್ರವಾಸಿಗರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಸಾರ್ವಜನಿಕರು ವಿಶಿಷ್ಟ ಸಿಲ್ಕ್ ಇಂಡಿಯಾ ಮೇಳಕ್ಕೆ ಭೇಟಿ ನೀಡಿ, ಸದುಪಯೋಗ ಪಡೆದುಕೊಳ್ಳುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಅಭಿನಂದನೆ...



ಮೈಸೂರು ಕೃಷ್ಣರಾಜ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿದ ಡಿ.ಪಿ.ಧನರಾಜ್ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಾಮಾಜಿಕ ಹೋರಾಟಗಾರ ಕಡಕೊಳ ಕುಮಾರಸ್ವಾಮಿ, ಹಾಪ್‌ಕಾಮ್ಸ್ ಮಾಜಿ ನಿರ್ದೇಶಕರಾದ ಪಿ.ಮಹೇಶ್, ಮುಖಂಡರಾದ ಯಲ್ಲಪ್ಪ ನಾಯಕ್, ಎಚ್.ಆರ್. ರಘು, ರಮೇಶ್(ಕರಿಯಪ್ಪ), ಮಂಜು ಮತ್ತಿತರರು ಉಪಸ್ಥಿತರಿದ್ದರು.

ಶಾಲೆಯ ವಾರ್ಷಿಕೋತ್ಸವ ಉದ್ಘಾಟನೆ




ಮೈಸೂರಿನ ಸರಸ್ವತಿಪುರಂನಲ್ಲಿರುವ ಅಲ್ಲೈನ್ಸ್ ಅಕಾಡೆಮಿ ಜೂನಿಯರ್ ಶಾಲೆಯ ವಾರ್ಷಿಕೋತ್ಸವವನ್ನು ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಆಚರಿಸಲಾಯಿತು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ.ಯಶೋಧರ, ಶಾಲೆಯ ಪ್ರಾಂಶುಪಾಲರಾದ ಡಾ.ರಜನಿರಾವ್ ಇನ್ನಿತರರಿದ್ದರು.

ಕರಾಟೆ ಸ್ಪರ್ಧೆ ವಿಜೇತರು



ಮೈಸೂರಿನ ಟೆರಿಷಿಯನ್ ಕಾಲೇಜಿನ ಇಂಡೋರ್ ಸ್ಟೇಡಿಯಂನಲ್ಲಿ ನಡೆದ ನ್ಯಾಷನಲ್ ಲೆವೆಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ನಾಗ ಮಾರ್ಷಲ್ ಅಕಾಡೆಮಿಯಿಂದ ಭಾಗವಹಿಸಿದ್ದ ವಿದ್ಯಾರ್ಥಿಗಳು ಕಥ ಹಾಗೂ ಕುಮಿತೆ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ರಥಮ, ದ್ವಿತೀಯ ಸ್ಥಾನಗಳನ್ನು ಪಡೆದಿದ್ದಾರೆ. ಕಥ ವಿಭಾಗದಲ್ಲಿ ಪೃಥ್ವಿ, ಅನಸ್, ಚಾರ್ವಿ, ಅಂಜಾನ್, ಮೌರ್ಯ, ಕಲ್ಪಿತ್ ಪ್ರಸಾದ್, ವಿಖ್ಯಾತ್ ಪ್ರಥಮ, ಪ್ರಜ್ಞಾಖ್ಯ ಮೋಕ್ಷಲ್, ವಿಶ್ವನಾಥ್, ವೇದಾಂತ್ ದ್ವಿತೀಯ, ತೃತೀಯ ಸ್ಥಾನಗಳನ್ನು ಪಡೆದಿದ್ದಾರೆ. ಕುಮಿತೆ ವಿಭಾಗದಲ್ಲಿ ಅನಸ್ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಚಿತ್ರದಲ್ಲಿ ಕರಾಟೆ ಕೋಚ್ ರವೀಶ್, ರಾಘವೇಂದ್ರ, ಸೆನ್ಸಾಯಿ ಶಿವಕುಮಾರ್ ಅವರನ್ನು ಕಾಣಬಹುದು.

ನಿವೃತ್ತ ಸಾರಿಗೆ ಆಯುಕ್ತ ಬಲದೇವ್ ರಾಜೇ ಅರಸ್ ನಿಧನ



ಬಲದೇವ್ ರಾಜೇ ಅರಸ್

ಮೈಸೂರು, ಫೆ.17–ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿ, ಮಾಜಿ ಸಾರಿಗೆ ಆಯುಕ್ತ ಎಂ.ಎನ್. ಬಲದೇವ್ ರಾಜೇ ಅರಸ್(91) ಅವರು ಸೋಮವಾರ ಬೆಳಗ್ಗೆ ನಿಧನರಾದರು.

ಇವರು ಪತ್ನಿ ರತ್ನಪ್ರಭಾ, ಪುತ್ರ ಜಯಚಂದ್ರ ರಾಜ್ ಅರಸ್, ಪುತ್ರಿ ಪೂರ್ಣಿಮಾ, ಸೊಸೆಯರಾದ ಉಷಾರಾಣಿ ಹಾಗೂ ಕಲಾ ಅನೂಪ್, ಅಳಿಯ ಟಿ.ಡಿ.ಮಾಹಿಹ್ ಅರಸ್, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಸಹೋದರರಾದ ಲೇಟ್ ಡಿ.ಜಯದೇವರಾಜ್ ಅರಸ್ ಹಾಗೂ ಡಿ.ವಿಜಯ್ ದೇವ ರಾಜೇ ಅರಸ್ ಜನರಿಗೆ ಚಿರಪರಿಚಿತರು. ಜಯದೇವ ರಾಜ್ ಅರಸ್ ಅವರು ಶಾಸಕರಾಗಿದ್ದಾಗ ದಸರಾ ವಸ್ತು ಪ್ರದರ್ಶನ ಈಗಿರುವ ಜಾಗಕ್ಕೆ ಸ್ಥಳಾಂತರಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಡಿ.ವಿ.ಅರಸ್ ಎಂದೇ ಕರೆಯಲ್ಪಡುತ್ತಿದ್ದ ವಿಜಯ್ ದೇವ್ ರಾಜೇ ಅರಸ್ ಅವರು ಇಡೀ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ಇಂಟರ್‌ಕಾಮ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದರು. ಸಹೋದರರು ಹಾಗೂ ತಂದೆ ಅಮಲ್ದಾರ್ ದೇವ್‌ರಾಜ್ ಅರಸ್ ಅವರ ಹಾದಿಯಲ್ಲೇ ಸಾಗಿದ ಬಲದೇವ್ ರಾಜೇ ಅರಸ್ ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಬಳಿಕ ಸರ್ಕಾರಿ ಸೇವೆಗೆ ಸೇರಿದರು. ಸಾರಿಗೆ ಆಯುಕ್ತರಾಗಿ ನಿವೃತ್ತಿ ಹೊಂದಿದ್ದರು. ಇಂದು ಇವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದುಡಿಯುವ ಜನರ ಸಮಸ್ಯೆ ಪರಿಹಾರಕ್ಕಾಗಿ ಪ್ರತಿಭಟನೆ

ಮೈಸೂರು,ಫೆ.17(ಜಿಎ)–ದೇಶದಾದ್ಯಂತ ದುಡಿಯುವ ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಜಿಲ್ಲಾ ಸಮಿತಿ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರಗಳ ನೀತಿಗಳ ಫಲವಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ದುಡಿಯುವವರು ತೀವ್ರ ಬಾಧೆಗೆ ತುತ್ತಾಗಿದ್ದಾರೆ. ಕಾಯಂ ಉದ್ಯೋಗಗಳು ತೀವ್ರವಾಗಿ ಕಡಿತವಾಗುತ್ತಿವೆ. ಸಾರ್ವಜನಿಕ ಉದ್ಯಮಗಳನ್ನು ಜನಹಿತಕ್ಕೆ ವಿರುದ್ಧವಾಗಿ ಖಾಸಗೀಕರಿಸಲಾಗುತ್ತಿದೆ. ದುಡಿಯುವ ಜನರ ವೇತನ ಜೀವನ ವೆಚ್ಚಕ್ಕೆ ಹೋಲಿಸಿದರೆ ಕ್ಷೀಣಿಸುತ್ತಿದೆ. ಸೇವಾ ಭದ್ರತೆ ಮಾಯವಾಗುತ್ತಿದೆ. ಸಾರ್ವಜನಿಕ ಕ್ಷೇತ್ರದ ಆಸ್ತಿಯನ್ನು ಯಾವುದೇ ಹೂಡಿಕೆ ಮಾಡದ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸಲಾಗುತ್ತಿದೆ ಎಂದು ಕಿಡಿಕಾರಿದರು.



ದುಡಿಯುವ ಜನರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಎಐಯುಟಿಯುಸಿ ಜಿಲ್ಲಾ ಸಮಿತಿ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಹಕ್ಕೊತ್ತಾಯಗಳು: ಕಾರ್ಮಿಕ ವಿರೋಧಿ 4 ಲೇಬರ್ ಕೋಡ್‌ಗಳನ್ನು ರದ್ದುಗೊಳಿಸಬೇಕು. ರಾಷ್ಟ್ರೀಯ ಕನಿಷ್ಠ ವೇತನವನ್ನು ತಿಂಗಳಿಗೆ 28000ಕ್ಕೆ ಹೆಚ್ಚಿಸಬೇಕು. ಸ್ಕೀಮ್ ಕಾರ್ಯಕರ್ತರನ್ನು ಸರ್ಕಾರಿ ನೌಕರರನ್ನಾಗಿ ಕಾಯಂಗೊಳಿಸಲು ಐಎಲ್‌ಸಿಯ 45, 46ನೇ ಶಿಫಾರಸುಗಳನ್ನು ಜಾರಿಗೊಳಿಸಬೇಕು. ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಭದ್ರತೆ ಖಾತ್ರಿಪಡಿಸಬೇಕು. ಎಲ್ಲಾ ಸ್ಕೀಮ್ ಕಾರ್ಯಕರ್ತರಿಗೆ ಮಾಸಿಕ ಕನಿಷ್ಠ ವೇತನ 28000 ರೂ., ಪಿಂಚಣಿ 10000 ರೂ. ಹಾಗೂ ಇಎಸ್‌ಐ ಮತ್ತು ಪಿಎಫ್ ಒದಗಿಸಬೇಕು. ಎಲ್ಲಾ ಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಕಾಯಂಗೊಳಿಸಬೇಕು. ಪಿಎಫ್ ಮತ್ತು ಇಎಸ್‌ಐ ಸೌಲಭ್ಯಗಳಿಗೆ ವೇತನ ಮಿತಿ ನಿರ್ಬಂಧ ತೆಗೆದು ಹಾಕಿ, ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಸೌಲಭ್ಯ ಖಾತ್ರಿಪಡಿಸಬೇಕು. ಹೊಸ ಪಿಂಚಣಿ ವ್ಯವಸ್ಥೆ ವಾಪಸ್ ಪಡೆದುಕೊಳ್ಳಬೇಕು. ಎಲ್ಲರಿಗೂ ಆಹಾರ, ಶಿಕ್ಷಣ ಮತ್ತು ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಹಕ್ಕಿಗಾಗಿ ಕಾನೂನನ್ನು ಜಾರಿಗೊಳಿಸಿ. ಎಲ್ಲಾ ಪಿಂಚಣಿದಾರರಿಗೆ ಬೆಲೆ ಸೂಚ್ಯಂಕ ಅನುಗುಣವಾದ ಪಿಂಚಣಿಯನ್ನು ಖಾತ್ರಿಪಡಿಸಿ ಮತ್ತು ಕನಿಷ್ಠ 10000 ಪಿಂಚಣಿ ಒದಗಿಸಿ. ಈ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದನ್ನು ನಿಲ್ಲಿಸಿ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮರ್ಜಿಗೆ ಒಳಗಾಗಿ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಳ ಮಾಡಿವೆ. ಯಾವುದೇ ಚರ್ಚೆ, ಸಮಾಲೋಚನೆ ಇಲ್ಲದೆ ಎಲ್ಲಾ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿವೆ. ಕಾರ್ಮಿಕರ ದುಡಿಮೆಯ ಆರೋಗ್ಯ ಹಾಗೂ ಸುರಕ್ಷತೆ ಖಾತರಿಪಡಿಸುವ ಬದಲಿಗೆ ಸರ್ಕಾರ ಕೆಲಸದ ಸ್ಥಳಗಳನ್ನು ಪರಿಶೀಲಿಸುವ ಕಾರ್ಯದಿಂದ ದೂರ ಸರಿಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಐಯುಟಿಯುಸಿ ಜಿಲ್ಲಾಧ್ಯಕ್ಷ ವಿ.ಯಶೋಧರ್, ಕಾರ್ಯದರ್ಶಿ ಚಂದ್ರಶೇಖರ ಮೇಟಿ, ಜಂಟಿ ಕಾರ್ಯದರ್ಶಿ ಮುದ್ದುಕೃಷ್ಣ, ಜಿಲ್ಲಾ ಸಮಿತಿಯ ಸದಸ್ಯರಾದ ಪಿ.ಎಸ್.ಸಂಧ್ಯಾ, ಎಚ್.ಎಸ್.ಹರೀಶ್, ಪುಟ್ಟರಾಜು ಮತ್ತಿತರರು ಪಾಲ್ಗೊಂಡಿದ್ದರು.

ಶಿಕ್ಷಣದ ಹಕ್ಕು ಕಸಿಯುವ ರಾಜ್ಯ ಸರ್ಕಾರ



ಮೈಸೂರು,ಫೆ.17–ಶಿಕ್ಷಣವು ಮೂಲಭೂತ ಹಕ್ಕು. ಆದರೆ, ರಾಜ್ಯ ಸರ್ಕಾರವು ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ಮೂಲಕ ಈ ಹಕ್ಕನ್ನು ಕಸಿಯುತ್ತಿದೆ ಎಂದು ಬಿಜೆಪಿ ಮೈಸೂರು ನಗರ ಉಪಾಧ್ಯಕ್ಷೆ ಹೇಮಾ ನಂದೀಶ್ ಟೀಕಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ವಿಶ್ವವಿದ್ಯಾಲಯಗಳನ್ನೂ ಆದಾಯದ ಮೂಲ ಮತ್ತು ಒಂದು ಸರಕನ್ನಾಗಿ ನೋಡುತ್ತಿದೆ. ರಾಜ್ಯ ಸರ್ಕಾರವೇ ಆರ್ಥಿಕ ಸಂಕಷ್ಟದಲ್ಲಿದೆ. ಹಾಗಾಗಿ ಇಂಥ ಕ್ರಮಕ್ಕೆ ಮುಂದಾಗುತ್ತಿದೆ ಎಂದು ಲೇವಡಿ ಮಾಡಿದ್ದಾರೆ.

ಪದವೀಧರರಿಗೆ ಯುವನಿಧಿ ಘೋಷಿಸಿದ ಸರ್ಕಾರ ಈಗ ಅಂಥ ಪದವೀಧರರನ್ನು ರೂಪಿಸುವ ವಿಶ್ವವಿದ್ಯಾಲಯಗಳನ್ನೇ ಮುಚ್ಚಲು ಹೊರಟಿದೆ. ರಾಜ್ಯವನ್ನು ಆರ್ಥಿಕವಾಗಿ ಮಾತ್ರವಲ್ಲದೆ, ಬೌದ್ಧಿಕವಾಗಿ ದಿವಾಳಿಯತ್ತ ಕೊಂಡೊಯ್ಯುತ್ತಿದೆ ಎಂದಿದ್ದಾರೆ. ರಾಜ್ಯದ ಎಲ್ಲ ಭಾಗದವರಿಗೂ ಉನ್ನತ ಶಿಕ್ಷಣ ಕೈಗೆಟಕಲು ಅನುವಾಗುವಂತೆ ಬಿಜೆಪಿ ಸರ್ಕಾರವು ಹತ್ತು ವಿವಿಗಳನ್ನು ಸ್ಥಾಪಿಸಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅವುಗಳನ್ನು ಮುಚ್ಚುವ ಮೂಲಕ ಆ ಭಾಗದ ವಿದ್ಯಾರ್ಥಿಗಳಿಗೆ ಶೋಷಣೆ ಮಾಡುತ್ತಿದೆ. ರಾಜ್ಯದ ಕರಾವಳಿ ಭದ್ರತೆಗೆ ಬೇಕಿರುವ ಇಂಧನವನ್ನು ಕಡಿತಗೊಳಿಸಲು ಆದೇಶಿಸಿದೆ. ಇದು ಆಡಳಿತ ವೈಫಲ್ಯದ ನಿದರ್ಶನ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಹಕಾರ ಸಚಿವ ರಾಜಣ್ಣರಿಗೆ ಅಭಿನಂದನೆ...



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನೂತನ ಅಧ್ಯಕ್ಷ ಎಸ್.ಚಂದ್ರಶೇಖರ್ ಹಾಗೂ ಶಾಸಕ ಕೆ.ಹರೀಶ್‌ಗೌಡ ಅವರು ಬೆಂಗಳೂರಿನಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಸಹಕಾರ ಮಹಾಮಂಡಲದ ಮಾಜಿ ಅಧ್ಯಕ್ಷ ಗಂಗಣ್ಣ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಜನತಾ ಬಜಾರ್ ನಿರ್ದೇಶಕ ಯು.ಎಸ್.ರಮೇಶ್, ಎನ್.ಮಂಜುನಾಥ್ ಈ ವೇಳೆ ಹಾಜರಿದ್ದರು.

ಸಂಗೀತ ಕ್ಷೇತ್ರಕ್ಕೆ ತ್ಯಾಗರಾಜರು, ಪುರಂದರದಾಸರ ಕೊಡುಗೆ ಅಪಾರ

ವಿಶೇಷ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅಭಿಮತ

ಮೈಸೂರು,ಫೆ.17–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಪುರಂದರದಾಸರ ಹಾಗೂ ತ್ಯಾಗರಾಜರ ಆರಾಧನಾ ಮಹೋತ್ಸವದ ಅಂಗವಾಗಿ ವಿಶೇಷ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿದ್ದ ವಿದ್ವಾನ್ ಅನಂತ ಅವಧಾನಿ ಅವರಿಗೆ ಸುರಭಿ ಗಾನಕಲಾ ಮಂದಿರದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಇದೇ ವೇಳೆ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಮಾತನಾಡಿ, ಸಂಗೀತ ಕ್ಷೇತ್ರಕ್ಕೆ ದಾಸರ ಕೊಡುಗೆಗಳು ಅಪಾರ. ಅದರಲ್ಲೂ ತ್ಯಾಗರಾಜರು ಮತ್ತು ಪುರಂದರದಾಸರ ಕೀರ್ತನೆಗಳು ಎಂದೆಂದಿಗೂ ಪ್ರಸ್ತುತ. ಸಂಗೀತವು ಮನಸ್ಸಿಗೆ ಮುದ ನೀಡುವುದರ ಜೊತೆಗೆ ಏಕಾಗ್ರತೆಯನ್ನು ಹೊಂದಲು ಸಹಕಾರಿಯಾಗುತ್ತದೆ. ಸಂಗೀತ ಕೇಳುವುದರಿಂದ ಮನುಷ್ಯನ ರೋಗಗಳು ದೂರವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ತಿಳಿಸಿದರು.



ವಿದ್ವಾನ್ ಅನಂತ ಅವಧಾನಿ ಅವರನ್ನು ಸುರಭೀ ಗಾನಕಲಾ ಮಂದಿರದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ 'ನಾದಸುರಭೀ' ಬಿರುದು ಮತ್ತು ಸನ್ಮಾನ ಸ್ವೀಕರಿಸಿ ಮಾತನಾಡಿದ ವಿದ್ವಾನ್ ಅನಂತ ಅವಧಾನಿ ಅವರು, ಅಂಧರ ಬಾಳಿಗೆ ಬೆಳಕು ನೀಡಿದ್ದು ಸಂಗೀತ. ನಾನು ಜನರನ್ನು ಕಣ್ಣಿಂದ ನೋಡಲಾಗದಿದ್ದರೂ ಸಂಗೀತ ಹೇಳುವುದರಿಂದ ಎಲ್ಲರ ಮನಸ್ಸಿನಲ್ಲೂ ನೆಲೆಸಿದ್ದೇನೆ. ರಾಗದಿಂದ ರೋಗ ದೂರವಾಗುತ್ತದೆ. ಸಂಗೀತವನ್ನು ಕಲಿತ ಅನೇಕರು ಇಂದು ರೋಗಗಳಿಂದ ದೂರವಾಗಿರುವುದನ್ನು ನಾನು ಗಮನಿಸಿದ್ದೇನೆ. ಇಂದಿನ ಯುವಕರು ಪಾಶ್ಚಾತ್ಯ ಸಂಗೀತದ ಅಬ್ಬರಗಳಿಗೆ ಮನಸೋಲಬಾರದು ದೇಶಿಯ ಸಂಗೀತಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಬೇಕೆಂದು ಅಭಿಪ್ರಾಯಿಸಿದರು.

ವಿದ್ವಾನ್ ಅನಂತ ಅವಧಾನಿ ವಿಶೇಷ ಸಂಗೀತ ಕಛೇರಿಯನ್ನು ನಡೆಸಿಕೊಟ್ಟರು. ಪಕ್ಕವಾದ್ಯ ವಿದ್ವಾನ್ ಚಂದನ್ ಕುಮಾರ್ –ಕೊಳಲು, ವಿದ್ವಾನ್ ಅರ್ಜುನ್ ಕುಮಾರ್ –ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜಂ–ಘಟಂ, ವಿದ್ವಾನ್ ಸಿಂಧು ಸುಚೇತನ್ –ವಯೋಲಿನ್ ಸಹಕಾರ ನೀಡಿದರು. ವೇದಿಕೆಯಲ್ಲಿ ಸುರಭೀ ಗಾನ ಕಲಾಮಂದಿರದ ಡಾ.ಸುಕನ್ಯಾ ಪ್ರಭಾಕರ್, ಶ್ರೀಮತಿ ಲಲಿತಾ ಶ್ರೀನಿವಾಸನ್, ವಿದೂಷಿ ಮೀರಾ ಮಂಜುನಾಥ್, ಶ್ರೀಮತಿ ವಿಜಯಾಸರಳಾಯ, ಡಾ.ರಾಮಮೂರ್ತಿ ರಾವ್, ಹೆಚ್.ಕೆ.ಪ್ರಭಾಕರ್, ಪ್ರೊ.ಆರ್.ಎ. ಮಂಜುನಾಥ್ ಇತರರು ಉಪಸ್ಥಿತರಿದ್ದರು.


ನಾಳೆ ಛತ್ರಪತಿ ಶಿವಾಜಿ ಜಯಂತ್ಯುತ್ಸವ



ಮೈಸೂರು: ಮೈಸೂರಿನ ಕೃಷ್ಣರಾಜ ಯುವ ಬಳಗದಿಂದ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯುತ್ಸವವನ್ನು ಚಾಮುಂಡಿಪುರಂನಲ್ಲಿರುವ ತಗಡೂರು ರಾಮಚಂದ್ರ ರಾವ್ ಉದ್ಯಾನವನದಲ್ಲಿ ಫೆ. 19ರಂದು ಬೆಳಗ್ಗೆ 11:30ಕ್ಕೆ ಆಯೋಜಿಸಲಾಗಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾಜಿ ಮುಡಾ ಅಧ್ಯಕ್ಷ ಎಚ್.ವಿ. ರಾಜೀವ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಎನ್‌ಎಂ ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಶೋಭಾ ಸುನಿಲ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಆಗಮಿಸಲಿದ್ದಾರೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.02.2025 ಮಂಗಳವಾರ, ಮಳೆ ನಕ್ಷತ್ರ: ಧನಿಷ್ಠ 06.02.2025ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಗ್ಯಾಸ್ಟ್ರೈಟಿಸ್ (ಆಮ್ಲಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ (ಮೈಸೂರು):** ಗಾನ ಸಿರಿ–ವೇದಾಂತ ಲಹರಿ ಭಾಗ–12, ಶ್ರೀ ವಾದಿರಾಜ ಗುರುಸಾರ್ವಭೌಮ ವಿರಚಿತ ರುಗ್ಮಿಣೀಶ ವಿಜಯ ಸಪ್ತಾಹ, ವಿದುಷಿ ಶ್ರೀಮತಿ ಪ್ರಜ್ಞಾರಾವ್ ಅವರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ರಿಂದ ರಾತ್ರಿ 8.30ರವರೆಗೆ

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಗಾಂಧಿ ಶಿಲ್ಪ ಬಜಾರ್, ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ರಿಂಗ್ ರಸ್ತೆ, ಬೆಳಗ್ಗೆ 10 ರಿಂದ.

■ **ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ರಾಮಕೃಷ್ಣ ಪರಮಹಂಸ ಜಾತ್ರಾ ಮಹೋತ್ಸವ, ಸಂಜೆ 5ಕ್ಕೆ ಯೋಗ ಪ್ರದರ್ಶನ, ಸ್ವಾಮೀಜಿಯ ಭಾವಚಿತ್ರದ ಮೆರವಣಿಗೆ, ಸಾನ್ನಿಧ್ಯ : ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ವಾಗ್ಮಿಗಳಾದ ಕನ್ನಡದ ಪೂಜಾರಿ ಹೀರೆಮಗಳೂರು ಕಣ್ಣನ್, ಚಕ್ರವರ್ತಿ ಸೂಲಿಬೆಲೆ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಉತ್ಸವದ ಪ್ರಯುಕ್ತ ಸುಯೋಗ್ ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಆರೋಗ್ಯ ಉಚಿತ ತಪಾಸಣೆ, ಸ್ಥಳ: ರಾಮಕೃಷ್ಣನಗರ ವೃತ್ತ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.

■ **ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಮಾನಿಗಳ ಬಳಗ :** ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕ ಅನಿಲ್ ಚಿಕ್ಕಮಾದು ಮತ್ತು ಸಂಸದ ಸುನೀಲ್ ಬೋಸ್ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು : ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಶಾಸಕರಾದ ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್, ಸ್ಥಳ: ಹೋಟೆಲ್ ಬೈಪಾಸ್ ಕೋಸ್ಟಲ್ ಪರ್ಲ್, ಬೋಗಾದಿ–ಹಿನಕಲ್ ರಿಂಗ್ ರಸ್ತೆ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ. ಸುರಭಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 8.30 ಕರೆಗೊಂದುಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು –Indian Cancer Society, Karnataka Chapter, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ.ಎನ್. ರಮಾಮಣಿ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ – ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ – ಆಕಾಶವಾಣಿ ಮೈಸೂರು ಕೇಂದ್ರದ 90ನೇ ವರ್ಷಾಚರಣೆ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಯೋಜಿಸಲಾಗಿದ್ದ ಜಾನಪದ ಸಂಭ್ರಮದಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರು ಮಾಡಿದ್ದ ಭಾಷಣದ ಆಯ್ದ ಭಾಗಗಳು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು-Indian Cancer Society, Karnataka Chapter, 1.25 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ:ಆಲತ್ತೂರ್ ಸಹೋದರರು – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಭೂ ಕೈಲಾಸ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 5.00 'ಅಜಾಕ್ಸ್ ಸ್ಕೂಲ್ ಆಫ್ ಕಾಂಕ್ರೀಟ್–ಕೌಶಲ ತರಬೇತಿ ಕಾರ್ಯಕ್ರಮ' ಗ್ರಾಮೀಣ ಹಾಗೂ ನಗರ ಪ್ರದೇಶಗಳ ಯುವಜನರಿಗೆ ಕಾಂಕ್ರೀಟ್ ಯಂತ್ರಗಳ ಕೌಶಲ ತರಬೇತಿ' ಕುರಿತು ತಿಳಿಸಿಕೊಡಲಿದ್ದಾರೆ ಸಂಸ್ಥೆಯ ಡೀನ್ ಅಕಾಡೆಮಿಕ್ಸ್ ಡಾ.ಎನ್. ಸುರೇಶ್, ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಳಸಬಹುದಾದ ಫೋನ್ ಸಂಖ್ಯೆಗಳು: 251 5089 ಅಥವಾ 251 2582 ಮೈಸೂರಿನ ಎಸ್‌ಟಿಡಿ ಕೋಡ್ : 0821 ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, ಈ ಕಾರ್ಯಕ್ರಮದ ಪ್ರಾಯೋಜಕರು: ಅಜಾಕ್ಸ್ ಸ್ಕೂಲ್ ಆಫ್ ಕಾಂಕ್ರೀಟ್, ಅಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್, ದೊಡ್ಡಬಳ್ಳಾಪುರ, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೈತ ಹಾಗೂ ಗ್ರಾಹಕರ ನಡುವೆ ನೇರ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ –ಮೈಸೂರು ತಾಲೂಕು ದೇವಗಳ್ಳಿ ಗ್ರಾಮದ ಜಿ.ಎನ್. ಶಂಕರೇಗೌಡ ಮತ್ತು ಹೆಚ್.ಡಿ. ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದ ಎನ್. ಯೋಗೀಶ್, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ :ಬಿಂದು ಮಾಧವ್ ಪಾತಕ್ – ರುದ್ರವೀಣಾ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಓ.ಎಸ್. ಅರುಣ್ – ಹಾಡುಗಾರಿಕೆ, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ– ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ವಚನ ವಾಚನ ಮತ್ತು ಉಪನ್ಯಾಸ, ಉದ್ಘಾಟನೆ : ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಬಿ. ಬೆಟ್ಟಸ್ವಾಮಿ, ಪ್ರಶಸ್ತಿ ಪತ್ರ ವಿತರಣೆ: ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ವೀರಶೈವ ಆಶ್ರಮ ಅಧ್ಯಕ್ಷ ಹೆಚ್.ಜಿ. ಗುರುಪ್ರಸಾದ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ವೀರಶೈವ ಆಶ್ರಮ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಫೆಬ್ರವರಿ 18 ಮಂಗಳವಾರ 2025

ಸಂಪುಟ: 45 | ಸಂಚಿಕೆ: 301 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರಿನ ಅಪಾರ್ಟ್‌ಮೆಂಟ್‌ನಲ್ಲಿ ಒಂದೇ ಕುಟುಂಬದ ನಾಲ್ವರ ಮೃತದೇಹ ಪತ್ತೆ

ತಾಯಿ, ಪತ್ನಿ, ಪುತ್ರನ ಹತ್ಯೆ; ಯಜಮಾನ ಆತ್ಮಹತ್ಯೆ




ಕುಶಾಲ್ | ಚೇತನ್ | ರೂಪಾಲಿ | ಪ್ರಿಯಂವಧ

● ಹಾಸನ ಜಿಲ್ಲೆ ಗೊರೂರು ಮೂಲದ ಕುಟುಂಬ ● ವಿಪರೀತ ಸಾಲವೇ ನಮ್ಮ ಸಾವಿಗೆ ಕಾರಣ; ಡೆತ್‌ನೋಟ್‌ನಲ್ಲಿ ಉಲ್ಲೇಖ ● ಅಮೆರಿಕಾದಲ್ಲಿರುವ ತಮ್ಮನಿಗೆ ಸಾವಿನ ಮಾಹಿತಿ; 'ಗೊರೂರು ಫ್ಯಾಮಿಲಿ' ವಾಟ್ಸಾಪ್ ಗ್ರೂಪ್‌ಗೂ ಅಂತಿಮ ಪಯಣದ ವಾಯ್ಸ್ ರೆಕಾರ್ಡ್ ಅಪ್ಲೋಡ್

ಮೈಸೂರು, ಫೆ.17(ಬಿಎಲ್‌ಯು)– ಉತ್ತರ ಭಾರತದಿಂದ ವಿದೇಶಕ್ಕೆ ಕಾರ್ಮಿಕರನ್ನು ಕಳುಹಿಸಿಕೊಡುವ ಏಜೆಂಟ್ ಆಗಿದ್ದ ವ್ಯಕ್ತಿಯೋರ್ವ ತನ್ನ ತಾಯಿ, ಪತ್ನಿ ಮತ್ತು ಪುತ್ರನನ್ನು ಹತ್ಯೆಗೈದು ತಾನೂ ನೇಣಿಗೆ ಶರಣಾದ ಘಟನೆ ಮೈಸೂರಿನ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದೆ.

ಹಾಸನ ಜಿಲ್ಲೆ ಗೊರೂರು ಮೂಲದವರಾಗಿದ್ದು, ಮೈಸೂರಿನಲ್ಲಿ ನೆಲೆಸಿದ್ದ ಚೇತನ್ (46), ತನ್ನ ತಾಯಿ ಪ್ರಿಯಂವಧ (65), ಪತ್ನಿ ಎಸ್. ರೂಪಾಲಿ (42) ಮತ್ತು ಪುತ್ರ ಜಿ.ಸಿ. ಕುಶಾಲ್ (16) ಅವರನ್ನು ಹತ್ಯೆಗೈದು ತಾನು ನೇಣಿಗೆ ಶರಣಾದವರಾಗಿದ್ದು, ಆತ್ಮಹತ್ಯೆಗೂ ಮುನ್ನ ಚೇತನ್ ಇಂಗ್ಲೀಷ್‌ನಲ್ಲಿ ಮೂರು ಪುಟಗಳ ಡೆತ್‌ನೋಟ್ ಬರೆದಿರುವುದಲ್ಲದೆ, 'ಗೊರೂರು ಫ್ಯಾಮಿಲಿ' ವಾಟ್ಸಾಪ್ ಗ್ರೂಪ್‌ನಲ್ಲಿ ದುರಂತ ಸಾವಿನ ಬಗ್ಗೆ ವಾಯ್ಸ್ ರೆಕಾರ್ಡ್ ಅಪ್ಲೋಡ್ ಮಾಡಿದ್ದಾರೆ. ಅಲ್ಲದೆ, ತಾನೂ ಹಾಗೂ ತನ್ನ ಕುಟುಂಬದವರು ಇನ್ನಿರುವುದಿಲ್ಲ ಎಂದು ಅಮೆರಿಕಾದಲ್ಲಿರುವ ತನ್ನ ಸಹೋದರ ಭರತ್ ಅವರಿಗೆ ವಾಟ್ಸಾಪ್ ಮೆಸೇಜ್ ಮಾಡಿದ್ದಾರೆ. ಕುಟುಂಬಸ್ಥರನ್ನು ಕೊಂದು ಆತ್ಮಹತ್ಯೆಗೆ ಶರಣಾದ ಚೇತನ್ ತನ್ನ ಈ ಕೃತ್ಯಕ್ಕೆ ವಿಪರೀತ ಸಾಲವೇ ಕಾರಣ ಎಂದು ಡೆತ್‌ನೋಟ್‌ನಲ್ಲಿ ■ 6ನೇ ಪುಟಕ್ಕೆ



ಚೇತನ್ ಕುಟುಂಬ ನೆಲೆಸಿದ್ದ ಅಪಾರ್ಟ್‌ಮೆಂಟ್

ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ನ ಫ್ಲಾಟ್ ಸಂಖ್ಯೆ 6 ಮತ್ತು 7ರಲ್ಲಿ ಮೃತದೇಹಗಳು ದೊರೆತಿವೆ. ವಿದೇಶಕ್ಕೆ ಕಾರ್ಮಿಕರನ್ನು ಕಳುಹಿಸುವ ಏಜೆಂಟರಾಗಿದ್ದ ಚೇತನ್, ಅವರ ತಾಯಿ, ಪತ್ನಿ ಮತ್ತು ಪುತ್ರ ಮೃತಪಟ್ಟಿದ್ದಾರೆ. ಚೇತನ್ ಅವರ ಡೆತ್‌ನೋಟ್ ದೊರೆತಿದೆ. ಸಾಲದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮರಣೋತ್ತರ ಪರೀಕ್ಷೆ ಹಾಗೂ ಮುಂದಿನ ತನಿಖೆಯಿಂದ ಹೆಚ್ಚಿನ ವಿವರಗಳು ತಿಳಿಯಲಿದೆ. ಸದ್ಯಕ್ಕೆ ಇಷ್ಟನ್ನು ಮಾತ್ರ ಹೇಳಬಹುದು.



– ಸೀಮಾ ಲಾಟ್ಕರ್,
ನಗರ ಪೊಲೀಸ್ ಆಯುಕ್ತೆ.

ಕುಟುಂಬಸ್ಥರ ಉಸಿರುಗಟ್ಟಿಸಿ ಹತ್ಯೆ!

ಚೇತನ್ ಆತ್ಮಹತ್ಯೆಗೂ ಮುನ್ನ ತಾಯಿ, ಪತ್ನಿ ಹಾಗೂ ಪುತ್ರನನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿರುವುದಾಗಿ ತಿಳಿದುಬಂದಿದೆ. ಚೇತನ್ ಮಾವ ಸೇತುರಾಮನ್ ಅವರಿಗೆ ಆಪ್ತರಾಗಿರುವ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಚೇತನ್ ಆತ್ಮಹತ್ಯೆಗೂ ಮುನ್ನ ತಾಯಿ, ಪತ್ನಿ ಮತ್ತು ಪುತ್ರನಿಗೆ ವಿಷ ನೀಡಿ ಕೊಲ್ಲಲು ಪ್ರಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಅವರು ಸಾಯದೇ ಇದ್ದಾಗ ಕೈ–ಕಾಲುಗಳನ್ನು ಕಟ್ಟಿಹಾಕಿ ಉಸಿರುಗಟ್ಟಿಸಿ ಕೊಂದಿದ್ದಾರೆ ಎಂದು ತಮಗೆ ಪೊಲೀಸರು ತಿಳಿಸಿರುವುದಾಗಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ.

ನಮ್ಮ ಸಾವಿಗೆ ಸಾಲವೇ ಕಾರಣ...

ಚೇತನ್ ಅವರು ಇಂಗ್ಲಿಷ್‌ನಲ್ಲಿ 3 ಪುಟಗಳ ಡೆತ್‌ನೋಟ್ ಬರೆದಿರುವುದಲ್ಲದೇ, 'ಗೊರೂರು ಫ್ಯಾಮಿಲಿ' ಎಂಬ ವಾಟ್ಸಾಪ್ ಗ್ರೂಪ್‌ಗೆ ತಾವು ಹಾಗೂ ತಮ್ಮ ಕುಟುಂಬದ ಸಾವಿನ ಬಗ್ಗೆ ವಾಯ್ಸ್ ರೆಕಾರ್ಡ್ ಅಪ್‌ಲೋಡ್ ಮಾಡಿದ್ದಾರೆ.

ಫ್ಲಾಟ್‌ಗಳ ಖರೀದಿಗಾಗಿ ತಾವು ಮಾಡಿರುವ ಸಾಲ ತೀರಿಸಲು ಸಾಧ್ಯವಾಗುತ್ತಿಲ್ಲ. ಹಣಕಾಸಿನ ತೊಂದರೆ ಅನುಭವಿಸುತ್ತಿದ್ದೇನೆ. ನನ್ನ ಸಾಲವೇ ನಮ್ಮ ಸಾವಿಗೆ ಕಾರಣ. ನಮ್ಮ ಸಾವಿನ ಸಂಬಂಧ ಕುಟುಂಬಸ್ಥರು ಹಾಗೂ ಸ್ನೇಹಿತರಿಗೆ ತೊಂದರೆ ಕೊಡಬೇಡಿ ಎಂಬ ಸಾರಾಂಶ ಡೆತ್‌ನೋಟ್ ಹಾಗೂ ವಾಯ್ಸ್ ರೆಕಾರ್ಡ್‌ನಲ್ಲಿ ಇದ್ದು ಕೊನೆಯದಾಗಿ ಐ ಆ್ಯಮ್ ಸಾರಿ ಎಂದು ಬರೆದಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಅದೇ ರೀತಿ ಇಂದು ಮುಂಜಾನೆ ಅಮೆರಿಕಾದಲ್ಲಿರುವ ಸಹೋದರ ಭರತ್‌ಗೆ ಚೇತನ್ ರವಾನಿಸಿರುವ ವಾಟ್ಸಾಪ್ ಸಂದೇಶದಲ್ಲಿ ನಾನು ಬಹಳ ಸಮಸ್ಯೆಗೆ ಸಿಲುಕಿದ್ದೇನೆ. ಕುಟುಂಬದ ಮೂವರೊಂದಿಗೆ ಹೋಗುತ್ತಿದ್ದೇನೆ ಎಂದು ಸಾವಿನ ಬಗ್ಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಪ್ರತಿಭಾನ್ವಿತ ಮೆಕ್ಯಾನಿಕಲ್ ಇಂಜಿನಿಯರ್; ದೇಶ–ವಿದೇಶದ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ!

ಮೈಸೂರು, ಫೆ. 17–ತಾಯಿ, ಪತ್ನಿ, ಪುತ್ರನನ್ನು ಕೊಂದು ಆತ್ಮಹತ್ಯೆಗೆ ಶರಣಾದ ಹಾಸನ ಜಿಲ್ಲೆ ಗೊರೂರು ಮೂಲದ ಚೇತನ್, ಮೆಕ್ಯಾನಿಕಲ್ ಇಂಜಿನಿಯರ್ ಪದವೀಧರರಾಗಿದ್ದು, ಸೌದಿ ಅರೇಬಿಯಾ ಸೇರಿದಂತೆ ಭಾರತದ ಹಲವು ಕಂಪನಿಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದವರು. ಹಾಲಿ ಪತ್ನಿ ಹೆಸರಿನಲ್ಲಿ ಏಜೆನ್ಸಿ ಮಾಡಿಕೊಂಡು ಮೈಸೂರನ್ನು ಕೇಂದ್ರ ಸ್ಥಾನವಾಗಿಸಿಕೊಂಡು ಉತ್ತರ ಭಾರತದಿಂದ ವಿದೇಶಕ್ಕೆ ಕಾರ್ಮಿಕರನ್ನು ಕಳುಹಿಸಿಕೊಡುವ ವ್ಯವಹಾರ ಮಾಡುತ್ತಿದ್ದರು. ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಫ್ಲಾಟ್‌ಗಳ ಒಡೆಯನಾಗಿದ್ದಲ್ಲದೇ, ನಿಸ್ಸಾನ್ ಕಾರು ಮತ್ತು ಥಾರ್ ಜೀಪನ್ನು ಹೊಂದಿದ್ದು, ಕುಟುಂಬದೊಂದಿಗೆ ಐಷಾರಾಮಿ ಬದುಕನ್ನೇ ನಡೆಸುತ್ತಿದ್ದರು.

2008ರಲ್ಲಿ ರೂಪಾಲಿಯವರನ್ನು ವಿವಾಹವಾಗುವ ಮುನ್ನ ಚೇತನ್, ಸೌದಿ ಅರೇಬಿಯಾದ ರಿಯಾದ್‌ನಲ್ಲಿರುವ ■ 6ನೇ ಪುಟಕ್ಕೆ

ಜೂನ್ ಇಲ್ಲವೇ ಜುಲೈನಲ್ಲಿ ಜಿಪಂ, ತಾಪಂ ಚುನಾವಣೆ



ಬೆಂಗಳೂರು, ಫೆ.17 (ಕೆಎಂಶಿ)– ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳನ್ನು ಮೇ ನಂತರ ನಡೆಸುವುದಾಗಿ ಸರ್ಕಾರ ಪ್ರಕಟಿಸಿದೆ.

ಸರ್ಕಾರದ ಈ ಹೇಳಿಕೆಯಿಂದ ಜಿಲ್ಲಾ ಹಾಗೂ ತಾಲೂಕು ಪಂಚಾಯತ್‌ಗಳಿಗೆ ಮೂರೂವರೆ ವರ್ಷಗಳ ಆಡಳಿತಾಧಿಕಾರಿಗಳ ಹಿಡಿತದಿಂದ ಮುಕ್ತಿ ದೊರೆಯಲಿದೆ.

ಎಲ್ಲಾ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಸರ್ಕಾರ ಸಿದ್ಧ: ಸಿಎಂ

ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆ ನಡೆಸಲು ಸರ್ಕಾರ ಸಿದ್ಧ ಎಂದಿದ್ದಾರೆ. ನ್ಯಾಯಾಲಯಕ್ಕೆ ಸರ್ಕಾರ ಚುನಾವಣೆ ನಡೆಸುವ ವಾಗ್ದಾನ ನೀಡಲಿದೆ ಎಂಬುದನ್ನು ಮೊದಲೇ ಅರಿತ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಿನ್ನೆ ಪಕ್ಷದ ಕಚೇರಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗುವಂತೆ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಜಿಲ್ಲಾ, ತಾಲೂಕು ಪಂಚಾಯತ್ ಅಲ್ಲದೆ, ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಉಳಿದ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಶಿವಕುಮಾರ್ ಇದೇ ಸಂದರ್ಭದಲ್ಲಿ ತಿಳಿಸಿದ್ದರು.

ಸ್ಥಳೀಯ ಸಂಸ್ಥೆಗಳಿಗೆ ಕಳೆದ ಮೂರೂವರೆ ವರ್ಷಗಳಿಂದ ಚುನಾವಣೆ ನಡೆಸದಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್‌ಗೆ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಈ ಮಾಹಿತಿ ನೀಡಿದ್ದಾರೆ.

ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಕ್ಷೇತ್ರಗಳಿಗೆ ಮೀಸಲಾತಿ ಪಟ್ಟಿಯನ್ನು ಸರ್ಕಾರ ನೀಡಿದರೆ, ಆಯೋಗ ಚುನಾವಣೆ ನಡೆಸಲು ಸಿದ್ಧ ಎಂದು ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ನ್ಯಾಯಾಲಯಕ್ಕೆ ತಿಳಿಸಿದರು. ಇದಕ್ಕೆ ಉತ್ತರ ನೀಡಿದ ಅಡ್ವೋಕೇಟ್ ಜನರಲ್, ಮೇ ತಿಂಗಳೊಳಗಾಗಿ ಮೀಸಲಾತಿ ಪಟ್ಟಿಯನ್ನು ಆಯೋಗಕ್ಕೆ ಒದಗಿಸಲಾಗುವುದು. ಜೂನ್



ಅಥವಾ ಜುಲೈನಲ್ಲಿ ಆಯೋಗ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬಹುದಾಗಿದೆ ಎಂದು ನೀಡಿದ ಹೇಳಿಕೆಯನ್ನು ನ್ಯಾಯಮೂರ್ತಿಗಳು ದಾಖಲಿಸಿಕೊಂಡು ಅರ್ಜಿ ಇತ್ಯರ್ಥಪಡಿಸಿದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ವೇಳೆ, ಸ್ಥಳೀಯ ಸಂಸ್ಥೆಗಳ ಅವಧಿ ಪೂರ್ಣಗೊಂಡಿದ್ದು ಚುನಾವಣೆ ನಡೆಸಬೇಕಿತ್ತು. ಆದರೆ, ಮೀಸಲಾತಿ ನಿಗದಿ ಗೊಂದಲವನ್ನು ಅಂದಿನ ಸರ್ಕಾರ ಹಾಗೂ ನಂತರದ ಸಿದ್ದರಾಮಯ್ಯ ಸರ್ಕಾರ ಪರಿಹರಿಸಿರಲಿಲ್ಲ.

ಮೀಸಲಾತಿ ಪಟ್ಟಿ ನೀಡದೆ ಚುನಾವಣೆ ನಡೆಸಲು ಆಯೋಗದಿಂದ ಸಾಧ್ಯವಾಗದ ಕಾರಣ ಸರ್ಕಾರದ ವಿರುದ್ಧ ಆಯೋಗ ನ್ಯಾಯಾಂಗನಿಂದನೆ ಅರ್ಜಿ ದಾಖಲಿಸಿತ್ತು.

ಮಾ.7ರಂದು ರಾಜ್ಯ ಬಜೆಟ್; ಜನರಿಗೆ ಹೊರೆ ಆಗದಂತೆ ನಿಗಾ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸದ ನುಡಿ



ಬೆಂಗಳೂರು, ಫೆ.17(ಕೆಎಂಶಿ)– ಮುಂಗಡಪತ್ರದಲ್ಲಿ ಜನರಿಗೆ ಹೊರೆಯಾಗದಂತೆ ನಿಗಾ ವಹಿಸಲಾಗುವುದು ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಮಾರ್ಚ್ 3ರಿಂದ ವಿಧಾನಮಂಡಲ ಅಧಿವೇಶನ ಕರೆಯಲು ತೀರ್ಮಾನಿಸಿದ್ದು 7ರಂದು 2025–26ನೇ ಸಾಲಿನ ಮುಂಗಡಪತ್ರ ಮಂಡಿಸಲಿದ್ದೇನೆ. ಬೆಲೆ ಏರಿಕೆಯಿಂದ ಜನರು ಕಂಗಾಲಾಗಿರುವುದನ್ನು ತಳ್ಳಿಹಾಕುವುದಿಲ್ಲ. ಏರಿಕೆ ಹೊರೆ ಇಳಿಸುವ ಹೊಣೆ ನಮಗಿಂತ ಕೇಂದ್ರ ಸರ್ಕಾರದ ಮೇಲಿದೆ. ಹಾಗೆಂದು ನಾವು ಸುಮ್ಮನಿರುವುದಿಲ್ಲ. ಇಳಿಕೆಗೆ ನಮ್ಮ ಪ್ರಯತ್ನವಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಮುಂಗಡಪತ್ರ ಮಂಡಿಸುವುದಾಗಿ ಹೇಳಿದರು.

ನನಗೆ ಕಾಲು ನೋವಿದ್ದರೂ ಬಜೆಟ್‌ನ ಪೂರ್ವಭಾವಿ ಸಿದ್ಧತೆ ಸಭೆಗಳನ್ನು ಸುದೀರ್ಘವಾಗಿ ನಡೆಸಿದ್ದೇನೆ. ಇಂದು ರೈತ ಸಂಘಟನೆಗಳ ಜೊತೆ ಸಮಾಲೋಚಿಸಿದ್ದು, ಕೃಷಿಗೆ ಸಂಬಂಧಿಸಿದಂತೆ ಅವರ ಅಭಿಪ್ರಾಯ ಪಡೆದಿದ್ದೇನೆ. ಮುಂಗಡಪತ್ರದಲ್ಲಿ ಕೃಷಿಗೂ ಹೆಚ್ಚು ಆದ್ಯತೆ ನೀಡುವುದಾಗಿ ತಿಳಿಸಿದರು.

ಈ ವರ್ಷದ ಮೊದಲ ಅಧಿವೇಶನ ಆಗಿರುವುದರಿಂದ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಮೂರು ದಿನಗಳ ಕಾಲ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ನಡೆಯಲಿದ್ದು, ನಾನು ಮಾ.7ರ ಶುಕ್ರವಾರದಂದು ಬಜೆಟ್ ಮಂಡಿಸಲಿದ್ದೇನೆ, ಬಜೆಟ್ ಮೇಲಿನ ಚರ್ಚೆ ನಂತರ ಉತ್ತರ ಕೊಡಲಿದ್ದೇನೆ ಎಂದರು.

ರೈತರ ಬೇಡಿಕೆಗೆ ಆದ್ಯತೆ

ಅತೀ ಹೆಚ್ಚು ಉದ್ಯೋಗ ಅವಲಂಬನೆ ಕೃಷಿ ಕ್ಷೇತ್ರದಲ್ಲಿ ಇರುವುದರಿಂದ, ರೈತರ ಬೇಡಿಕೆಗಳ ಈಡೇರಿಕೆ ಪ್ರಥಮ ಆದ್ಯತೆಯಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ತಾವೂ ರೈತ ಕುಟುಂಬದಿಂದ ಬಂದಿದ್ದು, ಸದಾ ಕೃಷಿಕರ ಪರವಾಗಿ ಇರುವುದಲ್ಲದೆ, ರೈತಾಪಿ



ಜನರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುತ್ತಲೇ ಬಂದಿದ್ದೇನೆ. ವಿಧಾನಸೌಧದಲ್ಲಿ 2025–26ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆ ವೇಳೆ, ವಿವಿಧ ರೈತ ಸಂಘದ ಮುಖಂಡರುಗಳ ಬೇಡಿಕೆಗಳ ಮನವಿ ಪತ್ರ ಸ್ವೀಕರಿಸಿದರು. ಅಲ್ಲದೇ, ರೈತರ ಹಿತ ಕಾಪಾಡಲು ಸರ್ಕಾರ ಸದಾ ಬದ್ಧವಾಗಿದೆ ಎಂದರು. ರೈತರನ್ನು ತೀವ್ರ ಸಂಕಷ್ಟಕ್ಕೆ ದೂಡುತ್ತಿರುವ ಹಾಗೂ ಭೂಮಿ, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿರುವ ಮೈಕ್ರೋ ಫೈನಾನ್ಸ್‌ಗಳ ಬಲವಂತದ ಸಾಲ ವಸೂಲಾತಿಗೆ ಸುಗ್ರೀವಾಜ್ಞೆ ಮೂಲಕ ಕಡಿವಾಣ ಹಾಕಿದ್ದಕ್ಕಾಗಿ ರೈತ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಉದಯಗಿರಿ ಪೊಲೀಸ್ ಠಾಣೆ ಗಲಭೆ ಪ್ರಕರಣ
ವಿವಾದಿತ ಪೋಸ್ಟ್ ಹಾಕಿದ್ದ ಆರೋಪಿಗೆ ಜಾಮೀನು

ಮೈಸೂರು, ಫೆ. 17– ಉದಯಗಿರಿ ಪೊಲೀಸ್ ಠಾಣೆ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಾದಿತ ಪೋಸ್ಟ್ ಹಾಕಿದ್ದ ಆರೋಪಿ ಸತೀಶ್ ಅಲಿಯಾಸ್ ಪಾಂಡುರಂಗ ಅವರಿಗೆ ಮೈಸೂರಿನ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸರೋಜಾ ಅವರು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದಾರೆ. ಆರೋಪಿ ಪರ ವಕೀಲ ಹ.ಮಾ ಭಾಸ್ಕರ್ ವಾದ ಮಂಡಿಸಿದ್ದರು.

ಏನಿದು ಕೇಸ್: ಫೆಬ್ರವರಿ 10ರಂದು ಅವಹೇಳನಕಾರಿ ಪೋಸ್ಟ್ ವಿಚಾರಕ್ಕೆ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಗುಂಪೊಂದು ಕಲ್ಲು ತೂರಾಟ ನಡೆಸಿತ್ತು ಅವಹೇಳನಕಾರಿ ಪೋಸ್ಟ್ ಹಾಕಿದ್ದ ಸತೀಶ್ ಅಲಿಯಾಸ್ ಪಾಂಡುರಂಗ ವಿರುದ್ಧ ಸುಮೋಟೋ ಕೇಸ್ ದಾಖಲಿಸಿದ್ದ ಪೊಲೀಸರು ಅವರನ್ನು ಬಂಧಿಸಿದ್ದರು. ಆತನ ಬಗ್ಗೆ ಪೊಲೀಸ್ ಅಧಿಕೃತ ಫೇಸ್‌ಬುಕ್‌ನಲ್ಲಿ ಮಾಹಿತಿಯನ್ನು ಮೈಸೂರು ನಗರ ಪೊಲೀಸರು ಹಂಚಿಕೊಂಡಿದ್ದರು.

ಸಿಎಂ ಸಿದ್ದರಾಮಯ್ಯ ಹೆಸರು ದುರ್ಬಳಕೆ ಮಾಡಿಕೊಂಡು ಸದಾಶಿವನಗರ, ಡಾಲರ್ಸ್ ಕಾಲೋನಿಯಲ್ಲಿ ನಾನೇನು ಎರಡೆರಡು ಮನೆ ಮಾಡ್ಕೊಂಡಿಲ್ಲ!

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಸಹಕಾರ ಸಚಿವ ರಾಜಣ್ಣ ತಿರುಗೇಟು ● ಡಿಕೆಶಿ ಎಐಸಿಸಿ ದುರ್ಬಳಕೆ ಮಾಡಿಕೊಳ್ಳುವುದನ್ನು ಮೊದಲು ಬಿಡಲಿ ● ಉಪಮುಖ್ಯಮಂತ್ರಿ ತಲೆ ಮೇಲೆ ಹೆಚ್ಚುವರಿ ಕಿರೀಟವೇನು ಇರಲ್ಲ ● ನಗರಪಾಲಿಕೆ ಚುನಾವಣೆ ಗೆಲ್ಲಲಾಗದೆ ಹಿಂಬಾಗಿಲಿಂದ ರಾಜ್ಯಸಭೆ ಸದಸ್ಯನಾಗಿರುವ ಅವನ್ಯಾರು ನನಗೆ ಎಚ್ಚರಿಕೆ ಕೊಡಲು: ಜಿ.ಸಿ.ಚಂದ್ರಶೇಖರ್ ವಿರುದ್ಧವೂ ವಾಗ್ದಾಳಿ

ಬೆಂಗಳೂರು, ಫೆ.17(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಸದಾಶಿವನಗರ, ಡಾಲರ್ಸ್ ಕಾಲೋನಿಯಲ್ಲಿ ಎರಡೆರಡು ಮನೆಗಳನ್ನು ಕಟ್ಟಿಕೊಂಡಿಲ್ಲ ಎಂದು ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದ್ದಾರೆ.

ನಿನ್ನೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯಾರೂ ಮುಖ್ಯಮಂತ್ರಿ ಸಿದ್ದರಾಮಯ್ಯರ ಹೆಸರು ದುರುಪಯೋಗಪಡಿಸಿಕೊಳ್ಳಬಾರದು ಎಂದು ಹೇಳಿದ್ದರು. ಇದಕ್ಕೆ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಯಾರ ಹೆಸರನ್ನೂ ದುರ್ಬಳಕೆ ಮಾಡಿಕೊಂಡಿಲ್ಲ. ಅವರು, ಎಐಸಿಸಿ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಬಿಡಲಿ. ಎಲ್ಲದಕ್ಕೂ ಎಐಸಿಸಿ ಹೇಳಿದೆ ಅಂತ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ವಾಸ್ತವ. ಇದು ನನ್ನ ಆರೋಪ ಅಲ್ಲ. ನಾನು ಯಾರಿಂದಲೂ ಶಿಸ್ತಿನ ಪಾಠ ಮಾಡಿಸಿಕೊಳ್ಳಬೇಕಿಲ್ಲ. ಐವತ್ತು ವರ್ಷ ಪಕ್ಷಕ್ಕೆ ಕೆಲಸ ಮಾಡಿದ್ದೇನೆ, ನಾನು ಮಾತನಾಡಿದರೆ ಸತ್ಪರಿಣಾಮ ಬೀರುವ ಮಾತನ್ನಾಡುತ್ತೇನೆಯೇ ಹೊರತು, ದುಷ್ಪರಿಣಾಮ ಬೀರುವ ಮಾತನ್ನಾಡಲ್ಲ. ಉಪಮುಖ್ಯಮಂತ್ರಿ ಸ್ಥಾನ ಅಂದರೆ, ತಲೆ ಮೇಲೆ



ಡಿ.ಕೆ.ಶಿವಕುಮಾರ್



ಕೆ.ಎನ್.ರಾಜಣ್ಣ

ಏನೋ ಹೆಚ್ಚುವರಿ ಕಿರೀಟ ಇರಲ್ಲ. ಅವರು, ಮುಖ್ಯಮಂತ್ರಿ ಪದದ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಹೇಳಿಕೆ ಅಷ್ಟೇ, ಎಚ್ಚರಿಕೆ ಅಲ್ಲ. ಎಚ್ಚರಿಕೆ, ಗಿಚ್ಚರಿಕೇ ಎಲ್ಲಾ ನಡೆಯಲ್ಲ, ಅವರ ಬೆದರಿಕೆಯನ್ನು ಯಾರು ಕೇಳುತ್ತಾರೆ. ನಾನು, ಅವರು ಸಾಕಷ್ಟು ವರ್ಷದ ಸ್ನೇಹಿತರು, ವಿಚಾರ ಭೇದ ಅಷ್ಟೇ, ವೈಯಕ್ತಿಕ ಏನೂ ಇಲ್ಲ. ವಿಧಾನಸೌಧಕ್ಕೆ ನಾನು ಒಂದು ದಾರಿಯಲ್ಲಿ ಬರುತ್ತೇನೆ, ಅವರು ಒಂದು ದಾರಿಯಲ್ಲಿ ಬರುತ್ತಾರೆ.

ಎಚ್ಚರಿಕೆ ನೀಡಲು ಅವನ್ಯಾರು: ನಗರಪಾಲಿಕೆ ಚುನಾವಣೆಗೆ ನಿಂತು 250 ಮತ ಪಡೆದು ಹಿಂಬಾಗಿಲಿನಿಂದ ರಾಜ್ಯಸಭಾ ಸದಸ್ಯರಾಗಿರುವ ಪಕ್ಷದ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್, ನಮಗೆ ಎಚ್ಚರಿಕೆ ನೀಡಲು ಅವನ್ಯಾರು ಎಂದು ಇದೇ ಸಂದರ್ಭದಲ್ಲಿ ಕಿಡಿಕಾರಿದರು.

ಶಿಶುಪಾಲ, ಕೃಷ್ಣ ಪುರಾಣ ಇದೆಲ್ಲಾ ನಾನು ನಂಬಲ್ಲ. ಪುರಾಣ ಎಲ್ಲಾ ಕಟ್ಟುಕಥೆ, ರಾಜ್ಯಸಭೆ, ವಿಧಾನಪರಿಷತ್ತಿಗೆ ಕಳಿಸುವಂತಹವರು ಪಕ್ಷಕ್ಕೆ ಮತ ತಂದು ಕೊಡುವಂತಿರಬೇಕು, ಚಂದ್ರಶೇಖರ್ ಅಂತಹವರು ಪಕ್ಷಕ್ಕೆ ಹೊರೆ. ಅವರ ಹಿನ್ನೆಲೆ ಏನು, ಕಾರ್ಪೋರೇಷನ್ ಚುನಾವಣೆಯಲ್ಲಿ ಅವರಿಗೆ ಎಷ್ಟು ಮತ ಬಂದಿದೆ, ಇಂತಹವರು ನಮಗೆ ಬುದ್ಧಿ ಹೇಳಲು ಬರುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜ್ಞಾನೇಶ್‌ಕುಮಾರ್ ಮುಖ್ಯ ಚುನಾವಣಾ ಆಯುಕ್ತ

ನವದೆಹಲಿ, ಫೆ.17–ಹಿರಿಯ ಐಎಎಸ್ ಅಧಿಕಾರಿ ಜ್ಞಾನೇಶ್ ಕುಮಾರ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿದೆ. ನಿವೃತ್ತಿ ಹೊಂದುತ್ತಿರುವ ರಾಜೀವ್ ಕುಮಾರ್ ಅವರ ಸ್ಥಾನದಲ್ಲಿ ಜ್ಞಾನೇಶ್ ಕುಮಾರ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿದ್ದು, ಚುನಾವಣಾ ಆಯುಕ್ತರ ನೇಮಕಾತಿ ಕುರಿತ ಹೊಸ ಕಾನೂನಿನಡಿಯಲ್ಲಿ ನೇಮಕಗೊಂಡ ಮೊದಲ ಸಿಇಸಿ ಕುಮಾರ್ ಆಗಿದ್ದಾರೆ. ಇದು ಚುನಾವಣಾ ಆಯೋಗದ ಮುಖ್ಯಸ್ಥರ ಆಯ್ಕೆ ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿಗಳ ಬದಲಿಗೆ ಗೃಹ ಸಚಿವರನ್ನು ನೇಮಿಸಿತು. ಇಂದು ಬೆಳಗ್ಗೆ ಸಭೆ ಸೇರಿದ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನೊಳಗೊಂಡ ಆಯ್ಕೆ ಸಮಿತಿಯು ಅವರ ಹೆಸರನ್ನು ಅಂತಿಮಗೊಳಿಸಿ ರಾಷ್ಟ್ರಪತಿಗೆ ಶಿಫಾರಸು ಮಾಡಿತು.



ನಕ್ಕರೆ ಅದೇ ಸ್ವರ್ಗ

ಮಗು : ಅಪ್ಪ ಇಲ್ಲಿ ಬಾ
ಅಮ್ಮ : ಈ ತರ ಅಪ್ಪನನ್ನು ಕರೆಯಬಾರದು. ಮರ್ಯಾದೆಯಿಂದ ಕರೆಯಬೇಕು.
ಮಗು : ಅಪ್ಪ ಮರ್ಯಾದೆಯಿಂದ ಇಲ್ಲಿ ಬಾ

ಮೈಸೂರು ಮಿತ್ರ
ಮಂಗಳವಾರ, 18 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ವಿದೇಶಕ್ಕೆ ದುಡ್ಡು ಮಾಡಲು ಹೋಗಿ ಜಡ್ಡು ತರುವುದಕ್ಕಿಂತ... ಸ್ವದೇಶಕ್ಕೆ ದುಡಿದು ವಿದೇಶಕ್ಕೆ ಸೆಡ್ಡು ಹೊಡಿ ಎಂದ ಸರ್ವಜ್ಞ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.


ನಿಮ್ಮ ಪತ್ರಗಳು

■ ಸರ್ಕಾರ ವಿಶ್ವವಿದ್ಯಾಲಯಗಳ ಮುಚ್ಚುವುದೇಕೆ?

ಮಾನ್ಯರೆ,

ಪ್ರತಿಯೊಬ್ಬರು ವಿದ್ಯಾವಂತರಾಗಿ ಸಮಾಜದ ಉನ್ನತಿಗೆ ಕಾರಣರಾಗಬೇಕು. ವಿದ್ಯಾವಂತರಾಗಿ ಉನ್ನತ ಶಿಕ್ಷಣ ಪಡೆದರೆ ವಿವೇಕದಿಂದ ಬಾಳುತ್ತಾರೆ ಎಂಬ ನಂಬಿಕೆ. ಆದರೆ ರಾಜ್ಯದಲ್ಲಿ ಈಗಿರುವ ಒಂಬತ್ತು ವಿಶ್ವವಿದ್ಯಾಲಯಗಳು ಮುಚ್ಚುವುದಾಗಿ ನಿರ್ಧರಿಸಿದ್ದಾರೆ. ಇದು ವಿಶೇಷವಾಗಿ ಹೆಣ್ಣು ಮಕ್ಕಳ ಮೇಲೆ ಮಾನಸಿಕವಾಗಿ ಪರಿಣಾಮ ಬೀರುತ್ತಿದೆ. ವಿಶ್ವವಿದ್ಯಾಲಯ ಮುಚ್ಚಲು ಕಾರಣವೇನು? ವಿಶ್ವವಿದ್ಯಾಲಯದ ಕುಂದುಕೊರತೆ ನೀಗಿಸಲು ವಿಫಲರಾಗಿದ್ದಾರೆಯೇ ಈ ವಿಶ್ವವಿದ್ಯಾಲಯ ಮುಚ್ಚುವುದರಿಂದ ವಿದ್ಯಾರ್ಥಿಗಳ ಕನಸು ಭಂಗವಾಗುವುದಿಲ್ಲವೇ. ಜೀವನ ಕಟ್ಟಿಕೊಳ್ಳಲು ಉನ್ನತ ವಿದ್ಯಾಭ್ಯಾಸದ ಕನಸು ಕಾಣುತ್ತಿರುತ್ತಾರೆ. ವಿದ್ಯಾಭ್ಯಾಸಕ್ಕೆ ಕಲ್ಲು ಹಾಕುವ ಪ್ರಯತ್ನ ಏಕೆ? ಜನರು ವಿದ್ಯಾವಂತರಾಗಿ ಸಮಾಜದ ಏಳಿಗೆಗೆ ಕಾರಣರಾಗುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಯೋಚನೆಯನ್ನು ಕೈಬಿಡಿ. ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ವಿಶ್ವವಿದ್ಯಾಲಯಕ್ಕೆ ಮನ್ನಣೆ ನೀಡಿ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



■ ಕೋತಿ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ವಿಶ್ವೇಶ್ವರನಗರದ ಜಾಕಿ ಫ್ಯಾಕ್ಟರಿ ರಸ್ತೆಯಲ್ಲಿ ಹಲವಾರು ಅಪಾರ್ಟ್‌ಮೆಂಟ್‌ಗಳು ಹಾಗೂ ಶಾಲಾ–ಕಾಲೇಜುಗಳಿದ್ದು, ಇಲ್ಲಿ ಹಲವಾರು ದಿನಗಳಿಂದ ಕೋತಿಗಳ ಹಾವಳಿ ವಿಪರೀತವಾಗಿದೆ. ಇಲ್ಲಿಯ ನಾಗರಿಕರು ಇನ್ನಿಲ್ಲದ ತೊಂದರೆ ಅನುಭವಿಸುವಂತಾಗಿದೆ.

ಕಳೆದ ಎರಡು ಮೂರು ವರ್ಷಗಳ ಹಿಂದೆ ಇದೇ ರೀತಿ ಕೋತಿಗಳ ಹಾವಳಿಯಿಂದ ಜನ ತತ್ತರಿಸಿದ್ದು, ನಂತರ ನಗರಪಾಲಿಕೆಗೆ ಹಲವಾರು ದೂರುಗಳನ್ನು ಸಲ್ಲಿಸಿದ ನಂತರ ಸಂಬಂಧಪಟ್ಟವರು ಅವುಗಳನ್ನು ಹಿಡಿದು ಬೇರೆ ಕಡೆ ಸಾಗಿಸಿದ ನಂತರ ಇಲ್ಲಿಯ ಜನರು ನಿಟ್ಟುಸಿರುಬಿಡುವಂತಾಗಿತ್ತು. ಪುನಃ ಅವುಗಳ ಕಾಟ ಜಾಸ್ತಿಯಾಗಿದ್ದು, ಈ ಸ್ಥಳದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಿರುವ ಹಿರಿಯ ನಾಗರಿಕರು ಹಾಗೂ ಶಾಲೆಗೆ ಹೋಗಿ ಬರುವ ಮಕ್ಕಳು ಇವುಗಳ ದಾಳಿಯಿಂದ ತೊಂದರೆ ಅನುಭವಿಸುವಂತಾಗಿದೆ. ಹೆಚ್ಚಾಗಿ ಕೋತಿಗಳು ಬೆಳಗ್ಗೆಯಿಂದ ಸಂಜೆವರೆವಿಗೂ ಬಹುತೇಕ ಅಪಾರ್ಟ್‌ಮೆಂಟ್‌ಗಳನ್ನು ತಮ್ಮ ವಾಸಸ್ಥಾನ ಮಾಡಿಕೊಂಡಿದ್ದು, ಪ್ರತಿದಿನವೂ ಒಂದಲ್ಲ ಒಂದು ಮನೆಯ ಕಿಟಕಿ ಹಾಗೂ ಬಾಗಿಲುಗಳ ಮೂಲಕ ಒಳನುಗ್ಗಿ ಮನೆಗಳಲ್ಲಿ ಸಿಗುವ ಹಣ್ಣು–ಹಂಪಲು ಮತ್ತು ಅಡಿಗೆಮನೆಗಳಲ್ಲಿರುವ ಆಹಾರ ಪದಾರ್ಥಗಳನ್ನು ತಿನ್ನುವುದಲ್ಲದೆ ಕೈಗೆ ಸಿಕ್ಕ ಆಹಾರ ಪದಾರ್ಥಗಳನ್ನು ಹಾಗೂ ಗ್ಲಾಸ್‌ಗಳನ್ನು ಮೇಲಿನಿಂದ ಎಸೆದು ಇಡೀ ಅಪಾರ್ಟ್‌ಮೆಂಟ್‌ನ ಸ್ಥಳಗಳನ್ನು ಗಲೀಜು ಮಾಡುತ್ತಿವೆ.

ಒಂದು ರೀತಿ ಭಯಭೀತ ವಾತಾವರಣ ಸೃಷ್ಟಿಯಾಗಿದೆ. ಈ ಮೂಲಕ ಮೈಸೂರು ಮಹಾನಗರಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಕೋತಿಗಳ ಹಾವಳಿ ತಪ್ಪಿಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇಲ್ಲಿಯ ನಿವಾಸಿಗಳ ಕಳಕಳಿಯ ಮನವಿ.

–ಜಿ.ಎಸ್.ಗಣೇಶ್‌ರಾವ್, ತಪೋವನ ಅಪಾರ್ಟ್‌ಮೆಂಟ್, ವಿಶ್ವೇಶ್ವರನಗರ, ಮೈಸೂರು.

■ ಕಸ ವಿಲೇವಾರಿ ಮಾಡಿ

ಮಾನ್ಯರೆ,

ಮೈಸೂರಿನಲ್ಲಿ ಇತ್ತೀಚೆಗೆ ಯಾವ ರಸ್ತೆಗೆ ಹೋದರೂ ಪ್ಲಾಸ್ಟಿಕ್ ಒಳಗೊಂಡಂತೆ



ಕಸದ ರಾಶಿ ಕಂಡು ಬರುತ್ತಿದೆ. ಒಂದು ಸಮಯದಲ್ಲಿ ಸ್ವಚ್ಛ ನಗರವಾಗಿದ್ದ ಮೈಸೂರು ಬರಬರುತ್ತಾ ಕಸದ ನಗರ ಆಗುತ್ತಿದೆ. ಈ ಮೊದಲು ನಗರಪಾಲಿಕೆ ವ್ಯಾಪ್ತಿಯ ಪ್ರತಿ ವಾರ್ಡಿನಲ್ಲಿ ಪ್ರತಿ ಇಂತಿಷ್ಟು ರಸ್ತೆಗಳಿಗೆ ಒಂದು ಕಸದ ಕಂಟೇನರ್ ಇರುತ್ತಿತ್ತು. ಅದರಲ್ಲಿ ಜನ ಕಸ ತಂದು ಹಾಕುತ್ತಿದ್ದರು. ಆದರೆ ಈಗ ಆ ಸೌಲಭ್ಯ ಇಲ್ಲ.

ಪಾಲಿಕೆ ಪೌರಕಾರ್ಮಿಕರು ಮನೆ ಮನೆಗೆ ಬಂದು ಕಸವನ್ನು ಸಂಗ್ರಹಿಸುತ್ತಿದ್ದಾರೆ. ಆದರೆ ಹಸಿ ಕಸ ಒಣ ಕಸ, ವಿಂಗಡಣೆ ಮಾಡಿ ಕೊಡದವರ ಬಳಿ ಪೌರಕಾರ್ಮಿಕರು ಕಸ ತೆಗೆದುಕೊಳ್ಳದ ಕಾರಣ, ಹಳೆ ಅಭ್ಯಾಸದಿಂದ ಕಸದ ವ್ಯಾನ್ ಬಂದಾಗ ಕಸ ಕೊಡುವ ಬದಲು, ಕಂಡ ಕಂಡ ರಸ್ತೆ ಬದಿಯೇ ಕಸ ಹಾಕಿ ಹೋಗುತ್ತಿದ್ದಾರೆ.

ಅದರ ಪರಿಣಾಮ ಪ್ಲಾಸ್ಟಿಕ್ ಮಿಶ್ರಿತ ಹಸಿ ಕಸವನ್ನು ಹಸುಗಳು, ನಾಯಿಗಳು ತಿಂದು ಆರೋಗ್ಯ ಹಾಳುಮಾಡಿಕೊಳ್ಳುತ್ತಿವೆ. ಈ ರೀತಿ ರಸ್ತೆ ಬದಿಯ ಕಸವನ್ನು ಪೌರಕಾರ್ಮಿಕರು ಒಂದು ಕಡೆ ಸೇರಿಸಿ ಅದನ್ನು ಕಸದ ವ್ಯಾನ್‌ಗೆ ಹಾಕಿ ಸಾಗಿಸುವ ಬದಲು ಅಲ್ಲೇ ಬೆಂಕಿ ಹಚ್ಚುವುದು ಹೆಚ್ಚಾಗಿದೆ. ಪ್ಲಾಸ್ಟಿಕ್ ಕಸಕ್ಕೆ ಬೆಂಕಿ ಹಚ್ಚಿ ಅದು ಮಾಲಿನ್ಯಕ್ಕೆ ಕಾರಣ ಆಗುವುದರ ಜೊತೆಗೆ ಪಕ್ಕದಲ್ಲಿ ಇರುವ ರಸ್ತೆ ಬದಿ ಮರಗಳು ಬೆಂಕಿಗೆ ಆಹುತಿಯಾಗುತ್ತಿವೆ.

ಹಾಗಾಗಿ ಸಾರ್ವಜನಿಕರು ಕಸವನ್ನು ಮನೆ ಮನೆಗೆ ಬರುವ ಪೌರಕಾರ್ಮಿಕರಿಗೆ ನೀಡಿದರೆ ನಗರದ ಮಾಲಿನ್ಯ, ಬೀದಿ ಬದಿಯ ನಾಯಿಗಳು, ಹಸುಗಳ ಆರೋಗ್ಯ ಕಾಪಾಡಿದಂತೆಯೂ ಆಗುತ್ತದೆ. ಜೊತೆಗೆ ಈ ಬಗ್ಗೆ ನಗರಪಾಲಿಕೆಯ ಪೌರ ಕಾರ್ಮಿಕರಿಗೆ ಮಾರ್ಗದರ್ಶನ ನೀಡಿ, ನಗರದ ಸ್ವಚ್ಛತೆಗೆ ಬೇಕಾದ ಎಲ್ಲಾ ಎಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ ಮನವಿ. ಈ ಬಗೆಯ ಕ್ರಮದಿಂದ ಸ್ವಚ್ಛತೆ ಒಂದೇ ಅಲ್ಲ, ನಗರದ ಮರಗಳ ನಾಶವು ತಪ್ಪಿದಂತೆ ಆಗುತ್ತದೆ.

–ದಯಾನಂದ, ಕುವೆಂಪುನಗರ, ಮೈಸೂರು.

■ ಬಿಎಸ್‌ಎನ್‌ಎಲ್ ಸಾಧನೆ ಸ್ವಾಗತಾರ್ಹ

ಮಾನ್ಯರೆ,

ಭಾರತೀಯ ಸಂಚಾರ ನಿಗಮ ನಿಯಮಿತ (ಬಿಎಸ್‌ಎನ್‌ಎಲ್) ಸಾರ್ವಜನಿಕ ಉದ್ದಿಮೆ (ಸರ್ಕಾರಿ ಉದ್ದಿಮೆ) ಕಳೆದ 2024–25ನೇ ಸಾಲಿನ ವಿತ್ತೀಯ ವರ್ಷದ 3ನೇ ತ್ರೈಮಾಸಿಕದಲ್ಲಿ 262 ಕೋಟಿ ರೂಪಾಯಿಗಳ ಲಾಭ ಗಳಿಸಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. 17 ವರ್ಷಗಳ ನಂತರ ಲಾಭದ ಮುಖ ನೋಡುತ್ತಿರುವ ಈ ಕಂಪನಿ ಸಾಕಷ್ಟು ಏಳು–ಬೀಳುಗಳನ್ನು ಕಾಣುತ್ತಾ ಬಂದಿದೆ. ನಿರಂತರವಾದ ನಷ್ಟ ಈ ಕಂಪನಿಯ ಭವಿಷ್ಯವನ್ನೇ ಅಂಧಕಾರವನ್ನಾಗಿಸಿತ್ತು ಒಂದು ಹಂತದಲ್ಲಿ ಈ ಕಂಪನಿ ಮುಚ್ಚೇ ಹೋಗುತ್ತದೆ ಎಂಬ ಗುಲ್ಲು ಸಹ ಎದ್ದಿತ್ತು. ಈ ಕಂಪನಿಯ ಸಾವಿರಾರು ನೌಕರರು ಸ್ವಯಂ ನಿವೃತ್ತಿ ಪಡೆದು ಕೊಂಡಿದ್ದಾರೆ. ವಿದೇಶಿ ಹಾಗೂ ದೇಶೀಯ ಟೆಲಿಕಾಂ ಕಂಪನಿಗಳ ತೀವ್ರ ಸ್ಪರ್ಧೆಯನ್ನು ಎದುರಿಸಲಾಗದೇ ವಿಲವಿಲನೇ ಒದ್ದಾಡುತ್ತಿದ್ದ ಈ ಕಂಪನಿಯ ನೆರವಿಗೆ ಧಾವಿಸಿದ್ದ ಕೇಂದ್ರ ಸರ್ಕಾರ ಸಾಕಷ್ಟು ಅನುದಾನ ನೀಡಿ, ಈ ಕಂಪನಿಯನ್ನು ಒಂದು ಹಂತಕ್ಕೆ ತಂದು ನಿಲ್ಲಿಸಿದೆ. ಈ ಕಂಪನಿಯ ಸಾಧನೆ ನಿಜಕ್ಕೂ ಅಭಿನಂದನೀಯ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಈ ಮಾನವ ಸಮಯದ ಗೊಂಬೆ

> “ಸೋಲಿನ ಸುಳಿಗೆ ಸಿಕ್ಕ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಆರಂಭಿಸಿದಾಗ 'ಒನ್ ಮ್ಯಾನ್ ಆರ್ಮಿ'ಯ ಥರ ತಾನೊಬ್ಬನೆ ಕನಸು ಕಾಣಬೇಕು! ಕಂಡ ಕನಸನ್ನು ತಾನೊಬ್ಬನೇ ಬೆನ್ನತ್ತಬೇಕು. 'ಗುರಿ ಮುಟ್ಟುವ ತನಕ ನಿಲ್ಲದಿರಿ' ಅಂತ ಸ್ವಾಮಿ ವಿವೇಕಾನಂದ ಅವರು ಹೇಳಿದ ಮಾತು ಸ್ಲೋಗನ್ನಿಗಾಗಿ ಅಲ್ಲ. ಎಚ್ಚರ ತಪ್ಪಿದವರಿಗೆ, ದಾರಿ ತಪ್ಪಿದವರಿಗೆ, ಕನಸು ಕಂಡವರಿಗೆ ಎಲ್ಲರಿಗೂ ಅನ್ವಯಿಸುವ ಆಪತ್ಕಾಲದ ಮಾತದು.

ಗಣಿಯೋದು ಪುಸ್ತಕ ಜ್ಞಾನ ನಿನ್ನನುಭವವೇ ನಿನಗೆ ದರುಮದೀಪ ಮಂಕುತಿಮ್ಮ ಅಂತ ಡಿ.ವಿ.ಜಿ. ಅವರು ಬರೆದ ಸಾಲುಗಳು ನನ್ನನ್ನು ಬಹಳ ದಿನಗಳ ಕಾಲ ಕಾಡಿದೆ. ಕಾರಣ ಇಷ್ಟೆ, ನಮ್ಮ ಓದಿನ ವಿಸ್ತಾರ ಕೊಡುವ ಅನುಭವಕ್ಕೂ ನಮ್ಮದೇ ಜೀವನದಲ್ಲಿ ನಾವು ಕಂಡುಂಡ ಅನುಭವಗಳಿಗೂ ಯಾವ ವಿಶ್ವವಿದ್ಯಾನಿಲಯದ ಸಿಲಬಸ್ಸುಗಳಿಗೂ ಕಮ್ಮಿ ಇರುವುದಿಲ್ಲ. ಜೀವನ ಕಲಿಸಿದ ಪಾಠಗಳೇ ನಮ್ಮ ಕಲಾಸೃಷ್ಟಿಗೆ ತಾಯಿಬೇರು.

ಈ ಬದುಕು ನಮಗೆ ಎಂತೆಂಥಾ ಚಿತ್ರ–ವಿಚಿತ್ರವಾದ ಸನ್ನಿವೇಶಗಳನ್ನು ತಂದೊಡ್ಡುತ್ತದೆ. ಅಂದರೆ ಅವು ಊಹಿಸಲೂ ಸಾಧ್ಯವಾಗದ ಪರಮಾಶ್ಚರ್ಯಗಳು, ಹಾಗೆಯೇ ಎಂದೂ ಮರೆಯದ ದುರಂತ ದುಮ್ಮಾನಗಳು, ನಮ್ಮನ್ನು ಅನಂತವಾಗಿ ಕಾಡುತ್ತವೆ. ಪ್ರೀತಿ ಮಾಡಿದ ಹುಡುಗಿಯನ್ನು ಮದುವೆಯಾಗಲು ಒಪ್ಪದ ತಂದೆ–ತಾಯಿಗಳನ್ನು ಅವರದ್ದೇ ದುಡ್ಡಿನಿಂದ ಸುಪಾರಿ ಕೊಟ್ಟು ಕೊಲ್ಲಿಸುವ ಮಕ್ಕಳು ಹುಟ್ಟಿರುವ ವಿಲಕ್ಷಣದ ಅಮಾನವೀಯವಾದ ಕಾಲದಲ್ಲಿ ನಾವು ಬದುಕುತ್ತಿದ್ದೇವೆ.

ಕಾಸು ಕೊಡದಿದ್ದರೆ ಮೊಮ್ಮಗ ಇಲ್ಲಿ ಅಜ್ಜಿಯನ್ನೇ ಕೊಲ್ಲುತ್ತಾನೆ. ಆಸ್ತಿ ಕೊಡದಿದ್ದರೆ, ಮಗ ಅಪ್ಪನನ್ನೇ ಕೊಲ್ಲುತ್ತಾನೆ. ಹೆತ್ತ ಮಗಳೇ ಹೆತ್ತವರ ಮೇಲೆ ಕೇಸು ಹಾಕಿ ಕೋರ್ಟಿನ ಗೇಟಿನ ಮುಂದೆ ಗಂಡನೊಡನೆ ನಿಂತು, ಆಟೋದಲ್ಲಿ ಬಂದಿಳಿಯುವ ತಂದೆ–ತಾಯಿಯರನ್ನು ದುರುಗುಟ್ಟಿ ನೋಡುತ್ತಾಳೆ. ಹೇಗಿದೆ ನೋಡಿ ಬದುಕಿನ ಅಳತೆಗೋಲು! ಒಂದು ಅಳತೆಯ ಬದುಕು ತಾನು ತೀರುವವರೆಗೆ ಇಂಥದ್ದನ್ನೇ ಕರುಣಿಸುತ್ತೆ ಅಂತ ಯಾರೂ ಊಹಿಸಲು ಸಾಧ್ಯವಾಗುವುದಿಲ್ಲ.

ಎದ್ದಕೂಡಲೇ ಗೆಲುವಿನ ಮೆಟ್ಟಿಲ ಕಡೆಗೇ ಓಡುವ ನಮ್ಮ ಬೆನ್ನ ಹಿಂದೆ ಸೋಲೆಂಬ ಕಠಾರಿವೀರ ನಮ್ಮನ್ನು ಮುಗಿಸುವ ಹುನ್ನಾರದಿಂದಲೇ ಹಿಂಬಾಲಿಸುತ್ತಾನೆ. ಸೋಲಿನ ಬೀಸುಕತ್ತಿಗೆ ಕುತ್ತಿಗೆ ಕೊಡದವರು ಓಡುತ್ತಲೇ ಇರುತ್ತಾರೆ. ಓಡಿ ದಡ ಸೇರಿದವರ ಆತ್ಮಚರಿತ್ರೆಗಳನ್ನೊಮ್ಮೆ ಕಣ್ಣಾಡಿಸಿ ನೋಡಿ! ಅಲ್ಲಿ ನಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡುವ ಕೆಲವು ಸತ್ಯಗಳಿರುತ್ತವೆ. ಶರಣಕುಮಾರ ಲಿಂಬಾಳೆ ಬರೆದ 'ಅಕ್ರಮ ಸಂತಾನ' ಕೃತಿಯನ್ನು ಓದಿದ ದಿನ ನನಗೆ ಹಾಗನ್ನಿಸಿದ್ದು ನಿಜ. ಬಡತನ ಅನ್ನೋದು ತಾಯ್ತನವನ್ನೇ ಅಡವಿಟ್ಟುಬಿಡುತ್ತದೆ. ಸೋಲಿನ ಎಡವಟ್ಟುಗಳು ನಮ್ಮನ್ನು ಎಲ್ಲಿಗೆ ಕರೆತಂದು ನಿಲ್ಲಿಸಿಬಿಡುತ್ತವೆಂದರೆ ಅವು ನಮ್ಮ ಕ್ಯಾರೆಕ್ಟರ್ ಸರ್ಟಿಫಿಕೇಟಿಗೆ ಸಹಿ ಹಾಕಿ ಹತ್ತೂ ಜನಗಳ ಮಧ್ಯೆ ನಮ್ಮನ್ನು ನಿಲ್ಲಿಸಿ ಕೇಕೆ ಹಾಕಿ ನಕ್ಕು ಬಿಡುತ್ತವೆ. ಅಂಥದೊಂದು ಮನಕಲಕಿದ ಪ್ರಸಂಗಕ್ಕೆ ಸಾಕ್ಷಿಯಾದದ್ದು ಬಡತನವೆಂಬ ಸೋಲಿಗೆ.

ವೃತ್ತಿಯಲ್ಲಿ ನಾನು ಬಹಳಷ್ಟು ವರ್ಷಗಳ ಕಾಲ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದೆ. ಸಾಂಸ್ಕೃತಿಕ ಆಸಕ್ತಿ ನನ್ನ ಪ್ರವೃತ್ತಿ. ಆಗ ಪಿ.ಯು.ಸಿ ಮಕ್ಕಳಿಗೆ ಬೋಧಿಸುವ ನನ್ನ ಕಣ್ಣುಗಳ ತುಂಬಾ ಆ ಮಕ್ಕಳ ಕನಸು ಟಿಸಿಲೊಡೆಯುತ್ತಿತ್ತು. ಬಹುಶಃ ಪ್ರತಿಯೊಬ್ಬ ಬೋಧಕನ ಮನಸ್ಥಿತಿ ಹಾಗೆಯೇ ಇರುತ್ತದೆ ಅಂತ ಕಾಣುತ್ತೆ. ನಮ್ಮ ಮುಂದೆ ಕಾಣುವ ನಮ್ಮ ವಿದ್ಯಾರ್ಥಿಗಳು ಡಾಕ್ಟರಾಗಬೇಕು! ಎಂಜಿನಿಯರ್ ಆಗಬೇಕು! ಅಧಿಕಾರಿ ಆಗಬೇಕು! ಪ್ರೊಫೆಸರ್ ಆಗಬೇಕು. ಹೀಗೆ ಇನ್ನೂ ಏನೇನೋ ಆಗಬೇಕು! ಎನ್ನುವ ಅದಮ್ಯ ಉತ್ಸಾಹದಲ್ಲಿ ಅವರಿಗೆ ಸ್ಫೂರ್ತಿ ತುಂಬುತ್ತಿರುತ್ತೇವೆ. ಆದರೆ ಈ ಬದುಕೆಂಬ ಬಿಸಿಲುಕುದುರೆ ವರ್ತಮಾನದ ಈ ಆವರ್ತದಲ್ಲಿ ಎಂತೆಂಥ ಅನಿರೀಕ್ಷಿತ ಘಟನೆಗಳನ್ನು ಸೃಷ್ಟಿಸುತ್ತಿರುತ್ತದೆಯೆಂದರೆ ನಮ್ಮ ನಮ್ಮ ಆತ್ಮಚರಿತ್ರೆಯ ಪುಟಗಳಲ್ಲಿ ಅದು ಅಳಿಸಲಾರದ ಅಕ್ಷರದಂತೆಯೇ ಉಳಿದುಬಿಡುತ್ತದೆ.

ಈಗ್ಗೆ ಸ್ವಲ್ಪ ವರ್ಷಗಳ ಹಿಂದೆ ಮೈಸೂರಿನ ಕಲಾಮಂದಿರದಲ್ಲಿ ಆಶಾ ಕಾರ್ಯಕರ್ತೆಯರ ದಕ್ಷಿಣ ಭಾರತದ ಸಮಾವೇಶ ನಡೆಯುತ್ತಿತ್ತು. ವೇದಿಕೆಯ ಮೇಲೆ ಡೊಳ್ಳು ಕುಣಿತ, ನಗಾರಿ, ಕೇರಳದ ಕಳರಿಪಯಟ್ ಮುಂತಾದ ಬೇರೆ ಬೇರೆ ಕಲಾ ಪ್ರಕಾರಗಳು ಪ್ರದರ್ಶನಗೊಳ್ಳುತ್ತಿದ್ದವು. ಆಸಕ್ತಿಯಿಂದ ಅದನ್ನು ನನ್ನ ಮಿತ್ರನೊಬ್ಬ ನೋಡಲು ತೆರಳಿದ್ದ. ನನಗಿದ್ದ ಸಾಂಸ್ಕೃತಿಕ ಆಸಕ್ತಿ ಆತನಿಗೆ ಗೊತ್ತಿದ್ದರಿಂದ; ಕಾರ್ಯಕ್ರಮ ತುಂಬಾ ಚೆನ್ನಾಗಿದೆ ನೀನು ನೋಡಬೇಕು! ತುಂಬಾ ಖುಷಿಪಡ್ತೀಯಾ ಬಾ ಅಂತ ಕರೆದ. ನಾನು ಹೋಗುವಷ್ಟರಲ್ಲಿ ಈವೆಂಟುಗಳು ಇನ್ನೇನು ಮುಗಿದೇ ಹೋಗುವ ಹಂತದಲ್ಲಿ ಇದ್ದವು. ನಾನು ಹೋದಾಗ ತಮಿಳುನಾಡಿನಿಂದ ಬಂದ ಲೈಂಗಿಕ ಅಲ್ಪಸಂಖ್ಯಾತರ ದೇವರ ಕುಣಿತವೊಂದು ನಡೆಯುತ್ತಿತ್ತು. ಅದಾದ ಮೇಲೆ ನಾನು ಮತ್ತು ನನ್ನ ಗೆಳೆಯ ಒಂದಷ್ಟು ಜನ ಪತ್ರಕರ್ತ ಸ್ನೇಹಿತರು ಎದ್ದು ಹೊರಟೆವು.

ನಮ್ಮ ಮುಂದೆ ಒಂದಷ್ಟು ಹೆಣ್ಣು ಮಕ್ಕಳು ಗುಂಪಿನಲ್ಲಿ ಮಾತಾಡಿಕೊಂಡು ಮುಂದೆ ಮುಂದೆ ಹೋಗುತ್ತಿದ್ದರು. ಕಲಾಮಂದಿರದ ತುಂಬೆಲ್ಲಾ ಆಶಾ ಕಾರ್ಯಕರ್ತೆಯರೇ ತುಂಬಿಹೋಗಿದ್ದರು. ಅದು ಅವರದ್ದೇ ಸಮಾವೇಶ. ಆ ಜನಜಂಗುಳಿಯ ನಡುವೆ ತಾವು ಅಲ್ಲಿಗೆ ಹೋಗಿದ್ದು ಗೊತ್ತಾಗ ಬಾರದೆಂಬಂತೆ ಕೆಲವರು ತಲೆತಗ್ಗಿಸಿಕೊಂಡು ಹೋಗುತ್ತಿದ್ದರು. ಈ ಗೊಂದಲದ ನಡುವೆಯೇ ಸೆಕ್ಸ್‌ವರ್ಕರ್ಸ್ ಹೆಣ್ಣುಮಕ್ಕಳ ಗುಂಪಿನಿಂದ ಒಂದು ಹುಡುಗಿ ಆತುರಾತುರವಾಗಿ ತಲೆತಪ್ಪಿಸಿಕೊಂಡು ಧಾವಂತದಲ್ಲಿ ಹೆಜ್ಜೆ ಹಾಕುತ್ತಿದ್ದಳು. ಹಾಗೆ ಓಡುವ ಭರದಲ್ಲಿ ಪಕ್ಕದಲ್ಲಿದ್ದವರನ್ನು ದೂಡಿ ಓಡಿಹೋಗುತ್ತಿದ್ದ ಆಕೆಯನ್ನು ಅವರಲ್ಲೇ ಒಬ್ಬಳು ರಟ್ಟೆ ಹಿಡಿದು ನಿಲ್ಲಿಸಿ ಯಾಕೆ ಹಾಗೆ ಓಡ್ತಿದ್ದೀಯಾ! ಏನವಸರ ನಿಂಗೆ! ಅಂತ ಸ್ವಲ್ಪ ಮುಖ ಸಿಂಡರಿಸಿಕೊಂಡೆ ಕೇಳಿಬಿಟ್ಟಳು. ಆ ಹುಡುಗಿ ನನ್ನ ಕಡೆಗೆ ಕೈ ತೋರಿಸಿ ಆ ಅಪರಿಚಿತ ಹೆಂಗಸಿನ ಬಳಿ ಏನೋ ಹೇಳಿ ಕತ್ತಲಲ್ಲಿ ಕರಗಿ ಹೋದಳು. ಇದನ್ನು ಗಮನಿಸಿದ ನಾನು ಕುತೂಹಲ ತಾಳಲಾರದೆ ಆಕೆ ನಿಂತು ಮಾತಾಡುತ್ತಿದ್ದ ಆ ಹೆಂಗಸನ್ನು ಕೇಳಿದೆ ಯಾರವಳು? ಆಕೆ ಏನು ಹೇಳಿದಳು ಅಂತ! ಆಕೆ ಕೊಟ್ಟ ಒರಟಾದ ಉತ್ತರ ಹೇಗಿತ್ತು ಗೊತ್ತಾ! ಆ ಉತ್ತರ ಕೇಳಿ ಭೂಮಿಯೇ ಬಾಯ್ತೆರೆದು ನನ್ನನ್ನು ನುಂಗಿದಂತಾಯ್ತು. ಅವಳು ನಿಮ್ಮ ಸ್ಟೂಡೆಂಟಂತ್ತೆ! ನೀವವಳಿಗೆ ಮೇಷ್ಟ್ರಂತೆ! ಅದಕ್ಕೆ ಹಿಂಗೆ ಓಡ್ತಾವಳೆ ಅವಳು, ಭಯದಿಂದ! ಆ ಹೆಂಗಸು, ತನ್ನ ಮಾತು ಮುಗಿಸುವಷ್ಟರಲ್ಲಿ ಓಡಿಹೋಗುತ್ತಿದ್ದ ಆ ಹುಡುಗಿ ತಿರುವಿನಲ್ಲೊಮ್ಮೆ ಭಯದಿಂದ ತಿರುಗಿ ನೋಡಿದಳು. ಆಗ ಆಕೆಯ ಮುಖ ಕಾಣಿಸಿತು. ನನ್ನ ಕಣ್ಣಾಲಿ ಗಳಲ್ಲಿ ನೀರಾಡುತ್ತಿತ್ತು. Yes ಅದೇ ಹುಡುಗಿ ಅದು! ಸದಾ ಚಟುವಟಿಕೆ ಯಿಂದ ಓಡಾಡಿಕೊಂಡು ಹರಳು ಹುರಿದಂತೆ ಮಾತಾಡಿಕೊಂಡು ತಕ್ಕ ಮಟ್ಟಿಗೆ ಓದಿನಲ್ಲೂ ಮುಂದಿದ್ದ ಆ ಹುಡುಗಿ ಸೆಕ್ಸ್ ವರ್ಕರ್ಸ್ ಸಮಾವೇಶಕ್ಕೆ ಯಾಕೆ ಬಂದಿದ್ದಳು! ಅಂತ ವಿಚಾರಿಸಿದರೆ ಆಕೆ ಕೂಡ ಅದರ ಒಂದು ಭಾಗ ಅಂತ ಗೊತ್ತಾದಾಗ! ನನ್ನಂಥ ನತದೃಷ್ಟ ಮೇಷ್ಟ್ರ ಗಂಟಲಿನಲ್ಲಿ ಮಾತುಗಳಿರಲಿಲ್ಲ.

ಈಗ ಹೇಳಿ ನಮ್ಮ ಆತ್ಮಚರಿತ್ರೆಯ ಪುಟಪುಟಗಳಲ್ಲಿ ನಮ್ಮ ಸಂಭ್ರಮಗಳಿರಬೇಕು? ಹುಟ್ಟಿದ ಹಬ್ಬದ ಮಧುರ ಕ್ಷಣಗಳಿರಬೇಕು? ವೆಡ್ಡಿಂಗ್ ಆ್ಯನಿವರ್ಸರಿಯ ಫೋಟೋ ಆಲ್ಬಮ್ಮುಗಳಿರಬೇಕು ಎಂದು ಜೋಡಿಸಿಕೊಳ್ಳುವ ನಮಗೆ ಈ ಬದುಕು ಯಾವ ಪುಟಕ್ಕೆ ಯಾವುದನ್ನು ಜೋಡಿಸಬೇಕೆಂಬ ಆ್ಯಕ್ಟಿವ್ ಎಡಿಟರ್‌ನ ಕೆಲಸ ಮಾಡುತ್ತದಲ್ಲ! ಹೇಗಿದೆ ನೋಡಿ ಅನುಭವದ ತಿರುವು. ಅದು ಎಡಿಟ್ ಮಾಡಿಟ್ಟ ಪುಟಗಳಿಗೆ ಕೇವಲ ಟೈಟಲ್ ಕಾರ್ಡ್ ಹೊಂದಿಸಿಕೊಳ್ಳುವ ನಾಮಾಕಾವಸ್ಥೆ ಲೇಖಕರು ನಾವು ಅಷ್ಟೆ. ಬಹುಶಃ ಇಂಥದೊಂದು ವಿಲಕ್ಷಣ, ವಿಚಿತ್ರ ತಲ್ಲಣದ ಸನ್ನಿವೇಶಗಳು ಯಾರಿಗಾದರೂ ಕಂಡಿರಬಹುದು, ಆದರೆ ಬೋಧಕನ ಕಣ್ಣಲ್ಲಿ ಕಟ್ಟಿದ ಮಕ್ಕಳ ಕನಸು ನೀರಾಗಿ ಹರಿದ ಕಥೆ ಇಲ್ಲಿ ಅಪರೂಪ ಅನ್ನಿಸುತ್ತದೆ. ಎಲ್ಲರೂ ಡಾಕ್ಟ್ರೇ ಆಗಬೇಕು! ಎಂಜಿನಿಯರ್ರೇ ಆಗಬೇಕು! ಅಧಿಕಾರಿಯೇ ಆಗಬೇಕು! ಅಂತ ಸ್ಫೂರ್ತಿ ತುಂಬಿ ಬೋಧಿಸುವ ಮಂದಿಗೆ ಯಾರು ಏನಾಗಬಾರ ದಿತ್ತೋ ಅವರು ಅದೇ ಆಗಿಹೋದಾಗ ಸಮಯ ಅನ್ನೋದು ನಿಮ್ಮ ಮುಂದೆ ಇದ್ದದ್ದನ್ನು ಇದ್ದಾಂಗ ತೋರಿಸಿ ನಿಮ್ಮ ಆತ್ಮಚರಿತ್ರೆಯ ಪುಟಗಳನ್ನು ತಾನು ಎಣಿಸಿದಂತೆ ತುಂಬಿಸಿ ಹೋಗುತ್ತಿರುತ್ತದೆ ತಪ್ಪಿಸಿಕೊಳ್ಳೋದಕ್ಕೆ ನಾವ್ಯಾರು?

ಯಾವತ್ತೂ ಹೇಳಿಕೊಳ್ಳಲಾಗದ ಇಂಥಾ ವಿಲಕ್ಷಣ ಸನ್ನಿವೇಶವನ್ನು ಹೇಳಿಕೊಳ್ಳುವಂತೆ ಮಾಡಿದ್ದು ಪುಟ್ಟಣ್ಣ ಕಣಗಾಲರನ್ನು ಕಾಡಿದ ನಾಗರ ಹಾವಿನ ಅಲಮೇಲುವಿನ ಪಾತ್ರದಂತೆ, ಈ ಪ್ರಸಂಗ ಹಾಗೆ ಸುಮ್ಮನೆ ನೆನಪಾಯಿತು. ಬಡತನಕ್ಕೆ ಬಾಯಿ ಜಾಸ್ತಿ. ಚಿಂದಿಬಟ್ಟೆ ಮಾಡುವ ಅಲ್ಪ ಅಪರಾಧವೂ ಕೂಡ ಬೃಹದಾಕಾರ ತಾಳುತ್ತದೆ. ಹಾಗಾದರೆ ಇಂಥದನ್ನು ಹೇಳಿಕೊಂಡರೆ ಸಮಾಜಕ್ಕೇನಾದರೂ ಉಪಯೋಗವಿದೆಯಾ? ಅಂತ ನನ್ನನ್ನೇ ನಾನು ಕೇಳಿಕೊಂಡಾಗ ಕೈಗೆ ಸಿಕ್ಕಿದ್ದು 'ಅಕ್ರಮ ಸಂತಾನ' ಎಂಬ ಶರಣಕುಮಾರ ಲಿಂಬಾಳೆಯವರ ಪುಸ್ತಕ. ಇಂಥದೇ ಪರಿಸರದಿಂದ ಬೆಳೆದು ಬಂದು ಸರ್ಕಾರಿ ಅಧಿಕಾರಿಯಾಗಿ ಆ ನಂತರದಲ್ಲಿ ಅದನ್ನು ಬರೆದುಕೊಂಡ ದಿಟ್ಟತನದ ಕತೆಗಳು ನಮ್ಮಲ್ಲಿ ಬಹಳಷ್ಟಿವೆ. ನಮ್ಮದಲ್ಲದ ಅನುಭವ ಗಳು, ನಮ್ಮವಲ್ಲದ ಅಪಮಾನಗಳು, ನಮ್ಮವೇ ಅಂತನ್ನಿಸಿ ತಾಕಿದಾಗ ಮಾತ್ರ ನೊಂದವರ ಬಗ್ಗೆ ಕನಿಕರಕ್ಕೆ ಬದಲಾಗಿ ಪ್ರೀತಿ ಹುಟ್ಟುತ್ತದೆ. ಅಂಥವರಲ್ಲಿ ಒಬ್ಬರಿಗಾದರೂ ಏಕಾಂಗಿಯಾಗಿಯೂ ಸೋಲನ್ನು ಸೋಲಿಸುವ ದಿಟ್ಟತನ ಹುಟ್ಟಿದರೆ ಸಾಕು! ಸಮಾಜಕ್ಕೆ ಇದಕ್ಕಿಂತ ಒಳ್ಳೆಯದನ್ನು ಕೊಡಲು ಹೇಗೆ ಸಾಧ್ಯ? ಸ್ವಾಭಿಮಾನದ ಪಾಠ ಹೇಳಬಹುದು.

ಅಮೆರಿಕಾಕ್ಕೆ ಜಲಮಾರ್ಗ ಕಂಡುಹಿಡಿದ ಕ್ರಿಸ್ಟೋಫರ್ ಕೊಲಂಬಸ್ I have discovered that when a man is given a vision he must follow it along. Loyalty passes like seemed an outgoing tide ಎಂದು ಹೇಳುತ್ತಾನೆ. ಸೋಲಿನ ಸುಳಿಗೆ ಸಿಕ್ಕ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಆರಂಭಿಸಿದಾಗ 'ಒನ್ ಮ್ಯಾನ್ ಆರ್ಮಿ'ಯ ಥರ ತಾನೊಬ್ಬನೆ ಕನಸು ಕಾಣಬೇಕು! ಕಂಡ ಕನಸನ್ನು ತಾನೊಬ್ಬನೇ ಬೆನ್ನತ್ತಬೇಕು. 'ಗುರಿ ಮುಟ್ಟುವ ತನಕ ನಿಲ್ಲದಿರಿ' ಅಂತ ಸ್ವಾಮಿ ವಿವೇಕಾನಂದ ಅವರು ಹೇಳಿದ ಮಾತು ಸ್ಲೋಗನ್ನಿಗಾಗಿ ಅಲ್ಲ. ಎಚ್ಚರ ತಪ್ಪಿದವರಿಗೆ, ದಾರಿ ತಪ್ಪಿದವರಿಗೆ, ಕನಸು ಕಂಡವರಿಗೆ ಎಲ್ಲರಿಗೂ ಅನ್ವಯಿಸುವ ಆಪತ್ಕಾಲದ ಮಾತದು. ಆನಂತರದಲ್ಲಿ ಗೆದ್ದೆತ್ತಿನ ಬಾಲ ಹಿಡಿಯೋದಕ್ಕೆ ಇಲ್ಲಿ ಸೈನ್ಯವೇ ನಿಂತುಬಿಡುತ್ತದೆ. ಆದ್ದರಿಂದ ಸೋಲಿಗೆ ಹೆದರಿದವರು, ಅವಮಾನಕ್ಕೆ ಒಳಗಾದವರು, ತಮ್ಮ ಬಗ್ಗೆಯೇ ಕೀಳರಿಮೆ ಬೆಳೆಸಿಕೊಂಡು ಹಿಂಜರಿಯುವವರು, ಅನುಕೂಲಗಳಿಂದ ವಂಚಿತರಾಗಿ ಆತ್ಮವಿಶ್ವಾಸವನ್ನೇ ಕಳೆದುಕೊಂಡವರು, ಹಣತೆಯಷ್ಟು ಉರಿದರೆ ಸಾಕು, ಅನುಭವಗಳ ಧರುಮದೀಪ ಯಾವ ರೂಪದಲ್ಲೇ ಆಗಲಿ ದಕ್ಕಿಬಿಟ್ಟರೇ ಸಾಕು! ಅವರ ಜೀವನ ಬದಲಾಗಿ ಹೋಗುತ್ತದೆ. ಅದಕ್ಕಾಗಿಯೇ ಈವತ್ತು ದಿನಪತ್ರಿಕೆಗಳೆಲ್ಲಾ ಇಂಥಾ ಇನ್ಸಿಡೆಂಟುಗಳನ್ನು ಇಟ್ಟುಕೊಂಡು ಜೀವನೋತ್ಸಾಹ ತುಂಬುವ ಚಿಕ್ಕ ಚಿಕ್ಕ ಕಾಲಮ್ಮುಗಳನ್ನೇ ಪ್ರಾರಂಭಿಸಿಬಿಟ್ಟಿವೆ. ಅವುಗಳ ಉದ್ದೇಶವೇ ಅದು. 'ಯಾರು ಏನಾಗಬೇಕಾಗಿತ್ತೋ, ಅವರು ಅದಾಗದೆ, ಯಾರು ಏನಾಗಬಾರದಿತ್ತೋ ಅವರು ಎಲ್ಲವೂ ಆಗಿ, ಎಲ್ಲವೂ ಆಗಬೇಕಾದವರು ಏನೂ ಆಗದೇ ಉಳಿದ ಮಂದಿಗೆ ಜೀವನಸ್ಫೂರ್ತಿಗೆ ಅತ್ಯಗತ್ಯವಾಗುವಂತೆ ಬರೆಯಬೇಕು ಎಂಬ ಸದುದ್ದೇಶವೇ ಇಂತಹ ಪ್ರೇರಣಾತ್ಮಕ ಬರವಣಿಗೆಯ ಸಾರ. ಆ ದೊಡ್ಡ ಗುಂಪಿಗೆ ಜೀವನ್ಮುಖೀ ಚೈತನ್ಯ ತುಂಬುವ ಕೆಲಸಗಳು ಯಾವತ್ತಿಗೂ ನಿರಂತರವಾಗಿಯೇ ನಡೆದಿವೆ.

ನಿರ್ದೇಶಕ ಸಿದ್ದ ಲಿಂಗಯ್ಯ 'ಬಂಗಾರದ ಮನುಷ್ಯ' ಸಿನಿಮಾ ಮಾಡಿದಾಗ ಆ ಕಾಲದಲ್ಲಿ ಚೆನ್ನಾಗಿ ಓದಿಕೊಂಡ ಯುವಕರೆಲ್ಲಾ ಬೆಂಗಳೂರು ಬಿಟ್ಟು ಹಳ್ಳಿಗೆ ಬಂದು ಬೇಸಾಯ ಮಾಡಿದ ಟ್ರೆಂಡು ಸೃಷ್ಟಿಯಾಗಿತ್ತು ಎಂದು ಆವತ್ತಿನ ಮಾಧ್ಯಮಗಳು ವರದಿ ಮಾಡಿದ್ದವು. ಹಾಗೆ ಈ ಓದು, ಬರಹಗಳೆಲ್ಲ, ಜೀವಂತಿಕೆ ತುಂಬುವ ಚಿತ್ರಲೋಕ. ಇಲ್ಲಿ ನಾವೇ ನೋಯಬೇಕಾಗಿಲ್ಲ. ನೊಂದವರ ನೋವಿಗೆ ಮಿಡಿಯುವ ಸಾಂತ್ವನದ ಸಂಕೇತಗಳಂತೆ ನಮ್ಮ ಆತ್ಮಚರಿತ್ರೆಯ ಪುಟಗಳು ಒಕ್ಕಣಿಕೆ ಬರೆದುಕೊಂಡರೂ ಸಾಕು! ಅತ್ತವರ ಗಂಟಲಲ್ಲಿ ಬಿಕ್ಕಳಿಕೆ ನಿಂತು ಹೋಗುತ್ತದೆ. ಒತ್ತಾಸೆಯ ಬದುಕು ನೂರು ದಾರಿ ತೋರಿಸುತ್ತದೆ.

ಚಿಕ್ಕ ವಯಸ್ಸಿಗೇ ಹಾಗೆ ಮುಖ ತಪ್ಪಿಸಿ ಓಡಿಹೋದ ಆ ಹೆಣ್ಣುಮಗಳ ಹೊಟ್ಟೆ–ಬಟ್ಟೆ–ಅಪಮಾನಗಳ ನೀರವತೆಗಳು ನನ್ನ ಆತ್ಮಚರಿತ್ರೆಯ ಪುಟಗಳಲ್ಲಿ ಸದ್ದಿಲ್ಲದೆ ದಾಖಲಾಗಿ ಹೋಗಿದೆ. ನಿಮ್ಮ ಆತ್ಮಚರಿತ್ರೆಯ ಪುಟಗಳಲ್ಲಿ ಇಂಥ ಇನ್ನೆಷ್ಟು ಕತೆಗಳು ನಿಮ್ಮನ್ನು ಬೆಚ್ಚಿ ಬೀಳಿಸಿದೆಯೋ ಗೊತ್ತಿಲ್ಲ! ಆದರೆ ಈ ಬದುಕೆನ್ನುವ ಮಾಯಾಮೃಗ ಮಾರೀಚನ ವೇಷ ಧರಿಸಿ ಇಂಥ ವಿಲಕ್ಷಣ ಪ್ರಸಂಗಗಳ ಮುಂದೆ ನಮ್ಮನ್ನು ಸಮಯದ ಗೊಂಬೆಯ ಹಾಗೆ ನಿಲ್ಲಿಸದಿದ್ದರೆ ಸಾಕು! ಯಾರು ಏನಾಗಬೇಕೋ ಅವರು ಅದೇ ಆಗಬೇಕೆಂದೇನೂ ಇಲ್ಲ. ಸೋಲೆಂಬ ಬಡತನಕ್ಕೆ ಅಂಜದಿದ್ದರೆ ಜೀವನ ಕಡೇ ಪಕ್ಷ ಯಾತನಾಮಯವಾಗುವುದಿಲ್ಲ. ಎಷ್ಟೇ ಆದರೂ ಕನಸು ಮಾತ್ರ ನಮ್ಮದು. ನಿರ್ಧಾರ ಅವರದೆ! ವರಕವಿ ದ.ರಾ.ಬೇಂದ್ರೆಯವರ ಮಾತೊಂದಿದೆ 'ಆನೆ ಹೋದುದೇ ಬೀದಿ ಅವರಿಗವರದೇ ಹಾದಿ' ಏನಂತೀರಿ?.

ಪರಸ್ತ್ರೀಯೊಂದಿಗೆ ಪತಿ ಲವ್ವಿಡವ್ವಿ: ಮಗಳನ್ನ ಕೊಂದು ಆತ್ಮಹತ್ಯೆಗೆ ಶರಣಾದ ತಾಯಿ

ಬೆಂಗಳೂರು: ಪತಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಗ್ರಾಪಂ ಅಧ್ಯಕ್ಷೆಯೂ ಆಗಿರುವ ಪತ್ನಿ ನೇಣಿಗೆ ಶರಣಾಗಿರುವ ಘಟನೆ ಬೆಂಗಳೂರಿನ ರಾಮಯ್ಯ ಲೇಔಟ್ ನಡೆದಿದೆ. ಶ್ರುತಿ(33) ಆತ್ಮಹತ್ಯೆಗೆ ಶರಣಾದ ಮಹಿಳೆ. ಶ್ರುತಿ ಮೊದಲು ತನ್ನ 5 ವರ್ಷದ ಮಗಳು ರೋಷಿಣಿಯನ್ನು ಕೊಂದು ಬಳಿಕ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆಟವಾಡಲು ಹೊರ ಹೋಗಿದ್ದ ಪುತ್ರ ಮನೆಗೆ ಬಂದಾಗ ಈ ಘಟನೆ ಬೆಳಕಿಗೆ ಬಂದಿದೆ. ಇನ್ನು ಆತ್ಮಹತ್ಯೆಗೆ ಮುನ್ನ ಶ್ರುತಿ ಡೆತ್‌ನೋಟ್ ಬರೆದಿಟ್ಟಿದ್ದು, ಡೆತ್‌ನೋಟ್‌ನಲ್ಲಿ ಗಂಡ ಪರಸ್ತ್ರೀ ಯೊಂದಿಗಿನ ಅನೈತಿಕ ಸಂಬಂಧ ಹೊಂದಿರುವ ಬಗ್ಗೆ ಉಲ್ಲೇಖಿಸಿದ್ದಾರೆ.

10 ವರ್ಷದ ಹಿಂದೆ ಶ್ರುತಿ ಚಾರ್ಟರ್ಡ್ ಅಕೌಂಟೆಂಟ್ ಜತೆ ಮದುವೆಯಾಗಿದ್ದರು. ಅಲ್ಲದೇ ಶ್ರುತಿ ಗ್ರಾಮ ಪಂಚಾಯಿತಿ ಒಂದರ ಅಧ್ಯಕ್ಷೆಯಾಗಿದ್ದು, ಒಂದು ಹೆಣ್ಣು ಒಂದು ಗಂಡು ಮಗು ಸಹ ಇದೆ. ಆದರೆ ಗಂಡನ ಅನೈತಿಕ ಸಂಬಂಧಕ್ಕೆ ಬೇಸತ್ತು ಶ್ರುತಿ, ಪುತ್ರಿ ರೋಷಿಣಿಯನ್ನು ಕೊಂದು ಬಳಿಕ ತಾನೂ ನೇಣಿಗೆ ಶರಣಾಗಿದ್ದಾರೆ. ಇನ್ನು ಗಂಡು ಮಗು ಆಟವಾಡಲು ಮನೆಬಿಟ್ಟು ಆಚೆ ಹೋಗಿದ್ದರಿಂದ ಆ ಕಂದ ಬಚಾವ್ ಆಗಿದೆ. ಒಂದು ವೇಳೆ ಆ ಪಾಪು ಸಹ ಮನೆಯಲ್ಲಿದ್ದರೆ ಆ ಮಗುವನ್ನು ಕೊಲ್ಲುತ್ತಿದ್ದಳು. ಆದರೆ, ಅದೃಷ್ಟವಶಾತ್ ಆ ಮಗು ಬಚಾವ್ ಆಗಿದೆ. ಡೆತ್ ನೋಟ್ ಬರೆದಿಟ್ಟು ಪತಿ ವಿವಾಹೇತರ ಸಂಬಂಧದ ಬಗ್ಗೆ ಉಲ್ಲೇಖಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಕೌಟುಂಬಿಕ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದ್ದು, ಬಾಗಲಗುಂಟೆ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಮೃತ ಶ್ರುತಿ ಗಂಡನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಇನ್ನು ತಾಯಿ ಮಗಳ ಮೃತ ದೇಹಗಳನ್ನ ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ.

ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಬಿ.ಆರ್. ಪಾಟೀಲ್

ಬೆಂಗಳೂರು: ಇತ್ತೀಚೆಗಷ್ಟೇ ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಹುದ್ದೆಗೆ ರಾಜೀನಾಮೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಹಾಗೂ



ಆಳಂದ ಕಾಂಗ್ರೆಸ್ ಶಾಸಕ ಬಿಆರ್ ಪಾಟೀಲ್ ಅವರನ್ನು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಅವರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ.

ಆಳಂದ ಶಾಸಕ ಬಿ ಆರ್ ಪಾಟೀಲ್ ಅವರನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಉಪಾಧ್ಯಕ್ಷರಾಗಿ ನೇಮಕ ಮಾಡುವುದರ

ಸಂಪುಟ ದರ್ಜೆ ಸ್ಥಾನಮಾನ

ಜೊತೆಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ಎಲ್ಲಾ ಸೌಲಭ್ಯಗಳೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಫೆ.1ರಂದು ಸಿಎಂ ರಾಜಕೀಯ ಸಲಹೆಗಾರ ಹುದ್ದೆಗೆ ನಾನು ರಾಜೀನಾಮೆ ನೀಡಿದ್ದೇನೆ. ರಾಜೀನಾಮೆ ಪತ್ರವನ್ನು ಸಿಎಂ ಸಿದ್ದರಾಮಯ್ಯ ಅವರಿಗೆ ಈಗಾಗಲೇ ತಲುಪಿಸಿದ್ದೇನೆ ಎಂದು ಬಿ.ಆರ್.ಪಾಟೀಲ್ ಮಾಧ್ಯಮಕ್ಕೆ ತಿಳಿಸಿದ್ದರು. ಆದರೆ ರಾಜೀನಾಮೆಗೆ ಕಾರಣ ಏನು ಎಂಬ ಪ್ರಶ್ನೆಗೆ, ನಾನಾಗಿಯೇ ರಾಜೀನಾಮೆ ನೀಡಿದ್ದೇನೆ ಎಂದು ಹೇಳಿದ್ದರು. ಆದರೆ ಬಿಆರ್ ಪಾಟೀಲ್ ಅವರ ದಿಢೀರ್ ನಿರ್ಧಾರ ಅಚ್ಚರಿಗೆ ಕಾರಣವಾಗಿತ್ತು

ವಿಚಿತ್ರ ನರದೌರ್ಬಲ್ಯಕ್ಕೆ ಆಂಧ್ರಪ್ರದೇಶದಲ್ಲಿ ಇಬ್ಬರ ಸಾವು

ಅಮರಾವತಿ: GB (Guillain Barre) ಸಿಂಡ್ರೋಮ್‌ಗೆ ನೆರೆಯ ಆಂಧ್ರ ಪ್ರದೇಶದಲ್ಲಿ ಇಬ್ಬರು ಸಾವನ್ನಪ್ಪಿದ್ದು, ಸರ್ಕಾರ ತೀವ್ರ ಕಟ್ಟೆಚ್ಚರ ವಹಿಸಿದೆ.

ಕಳೆದ 10 ದಿನಗಳಲ್ಲಿ ಆಂಧ್ರಪ್ರದೇಶದಲ್ಲಿ GB ಸಿಂಡ್ರೋಮ್ ಪೀಡಿತ 45 ವರ್ಷದ ಮಹಿಳೆ ಮತ್ತು ಅಪ್ರಾಪ್ತ ಬಾಲಕ ಸಾವನ್ನಪ್ಪಿದ್ದಾರೆ.

GB ಸಿಂಡ್ರೋಮ್ ಎಂಬುದು ಆಟೋ ಇಮ್ಯೂನ್ ನರವ್ಯೂಹಕ ಅಸ್ವಸ್ಥತೆಯಾಗಿದ್ದು, ಈ ಇಬ್ಬರ ಸಾವಿನೊಂದಿಗೆ ವ್ಯಾಪಕ ಆತಂಕ ಸೃಷ್ಟಿಯಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಆಂಧ್ರ

ಸೋಂಕಿತರ ಸಂಖ್ಯೆ 17

ಪ್ರದೇಶ ಆರೋಗ್ಯ ಸಚಿವ ಸತ್ಯ ಕುಮಾರ್ ಯಾದವ್ ಅವರು, 'ಸೋಂಕು ಪೀಡಿತ 45 ವರ್ಷದ ಮಹಿಳೆ ಕಮಲಮ್ಮ ಭಾನುವಾರ ಗುಂಟೂರಿನ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಮತ್ತು 10 ವರ್ಷದ ಬಾಲಕ 10 ದಿನಗಳ ಹಿಂದೆ ಶ್ರೀಕಾಕುಳಂನ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಸಾವನ್ನಪ್ಪಿದ್ದಾರೆ ಎಂದು ಹೇಳಿದರು.

ಆಂಧ್ರಪ್ರದೇಶದಲ್ಲಿ 17 ಪ್ರಕರಣ: ಅಂತೆಯೇ ಆಂಧ್ರ ಪ್ರದೇಶದಲ್ಲಿ ಒಟ್ಟಾರೆ 17 GBS ಪ್ರಕರಣಗಳು ದಾಖಲಾಗಿವೆ. ಇದು ಸಾಂಕ್ರಾಮಿಕವಲ್ಲದ ಕಾಯಿಲೆಯಾಗಿದ್ದು, ಒಂದು ಲಕ್ಷದಲ್ಲಿ ಇಬ್ಬರಿಗೆ ಸೋಂಕು ತಗುಲುತ್ತದೆ. ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ. ಇದು ಹಠಾತ್ ಪ್ರಕರಣಗಳ ಏರಿಕೆಯಲ್ಲ, ಇದು ಸಾಮಾನ್ಯ ಎಂದು ಯಾದವ್ ತಿಳಿಸಿದರು.

ಕಳೆದ ವರ್ಷ ಅಂದರೆ 2024ರಲ್ಲಿ ಇದೇ ಸೋಂಕಿನಿಂದಾಗಿ ಆಂಧ್ರ ಪ್ರದೇಶದಲ್ಲಿ ಒಟ್ಟು 267 ಪ್ರಕರಣಗಳು ವರದಿಯಾಗಿತ್ತು. ವರ್ಷದ ಮೊದಲಾರ್ಧದಲ್ಲಿ 141 ಪ್ರಕರಣಗಳು ಮತ್ತು ದ್ವಿತೀಯಾರ್ಧದಲ್ಲಿ 126 ಪ್ರಕರಣಗಳು ವರದಿಯಾಗಿವೆ ಎಂದು ಯಾದವ್ ಮಾಹಿತಿ ನೀಡಿದ್ದಾರೆ.

ಸಿರಿ ವಿದ್ಯಾಲಯದ 17ನೇ ವಾರ್ಷಿಕೋತ್ಸವ



ಮೈಸೂರಿನ ಹೂಟಗಳ್ಳಿ ಸಿರಿ ವಿದ್ಯಾಲಯದ ವಾರ್ಷಿಕೋತ್ಸವವನ್ನು ನಾಗರಾಜ ವಿ.ಬೈರಿ ಉದ್ಘಾಟಿಸಿದರು. ಈ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿರಿ ಬಾಲು, ಶೋಭಾ ಬಾಲು, ಬಿ.ಕೆ.ರೇಖಾ, ಸಿರಿಮಾ ಮನೋಜ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಶ್ರವಣಬೆಳಗೊಳ: ಚಿಕ್ಕ ಬಾಹುಬಲಿ ವರ್ಣರಂಜಿತ ಮಹಾ ಮಸ್ತಕಾಭಿಷೇಕ



ಚಿಕ್ಕ ಬಾಹುಬಲಿಯ ಮಹಾಮಸ್ತಕಾಭಿಷೇಕ ವಿಜೃಂಭಣೆಯಿಂದ ನಡೆಯಿತು.

ಶ್ರವಣಬೆಳಗೊಳ: ಭಂಡಾರ ಬಸದಿಯ ಚವ್ವೀಸ ತೀರ್ಥಂಕರರ ಸನ್ನಿಧಿಯಲ್ಲಿ ನೂತನವಾಗಿ ಪ್ರತಿಷ್ಠಾಪನೆಗೊಂಡಿರುವ ಚಿಕ್ಕ ಬಾಹುಬಲಿಯ ಪ್ರಥಮ ಮಹಾ ಮಸ್ತಕಾಭಿಷೇಕವು ವಿಧಿ ವಿಧಾನಗಳೊಂದಿಗೆ ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ನೆರವೇರಿತು.

ಅಭಿಷೇಕ ನೆರವೇರುತ್ತಿದ್ದಂತೆಯೇ ಇತ್ತ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಬೆಳಗೊಳ ಜನರಿಗೆ ಮಳೆ ಬಂದಷ್ಟೇ ಹರ್ಷ, ಗುಡುಗು ಮಿಂಚುಗಳೇ ಕೈತಾಳ, ಜನರಿಗೆ ಹೊಳೆವ ನಕ್ಷತ್ರಗಳೇ ಫಲ ಪುಂಜ' ಇದು ಜನಪದರು ಬೆಳಗೊಳದ ಗೊಮ್ಮಟನಿಗೆ ನಿರ್ಸಗ ಮಾಡುವ ಅಭಿಷೇಕದ ವರ್ಣನೆಯನ್ನು ತಮ್ಮ ಜಾನಪದ ಶೈಲಿಯಲ್ಲಿ ಹೇಳಿದ್ದಾರೆ. ಅದರಂತೆ ಭಾನುವಾರ ಮಧ್ಯಾಹ್ನ ಸೌಂದರ್ಯದ ಖನಿಯಂತಿರುವ ಮಂದಸ್ಮಿತ ಚಿಕ್ಕ ಬಾಹುಬಲಿ ಮೂರ್ತಿಗೆ ನಡೆದ ಪ್ರಥಮ ಮಹಾಮಸ್ತಕಾಭಿಷೇಕವು ಕಣ್ಣನ ತುಂಬಿವಂತಿದ್ದು, ಬಾಹುಬಲಿ ಮೂರ್ತಿ ವಿವಿಧ ಬಣ್ಣಗಳಿಂದ ಕಂಗೊಳಿಸಿತು.

ಪ್ರಥಮವಾಗಿ ಗುಳ್ಳಕಾಯಜ್ಜಿಯ ಕಲಶ, ಚಾವುಂಡರಾಯ ಕಲಶಗಳಿಂದ ಜಲಾಭಿಷೇಕ ನಡೆಸಲು ಆಡಾಯರಿಗೆ ಚಾಲನೆ ನೀಡಿದರು. ನಂತರ ಕಾಶಿಯ ಗಂಗಾ ಜಲ, ಪ್ರಯಾಗರಾಜ್‌ನ ಸಂಗಮ ನದಿಗಳ ಜಲ, ಕೃಷ್ಣಾ, ಕಾವೇರಿ, ಗೋದಾವರಿ, ತುಂಗಾ, ಭದ್ರಾ ಮುಂತಾದ ನದಿಗಳಿಂದ ಸಂಗ್ರಹಿಸಿದ್ದ ಜಲದಿಂದ ಜಲಾಭಿಷೇಕಗಳು ನೆರವೇರಿದವು.

ನಮ್ಮ ಆತ್ಮವೂ ಸಹ ಶುದ್ಧವಿರಲಿ ಎಂಬ ಭಾವನೆಯಿಂದ ನೈಸರ್ಗಿಕವಾಗಿ ಶುದ್ಧವಾಗಿರುವ ಎಳನೀರನ್ನು ಭಗವಂತನಿಗೆ ಅಭಿಷೇಕ ಮಾಡಲಾಯಿತು. ನಂತರ ಮೂರ್ತಿಗೆ ಕಬ್ಬಿನ ಹಾಲನ್ನು ಕೊಡಗಳಿಂದ ನೆತ್ತಿಯ ಮೇಲೆ ಹಾಕಿ ಅಭಿಷೇಕ ಮಾಡುವಾಗ ಭಗವಂತನು ಹಸಿರು ಬಣ್ಣಗಳಲ್ಲಿ ಕಂಗೊಳಿಸುತ್ತಿತ್ತು.

ಅರಕಲಗೂಡು: ಇ-ಆಸ್ತಿ ಖಾತೆ: ತಿದ್ದುಪಡಿಗೆ ಅವಕಾಶ

ಅರಕಲಗೂಡು: ಪೌರಾಡಳಿತ ನಿರ್ದೇಶನಾಲಯ ಆಸ್ತಿ ಕಣಜ ತಂತ್ರಾಂಶ ಸರಳೀಕರಣಗೊಳಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುತ್ತಿದೆ. ಈಗಾಗಲೆ ಇ-ಖಾತೆ ಹೊಂದಿರುವವರು ತಮ್ಮ ಆಸ್ತಿ ಖಾತೆ ಪ್ರತಿಗಳಲ್ಲಿ ದೋಷ, ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಳ್ಳಬಹುದಾಗಿದೆ ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷ ಎಸ್.ಎಸ್. ಪ್ರದೀಪ್‌ಕುಮಾರ್ ತಿಳಿಸಿದರು.

ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ,ಇ-ಖಾತೆ ಪ್ರತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಸ್ವತ್ತಿನ ಮತ್ತು ಮಾಲೀಕರ ಭಾವಚಿತ್ರ, ಗುರುತು ಪತ್ರ (ವೋಟರ್ ಐಡಿ, ಪಡಿತರ ಚೀಟಿ ಪ್ರತಿ), ಆಧಾರ್, ಪಾನ್ ಕಾರ್ಡ್, ಕಂದಾಯ ಪಾವತಿ ರಶೀದಿ, ವಿದ್ಯುತ್ ಬಿಲ್, ನೀರಿನ ಬಿಲ್ ಮುಂತಾದ ದಾಖಲೆಗಳ ಪ್ರತಿಗಳೊಂದಿಗೆ ಕಚೇರಿಗೆ ಫೆ.25ರೊಳಗೆ ಅರ್ಜಿ ಸಲ್ಲಿಸುವಂತೆ ಕೋರಿದರು.

ಮುಖ್ಯಾಧಿಕಾರಿ ಬಸವರಾಜಪ್ಪ ಟಾಕಪ್ಪ ಶಿಗ್ಗಾಂವಿ ಮಾತನಾಡಿ, ಆಸ್ತಿ ಖಾತೆದಾರರು ಇಂಟರ್‌ನೆಟ್‌ನಲ್ಲಿ ಕೆಎಂಎಫ್-24 ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಸಿಟಿಜನ್ ಭಾಗದಲ್ಲಿರುವ ಪ್ರತಿಯೊಂದಿಗೆ ನಿಮ್ಮಲ್ಲಿರುವ ಪ್ರತಿ ತಾಳೆ ನೋಡಿ ತಪ್ಪು, ದೋಷಗಳನ್ನು ಗುರುತಿಸಿ ತಪ್ಪುಗಳಿದ್ದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ತಿದ್ದುಪಡಿ ಮಾಡಲಾಗುವುದು ಎಂದರು.

ಕಾಲಾವಕಾಶ ಕಡಿಮೆ ಇದ್ದು ಜನರು ತ್ವರಿತವಾಗಿ ಈ ಕುರಿತು ಗಮನ ನೀಡಿ ತಮ್ಮ ಆಸ್ತಿ ದಾಖಲೆ ಸರಿಪಡಿಸಿಕೊಳ್ಳಬೇಕು. ಸಾರ್ವಜನಿಕರಿಗೆ ಈ ಕುರಿತು ಮಾಹಿತಿ ನೀಡಲಾಗುತ್ತಿದೆ. ಒಂದೆರಡು ದಿನದಲ್ಲೇ ವಾರ್ಡ್ ಸಭೆ ನಡೆಸಿ ಈ ಕುರಿತು ಅರಿವು ಮೂಡಿಸಲಾಗುವುದು ಎಂದರು. ಸದಸ್ಯ ಹೂವಣ್ಣ ಇದ್ದರು.

ನ್ಯಾಯಾಲಯ ಆವರಣದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರ ಅಳವಡಿಕೆಗೆ ಮನವಿ

ಬೆಂಗಳೂರು, ಫೆ.17-ರಾಜ್ಯದ ಎಲ್ಲಾ ನ್ಯಾಯಾಲಯಗಳ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಅಳವಡಿಸಲು ಸಂಬಂಧಪಟ್ಟವರಿಗೆ ತಿಳಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಕಾನೂನು ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಅಶೋಕ್ ಅವರಿಗೆ ಸಮಾಜ ಕಲ್ಯಾಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೇಜರ್ ಮಣಿವಣ್ಣನ್ ಪಿ. ಪತ್ರದ ಮೂಲಕ ಈ ಮನವಿ ಮಾಡಿದ್ದಾರೆ. ಅಲ್ಲದೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾದರಿ ಭಾವಚಿತ್ರ ಲಭ್ಯವಿದ್ದು, ಸಂಬಂಧಪಟ್ಟ ನ್ಯಾಯಾಲಯಗಳಿಗೆ ಅವಶ್ಯಕತೆ ಅನುಸಾರ ಸರಬರಾಜು ಮಾಡಲಾಗುವುದು ಹಾಗೂ ಸದರಿ ವೆಚ್ಚವನ್ನು ನಮ್ಮ ಇಲಾಖೆಯೇ ಭರಿಸಲಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಸ್ವ-ಸಹಾಯ ಸಂಘಗಳಿಂದ ಮೈಸೂರು ಜಿಲ್ಲೆಯ ಆರು ಕಡೆ 'ಅಕ್ಕ ಕೆಫೆ' ಸ್ಥಾಪನೆ

ಮೈಸೂರು, ಫೆ.17(ಎಂಕೆ)- ಮಹಿಳಾ ಸ್ವ-ಸಹಾಯ ಸಂಘಗಳಿಗೆ ಆರ್ಥಿಕವಾಗಿ ಬಲ ನೀಡುವ ಉದ್ದೇಶದೊಂದಿಗೆ 'ಅಕ್ಕ ಕೆಫೆ' ಸ್ಥಾಪನೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ 6 ಸ್ಥಳಗಳನ್ನು ಗುರ್ತಿಸಲಾಗಿದೆ.

ನಗರ ಪಾಲಿಕೆಯ ಮುಖ್ಯ ಕಚೇರಿ, ಕೆಆರ್‌ಎಸ್ ರಸ್ತೆಯಲ್ಲಿನ ವಾಣಿ ವಿಲಾಸ ನೀರು ಸರಬರಾಜು ಕೇಂದ್ರದ ಆವರಣ, ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನ ಸೌಧ ಆವರಣ ಹಾಗೂ ಮೈಸೂರು-ಮಡಿಕೇರಿ ಹೆದ್ದಾರಿಯ ಹಾಲಗೆರೆ ಗ್ರಾಮದ ಬಳಿ, ಮೈಸೂರು-ಮಂಗಳೂರು ರಸ್ತೆಯ ಕಂಪಲಾಪುರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹತ್ತಿರ ಹಾಗೂ ಬೆಟ್ಟದಪುರದ ಶ್ರೀಶಾಂತವಿರಾಮ ದೇವಸ್ಥಾನದ ಬಳಿ 'ಅಕ್ಕ ಕೆಫೆ' ತೆರೆಯಲಾಗುತ್ತಿದೆ.

ರಾಜ್ಯ ಸರಕಾರದ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹತ್ವಾಕಾಂಕ್ಷೆ ಯೋಜನೆಯಾಗಿರುವ 'ಅಕ್ಕ ಕೆಫೆ'ಯು ಮಹಿಳಾ ಸ್ವ-ಸಹಾಯ ಸಂಘಗಳಿಗೆ ಆಹಾರ ಪೂರೈಕೆ ಕ್ಷೇತ್ರದಲ್ಲಿ ಸುಸ್ಥಿರ ಜೀವನೋಪಾಯ ಚಟುವಟಿಕೆಯನ್ನು ಒದಗಿಸುವುದಾಗಿದೆ. ಮಹಿಳೆಯರೇ ತಮ್ಮ ಜ್ಞಾನ ಮತ್ತು ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಂಡು ಜೀವನೋಪಾಯದೊಂದಿಗೆ ಸಬಲೀಕರಣದ ಬದುಕನ್ನು ರೂಪಿಸಿಕೊಳ್ಳಲು ನೆರವಾಗುವಂತೆ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ, ಶುಚಿ-ರುಚಿಯಾದ ಪೌಷ್ಟಿಕ ಆಹಾರ ಒದಗಿಸುವ ಜವಾಬ್ದಾರಿಯನ್ನು ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಲಾಗಿದೆ.



ಸಾಂದರ್ಭಿಕ ಚಿತ್ರ

ಆಸ್ತಿ ತೆರಿಗೆ ವಸೂಲಿ ಜವಾಬ್ದಾರಿಯನ್ನು ಪಡೆದಿರುವ ಮಹಿಳಾ ಸ್ವ-ಸಹಾಯ ಸಂಘಗಳನ್ನು ಆರ್ಥಿಕವಾಗಿ ಮತ್ತಷ್ಟು ಸಬಲಗೊಳಿಸುವ ಉದ್ದೇಶದೊಂದಿಗೆ 'ಅಕ್ಕ ಕೆಫೆ' ಸ್ಥಾಪನೆಗೆ ಸರಕಾರದ ಅನುದಾನದಲ್ಲೇ ಸಂಪೂರ್ಣ ಮೂಲ ಸೌಕರ್ಯವನ್ನು ಒದಗಿಸಲಾಗುತ್ತದೆ. ಕಿರು ಅಕ್ಕ ಕೆಫೆ(ಕ್ಲಾಸಿಕ್)ಗೆ 7 ಲಕ್ಷ ರೂ., ರೆಸ್ಟೋರೆಂಟ್(ಪ್ರೀಮಿಯಂ)ಗೆ ಸರಕಾರ 15 ಲಕ್ಷ ರೂ. ಅನುದಾನ ನೀಡಲಾಗುತ್ತದೆ. ಕೆಫೆಯ ನವೀಕರಣ, ನೆಲಹಾಸು ವ್ಯವಸ್ಥೆ, ಗೋಡೆಗಳು ಮತ್ತು ಛಾವಣಿ, ಬೆಳಕಿನ ವ್ಯವಸ್ಥೆ, ಶೇಖರಣಾ ಕ್ಯಾಬಿನೆಟ್‌ಗಳು, ಕೊಳಾಯಿ ವ್ಯವಸ್ಥೆ, ಸಿಸಿಟಿವಿ ಕ್ಯಾಮರಾ, ರಶೀದಿ ಯಂತ್ರ ಖರೀದಿ, ಬ್ರ್ಯಾಂಡಿಂಗ್, ಬೆಂಕಿ ನಿರೋಧಕ ಉಪಕರಣ, ಪೀಠೋಪಕರಣ ಹಾಗೂ ಇನ್ನಿತರೆ ವ್ಯವಸ್ಥೆಯನ್ನು ಸರ್ಕಾರದ ಅನುದಾನದಲ್ಲಿ ಕಲ್ಪಿಸಿದರೆ, ಪಾಕೋಪಾಯಗಳು(ಪಾತ್ರೆಗಳು) ಓವನ್, ಗ್ಯಾಸ್ ಸಿಲಿಂಡರ್ ಮತ್ತು ಸ್ಟೌವ್, ಮಿಕ್ಸಿ, ಗ್ರೈಂಡರ್, ರೆಫ್ರಿಜಿರೇಟ್ ಅನ್ನು 'ಅಕ್ಕ ಕೆಫೆ' ನಿರ್ವಹಿಸುವ ಮಹಿಳೆಯರೇ ವ್ಯವಸ್ಥೆ ಮಾಡಿಕೊಳ್ಳಬೇಕು.

ಸದಸ್ಯರೇ ನಿರ್ವಹಣೆ: ಅಕ್ಕ ಕೆಫೆಯಲ್ಲಿ ಗ್ರಾಹಕರಿಗೆ ಬೆಳಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ಒದಗಿಸುವ ಕಾರ್ಯವನ್ನು ಮಹಿಳಾ ಸದಸ್ಯರೇ ನಿರ್ವಹಣೆ ಮಾಡಬೇಕಿದೆ. ಸಂಘದ ಲೇಬಲ್ ಇರುವ ಉಡುಪನ್ನು ಧರಿಸಿಕೊಂಡು ಅಡುಗೆ ಸಿದ್ಧಪಡಿಸುವುದರೊಂದಿಗೆ ನಿರ್ವಹಣೆ ಮಾಡಬೇಕಿದೆ. ಬೆಳಗ್ಗೆ - ಇಡ್ಲಿ, ವಡೆ, ಖಾರಾಬಾತ್, ಕೇಸರಿಬಾತ್, ಪೊಂಗಲ್, ಮಧ್ಯಾಹ್ನ ಮತ್ತು ರಾತ್ರಿ - ಮಿನಿ ಮಿಲ್ಸ್, ಚಪಾತಿ, ಮುದ್ದೆ ಊಟ ಇರಲಿದೆ.

ಡಾ.ಕೆ.ಬಿ.ಗಣಪತಿ ಅವರಿಗೆ ಅಭಿನಂದನೆ...



ಮೈಸೂರಿನ 'ಸ್ಟಾರ್ ಆಫ್ ಮೈಸೂರ್'ನ 48ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಕೆಜಿ ಕೊಪ್ಪಲ್- ಜಯನಗರ ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಎಪಿಎನ್ ಪ್ರಾಪರ್ಟೀಸ್ ಮಾಲೀಕರಾದ ಎ.ಪಿ.ನಾಗೇಶ್, ಭೈರವ ಗ್ರೂಪ್ ಮಾಲೀಕ ಮಹದೇವ್, ಕೆ.ಜಿ.ಕೊಪ್ಪಲಿನ ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಗಿರೀಶ್ ಡಿ.ಗೌಡ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್ ಗೌಡ, ಮೈಸೂರು-ಚಾಮರಾಜನಗರ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಎಸ್.ನಾಗರಾಜ್, ವಿವೇಕ್ ಇನ್ನಿತರರಿದ್ದರು.

ರಾಜ್ಯಮಟ್ಟದ ಜಾನಪದ ಕಲಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಫೆ. 17-ಜಾನಪದ ಕಲಾವಿದರ ಒಕ್ಕೂಟ, ಮೈಸೂರು ವಿಭಾಗ ವತಿಯಿಂದ ಫೆ.20ರಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶಿವರಾತ್ರಿ ರಾಜೇಂದ್ರ ಭವನದಲ್ಲಿ ರಾಜ್ಯಮಟ್ಟದ ಜಾನಪದ ಕಲಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಗಂಗಾಧರ್, ಡಾ.ಎಸ್.ಬಸವರಾಜಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಂತಾರಾಷ್ಟ್ರೀಯ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯ, ರಾಷ್ಟ್ರಕ್ಕೆ ಕೀರ್ತಿಯನ್ನು ತಂದಿರುವ, ಕನ್ನಡ ನಾಡಿನ ಏಳಿಗೆಗಾಗಿ ಸುಮಾರು 10 ವರ್ಷಗಳಿಂದ ಜಾನಪದ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಜಾನಪದ ಕಲಾವಿದರು, ರಂಗಭೂಮಿ ನಟ, ನಿರ್ದೇಶಕ ಅಂಕರಾಜು ಎನ್ (ಚಾಮರಾಜನಗರ ಜಿಲ್ಲೆ) ಅವರನ್ನು 2025ನೇ ಸಾಲಿನ 'ರಾಜ್ಯಮಟ್ಟದ ಜಾನಪದ ಕಲಾ ರತ್ನ" ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಜಾನಪದ ಕಲಾವಿದರ ಒಕ್ಕೂಟದ ಮೈಸೂರು ವಿಭಾಗದ ಅಧ್ಯಕ್ಷ ಆರ್.ಕೆ. ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಂಕರಾಜು

ವಿಜೃಂಭಣೆಯ ಶ್ರೀ ಆದಿಶಕ್ತಿ ಗೋಣಳ್ಳಿ ಮಾರಮ್ಮ ರಥೋತ್ಸವ

ಸುತ್ತೂರು: ನಂಜನಗೂಡು ತಾಲೂಕಿನ ಗೋಣಹಳ್ಳಿ ಗ್ರಾಮದಲ್ಲಿ ಇಂದು ಗೋಣಹಳ್ಳಿ ಮಾರಮ್ಮನ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಬೆಳಗ್ಗೆ 10:50ಕ್ಕೆ ಆರಂಭವಾದ ರಥೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ಗ್ರಾಮಸ್ಥರು ರಥಕ್ಕೆ ಪೂಜೆ ಸಲ್ಲಿಸಿದರು. ಅರಿಕೆ ಕಾಣಿಕೆ ಅರ್ಪಿಸಿದರು. ನಂತರ ಮಧ್ಯಾಹ್ನ 1.10 ಗಂಟೆಗೆ ನಿರ್ವಿಘ್ನವಾಗಿ ರಥೋತ್ಸವ ನಡೆದು ಸ್ವಸ್ಥಾನ ತಲುಪಿತು. ರಥೋತ್ಸವದಲ್ಲಿ ಸ್ಥಳೀಯ ಮುಸ್ಲಿಂ ಬಾಂಧವರು ಭಾಗವಹಿಸಿ, ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ರಥ ಎಳೆಯುವ ಮೂಲಕ ಅಮ್ಮನಿಗೆ ಹರಕೆ ಸಲ್ಲಿಸಿ, ಭಾವೈಕ್ಯತೆ ಮೆರೆದರು.

ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ, ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಿಂದ ಭಕ್ತರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾದರು. ನಗರ್ಲೆ ಗ್ರಾಮದ ಮಾರಮ್ಮ ಸೇವಾ ಸಮಿತಿ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಬಿಳಿಗೆರೆ ಪೊಲೀಸ್ ಠಾಣೆ ಸಿಬ್ಬಂದಿ ಬಂದೋಬಸ್ತ್ ಕಲ್ಪಿಸಿದ್ದರು.



ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿ ಉದ್ಘಾಟನೆ ಇಂದು

ಮೈಸೂರು,ಫೆ.17- ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ 46ನೇ ತಂಡದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿಯ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಫೆ.18 ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರಿನ ಕೆ.ಪಿ.ಎನ ಹೊಸ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ಚೆನ್ನಬಸವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಶಾಲೆಗಳ ಬಳಿ ಇರುವ ಮದ್ಯದಂಗಡಿ ಮುಚ್ಚಲು ಕ್ರಮ

ಬೆಂಗಳೂರು: ಶಿಕ್ಷಣ ಸಂಸ್ಥೆಗಳ ಬಳಿ ಮದ್ಯದಂಗಡಿ ಗಳಿದ್ದು, ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ನಿರ್ವಹಣೆಗೆ ತೊಂದರೆಯುಂಟಾಗುತ್ತಿದ್ದಲ್ಲಿ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಗಳು ಅಬಕಾರಿ ಇಲಾಖೆಗೆ ದೂರು ಸಲ್ಲಿಸುವಂತೆ ಪ್ರೌಢ ಶಿಕ್ಷಣ ನಿರ್ದೇಶಕರು ಎಲ್ಲ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ. ಶಾಲೆಗಳು, ಕಾಲೇಜುಗಳ ಬಳಿ ಯಾವುದೇ ಮದ್ಯದಂಗಡಿಗಳಿದ್ದು ಅವು ಶಿಕ್ಷಣ ಮತ್ತು ನಿರ್ವಹಣೆಯಲ್ಲಿ ಸಮಸ್ಯೆಗಳನ್ನು ಉಂಟುಮಾಡಿದರೆ, ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಅಬಕಾರಿ ಇಲಾಖೆಗೆ ದೂರು ಸಲ್ಲಿಸಲು ತಿಳಿಸಲಾಗಿದೆ ಮತ್ತು ಅಬಕಾರಿ ಇಲಾಖೆಯು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದೆ.

ಸಾರ್ವಜನಿಕರು, ಶಾಲಾ ಮಕ್ಕಳು ಹಾಗೂ ಪಾಲಕರಲ್ಲಿ ವ್ಯಸನ ಮುಕ್ತಗೊಳಿಸುವ ಬಗ್ಗೆ ಜಾಗೃತಿ ಮೂಡಿಸಲು ಉಚ್ಚ ನ್ಯಾಯಾಲಯದ ಬಾಲ ನ್ಯಾಯ ಸಮಿತಿ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಕ್ರಿಯಾ ಯೋಜನೆ ರೂಪಿಸಲು ಸಮನ್ವಯ ಸಾಧಿಸುವಂತೆ ತಿಳಿಸಲಾಗಿದೆ. ಸಾರ್ವಜನಿಕರು, ಶಾಲಾ ಮಕ್ಕಳು ಮತ್ತು ಪೋಷಕರಲ್ಲಿ ವ್ಯಸನದ ಬಗ್ಗೆ ಜಾಗೃತಿ ಮೂಡಿಸಲು ಕ್ರಿಯಾ ಯೋಜನೆಯನ್ನು ರೂಪಿಸಲು ಶಿಕ್ಷಣ ಇಲಾಖೆಯು ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ, ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಮತ್ತು ಅಬಕಾರಿ ಇಲಾಖೆ ಆಯುಕ್ತರೊಂದಿಗೆ ಸಮನ್ವಯ ಸಾಧಿಸಬೇಕು ಎಂದು ಸೂಚಿಸಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಿತ್ರದುರ್ಗ ಮಂಜುನಾಥ್ ಮಾತನಾಡಿ, ಚಿತ್ರದುರ್ಗ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಮದ್ಯದಂಗಡಿಗಳು ಅಥವಾ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವ ಅಂಗಡಿಗಳ ಉಪಸ್ಥಿತಿಯ ಬಗ್ಗೆ ಅಬಕಾರಿ ಇಲಾಖೆಗೆ ಮತ್ತು ಸ್ವತಃ ವರದಿ ಮಾಡಲು ನಾವು ನಿರ್ದೇಶಿಸಿದ್ದೇವೆ, ಇದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳಿದರು.

ಮೈಸೂರು ಕೇಂದ್ರ ಗ್ರಂಥಾಲಯದಲ್ಲಿ ಪುಟಾಣಿಗಳ 'ನಲಿ-ಕಲಿ'ಗೆ ಆದ್ಯತೆ

ಉತ್ಸಾಹದಿಂದ ಆಗಮಿಸುತ್ತಿರುವ ಚಿಣ್ಣರು

ಮೈಸೂರು, ಫೆ.17(ಎಂಕೆ)- ಮೈಸೂರು ನಜರ್‌ಬಾದ್‌ನ ಪೀಪಲ್ಸ್‌ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ 'ಪುಟಾಣಿಗಳ ನಲಿ-ಕಲಿ'ಗೆ ವಿಶೇಷ ಆದ್ಯತೆ ನೀಡಲಾಗಿದೆ.

ನೂರಾರು ವಿದ್ಯಾರ್ಥಿಗಳು, ಯುವಕ-ಯುವತಿಯರು, ವೃದ್ಧರ ನೆಚ್ಚಿನ ಅಧ್ಯಯನ ತಾಣವಾಗಿರುವ ನಗರ ಕೇಂದ್ರ ಗ್ರಂಥಾಲಯ ಚಿಣ್ಣರ ಕಲಿಕಾ ಕೇಂದ್ರವೂ ಆಗಿದ್ದು, ಪ್ರೀಕೆಜಿ, ಎಲ್‌ಕೆಜಿ, ಯುಕೆಜಿ ಪುಟಾಣಿಗಳ ಕಲಿಕೆಗಾಗಿ ಮಕ್ಕಳ ವಿಭಾಗ ಕಾರ್ಯನಿರ್ವಹಿಸುತ್ತಿದೆ.

ಆಟದ ಜೊತೆಗೆ ಅಧ್ಯಯನ, ಲೆಕ್ಕಗಳ ಜೊತೆಗೆ ಸಣ್ಣ ಸಣ್ಣ ನೀತಿ ಕಥೆಗಳ ಅವಲೋಕನ ಮಾಡುವ ಸುಂದರ ವಾತಾವರಣವನ್ನು ಸೃಷ್ಟಿಸಲಾಗಿದೆ. ಏಕಕಾಲದಲ್ಲಿ 20-30 ಮಕ್ಕಳು ನಲಿಯುತ್ತಾ, ಕಲಿಯಲು ಗ್ರಂಥಾಲಯದಲ್ಲಿರುವ ಮಕ್ಕಳ ವಿಭಾಗ ಅನುಕೂಲಕರವಾಗಿದೆ.

ಗ್ರಂಥಾಲಯ ಒಳ ಪ್ರವೇಶ ಮಾಡುತ್ತಿದ್ದಂತೆ ಆಕರ್ಷಕವಾಗಿ ಚಿಣ್ಣರ ಗಮನ ಸೆಳೆಯುವ ಮಕ್ಕಳ ವಿಭಾಗದಲ್ಲಿ ಕುಳಿತುಕೊಳ್ಳಲು ಚೇರ್, ಟೇಬಲ್, ಮ್ಯಾಟ್ ಅಳವಡಿಸಿದ್ದು, ನೂರಾರು ಕಥೆಗಳ ಪುಸ್ತಕಗಳನ್ನು ಸಂಗ್ರಹಿಸಿಡಲಾಗಿದೆ. ಅಲ್ಲದೆ ನಂಬರ್, ವಾರ, ತಿಂಗಳು, ಪ್ರಾಣಿ-ಪಕ್ಷಿಗಳು, ಹೂ, ಹಣ್ಣು ಸೇರಿದಂತೆ ಪ್ರಕೃತಿಯಲ್ಲಿನ ವಿಸ್ಮಯಗಳನ್ನು ಪರಿಚಯ ಮಾಡಿಕೊಡುವ ಸಾಮಗ್ರಿಗಳನ್ನು ಪೂರೈಸಲಾಗಿದೆ. ಪ್ರತೀ ಸೋಮವಾರ, 2ನೇ ಮಂಗಳವಾರ, 4ನೇ ಶನಿವಾರ ಹಾಗೂ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ, ಉಳಿದೆಲ್ಲಾ ದಿನಗಳಲ್ಲಿಯೂ ಬೆಳಗ್ಗೆ 8.30 ರಿಂದ ರಾತ್ರಿ 8 ಗಂಟೆಯವರೆಗೂ ಮಕ್ಕಳನ್ನು ಗ್ರಂಥಾಲಯಕ್ಕೆ ಕರೆದೊಯ್ದು ಪಾಠಾಭ್ಯಾಸ ಮಾಡಿಸಬಹುದಾಗಿದೆ. ಪೋಷಕರು ತಮ್ಮ ಮಕ್ಕಳೊಂದಿಗೆ ಕುಳಿತು ಹೇಳಿಕೊಡಲು ಕೂಡ ಅವಕಾಶ ಕಲ್ಪಿಸಲಾಗಿದೆ. ಗ್ರಂಥಾಲಯದ ಮಕ್ಕಳ ವಿಭಾಗದಲ್ಲಿ ಮಹಿಳಾ ಶಿಕ್ಷಕರೊಬ್ಬರು, ಆಯಾ ಮಹಿಳೆಯೊಬ್ಬರು ಕೆಲಸ ಮಾಡುತ್ತಿದ್ದು, ಬರುವ ಮಕ್ಕಳ ಕಲಿಕೆಯ ಜೊತೆಗೆ ಆರೈಕೆಯ ಕಡೆಗೂ ಗಮನ ಹರಿಸುತ್ತಾರೆ.

ಗ್ರಂಥಾಲಯ ಆರಂಭವಾದ ನಂತರ ಮಕ್ಕಳ ಕಲಿಕೆಗೂ ಅವಕಾಶ ನೀಡಬೇಕು ಎಂಬ ಉದ್ದೇಶದಿಂದ ಮಕ್ಕಳ ವಿಭಾಗವನ್ನು ತೆರೆದು ಅಗತ್ಯ ಪಠ್ಯ-ಪುಸ್ತಕಗಳನ್ನು ಪೂರೈಕೆ ಮಾಡಲಾಗಿದೆ. ಕಲಿಕಾ ಸಾಮಗ್ರಿಗಳು, ನೂರಾರು ಕಥೆ ಪುಸ್ತಕಗಳು, ಲೆಕ್ಕ ಕಲಿಕಾ ಸಾಧನೆಗಳು ಲಭ್ಯವಿದ್ದು ಪೋಷಕರು ತಮ್ಮ ಮಕ್ಕಳನ್ನು ಕರೆದುಕೊಂಡು ಬರಲು ಮುಕ್ತ ಅವಕಾಶವಿದೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಬಿ.ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಾರಾಂತ್ಯದಲ್ಲಿ ಹೆಚ್ಚು ಮಕ್ಕಳು: ವಾರದ ದಿನಗಳಿಂತ ವಾರಾಂತ್ಯ ದಿನಗಳಲ್ಲಿ ಅದರಲ್ಲೂ ಸಂಜೆ ವೇಳೆ 10-15 ಮಕ್ಕಳು ಬರುತ್ತಿದ್ದಾರೆ. ಮನೆಯಲ್ಲೇ ಇರುವ ಗೃಹಿಣಿಯರು ತಮ್ಮ ಪುಟಾಣಿ ಮಕ್ಕಳನ್ನು ಕರೆದುಕೊಂಡು ಬಂದು ಕಲಿಸಬಹುದು. ಗ್ರಂಥಾಲಯದ ಇಬ್ಬರು ಮಹಿಳಾ ಸಿಬ್ಬಂದಿಗಳು ಸಹ ಕಾರ್ಯನಿರ್ವಹಿಸಲಿದ್ದು, ಮಕ್ಕಳ ಕಲಿಕೆಗೆ ನೆರವಾಗಲಿದ್ದಾರೆ. ಸಾರ್ವಜನಿಕರ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೋರಿದರು.





ನಜರ್‌ಬಾದ್ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದ ಮಕ್ಕಳ ಕಲಿಕಾ ವಿಭಾಗ

ಪಾರ್ಕಿಂಗ್ ಸ್ಥಳ ಐಜಾಕ್...!



ನಗರ ಕೇಂದ್ರ ಗ್ರಂಥಾಲಯದ ಎದುರಿನ ರಸ್ತೆ (ಗೌರ್ನಮೆಂಟ್ ಹೌಸ್ ರಸ್ತೆ)ಬದಿ ಪಾರ್ಕಿಂಗ್ ಸ್ಥಳವನ್ನು ಅಲ್ಲಿರುವ ಖಾಸಗಿ ಗ್ಯಾಸ್ ಏಜೆನ್ಸಿ ತನ್ನ ಲಾರಿ, ಗೂಡ್ಸ್ ಆಟೋಗಳನ್ನು ನಿಲ್ಲಿಸಲು ಬಳಸಿಕೊಳ್ಳುತ್ತಿದೆ. ಇದರಿಂದ ಗ್ರಂಥಾಲಯಕ್ಕೆ ಬರುವ ಓದುಗರು, ಸಮೀಪದ ಕೆನರಾ ಬ್ಯಾಂಕ್‌ಗೆ ಬರುವ ಉದ್ಯೋಗಿಗಳು ಹಾಗೂ ಇನ್ನಿತರೆ ಸಾರ್ವಜನಿಕರು ತಮ್ಮ ಸ್ಕೂಟರ್, ಬೈಕ್ ಮತ್ತು ಕಾರುಗಳನ್ನು ಪಾರ್ಕಿಂಗ್ ಮಾಡಲು ತೊಂದರೆಯಾಗುತ್ತಿದೆ. ಒಮ್ಮೆಗೆ ಮೂರ್‍ನಾಲ್ಕು ಲಾರಿಗಳು, ಗೂಡ್ಸ್ ಆಟೋಗಳನ್ನು ನಿಲ್ಲಿಸಿಕೊಂಡು ಲೋಡ್-ಅನ್‌ಲೋಡ್ ಮಾಡಲು ಸಾರ್ವಜನಿಕ ಪಾರ್ಕಿಂಗ್ ಸ್ಥಳವನ್ನು ಬಳಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಸಂಚಾರ ಪೊಲೀಸರು ಕೂಡಲೇ ಗಮನಹರಿಸಿ ಅನುಕೂಲ ಮಾಡಿಕೊಡಬೇಕು ಎಂದು ಗ್ರಂಥಾಲಯಕ್ಕೆ ಬರುವ ಓದುಗರು ಒತ್ತಾಯಿಸಿದ್ದಾರೆ.

ಕಾರ್ಖಾನೆ ಹಂಗಾಮಿ ನೌಕರರ ವಜಾ

ಸಕ್ಕರೆ ಕಾರ್ಖಾನೆ ಚಿಮಣಿ ಮೇಲೆ ಹತ್ತಿ ದಿನವಿಡೀ ನೌಕರನ ಪ್ರತಿಭಟನೆ

ಪಾಂಡವಪುರ, ಫೆ:17– ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಹೊರ ಗುತ್ತಿಗೆ ಹಾಗೂ ಹಂಗಾಮಿ ನೌಕರರನ್ನು ಕೆಲಸದಿಂದ ತೆಗೆದು ಹಾಕಿರುವ ನಿರಾಣಿ ಶುಗರ್ಸ್ ಮಾಲೀಕರ ನಡೆಯನ್ನು ಖಂಡಿಸಿ ನೌಕರನೊಬ್ಬ ಕಾರ್ಖಾನೆಯ ಚಿಮಣಿ ಏರಿ ಪ್ರತಿಭಟನೆ ನಡೆಸಿರುವ ಆತಂಕಕಾರಿ ಘಟನೆ ಸೋಮವಾರ ನಡೆದಿದೆ.

ಕಾರ್ಖಾನೆಯ ಆಡಳಿತ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ನೌಕರರ ಪೈಕಿ ರಾಮಕೃಷ್ಣ ಎಂಬ ನೌಕರ ಕಾರ್ಖಾನೆಯ ಆಡಳಿತ ಮಂಡಳಿಯವರ ನಡೆ ಖಂಡಿಸಿ ಸೋಮವಾರ ಮುಂಜಾನೆ ಕಾರ್ಖಾನೆ ಚಿಮಣಿ ಏರಿ ಅಧಿಕಾರಿಗಳ ನಡೆಯ ವಿರುದ್ಧ ಆಕ್ರೋಶ ಹೊರಹಾಕಿದ್ದಾನೆ.

ಪಿಎಸ್ಎಸ್‌ಕೆ ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ನಿರಾಣಿ ಶುಗರ್ಸ್ ಕಂಪನಿಗೆ ಗುತ್ತಿಗೆ ನೀಡಿದೆ. ಗುತ್ತಿಗೆ ನೀಡುವ ಸಂದರ್ಭದಲ್ಲಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ 109 ನೌಕರರನ್ನು ಯಥಾವತ್ತಾಗಿ ಮುಂದುವರೆಸಬೇಕು, ನೌಕರರು ಕೆಲಸ ಮಾಡುವುದಿಲ್ಲ ಎಂದರೆ ಅವರಿಗೆ ವಿಆರ್‌ಎಸ್ ನೀಡಲು ಅವಕಾಶ ನೀಡಬೇಕು ಎಂದು ಕರಾರು ಮಾಡಿಕೊಳ್ಳಲಾಗಿದೆ. ಆದರೆ, ನಿರಾಣಿ ಶುಗರ್ಸ್ ಆಡಳಿತ ಮಂಡಳಿಯ ಅಧಿಕಾರಿಗಳು ಕರಾರು ನಿಯಮವನ್ನು ಗಾಳಿಗೆ ತೂರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ 21 ನೌಕರರನ್ನು ಏಕಾಏಕಿ ಕೆಲಸದಿಂದ ವಜಾಗೊಳಿಸಿದ್ದಾರೆ. ಆ ಖಾಲಿ ಜಾಗಕ್ಕೆ ಉತ್ತರ ಭಾರತ ನೌಕರರನ್ನು ಸೇರಿಸಿಕೊಳ್ಳುವ ಹುನ್ನಾರ ಮಾಡುತ್ತಿದ್ದಾರೆ. ಕೋರ್ಟ್ ಗುತ್ತಿಗೆ ಕರಾರಿನಂತೆ ನೌಕರರನ್ನು ಯಥಾವತ್ತಾಗಿ ಮುಂದುವರೆಸುವಂತೆ ಆದೇಶಿಸಿದರೂ ಆಡಳಿತ ಮಂಡಳಿಯವರು ನ್ಯಾಯಾಲಯದ ಆದೇಶ ವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಕಳೆದ ಒಂದು ವಾರದಿಂದ ನೌಕರರು ಪ್ರತಿಭಟನೆ ನಡೆಸುತ್ತಿದ್ದರು.

ಕಾರ್ಖಾನೆ ಆಡಳಿತ ಮಂಡಳಿಯವರು ಪ್ರತಿಭಟನೆ ಹಾಗೂ ನೌಕರರ ಮನವಿಗೆ ಸ್ಪಂದನೆ ನೀಡದ ಹಿನ್ನೆಲೆಯಲ್ಲಿ ಸೋಮವಾರ ಬೆಳಿಗ್ಗೆ ನೌಕರನೊಬ್ಬ ಏಕಾಏಕಿ ಕಾರ್ಖಾನೆಯ ಚಿಮಣಿ ಏರಿ ಪ್ರತಿಭಟಿಸಿ ಅಧಿಕಾರಿಗಳ ನಡೆ ಖಂಡಿಸಿದ್ದಾನೆ. ನೌಕರ ಚಿಮಣಿ ಏರಿ ಪ್ರತಿಭಟನೆ ನಡೆಸುತ್ತಿರುವ ವಿಷಯ ತಿಳಿದ ಪೊಲೀಸರು, ತಹಸೀಲ್ದಾರ್ ಹಾಗೂ ಕಾರ್ಮಿಕ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಚಿಮಣಿ ಏರಿರುವ ವ್ಯಕ್ತಿಯನ್ನು ಕೆಳಗೆ ಇಳಿಯುವಂತೆ ಸಾಕಷ್ಟು ಮನವರಿಕೆ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಸಂಜೆ ಐದು ಗಂಟೆಯಾದರು ನೌಕರ ಚಿಮಣಿಯ ಮೇಲೆ ಇದ್ದು ಪ್ರತಿಭಟನೆ ಮುಂದುವರೆಸಿದ್ದ. ರೈತ ನಾಯಕಿ ಸುನೀತ ಪುಟ್ಟಣ್ಣಯ್ಯ ಅವರು ಸಹ ಸ್ಥಳಕ್ಕೆ ಆಗಮಿಸಿ ಕಾರ್ಖಾನೆಯ ನೌಕರರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ ನಂತರ ಕೆಳಗೆ ಇಳಿದರು.



ಕಾರ್ಖಾನೆಯ ಚಿಮಣಿ ಏರಿ ಪ್ರತಿಭಟನೆ ನಡೆಸುತ್ತಿರುವ ನೌಕರ ರಾಮಕೃಷ್ಣ.

ಮಹಿಳೆಯರು ಗುಡಿ ಕೈಗಾರಿಕೆ ಆರಂಭಿಸಿ ಆರ್ಥಿಕ ಪ್ರಗತಿ ಸಾಧಿಸಬೇಕು: ಶಾಸಕ ಹೆಚ್.ಟಿ.ಮಂಜು

ಕೆ.ಆರ್.ಪೇಟೆ,ಫೆ.17–ತಾಲೂಕಿನ ಮುರುಕನಹಳ್ಳಿ ಗ್ರಾಮದಲ್ಲಿ ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹಾಗೂ ಜ್ಞಾನ ಭಾರತಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಮುರುಕನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳಾ ಸಂಘಗಳಿಗೆ ಸಾಲದ ಚೆಕ್ ವಿತರಣೆ ಹಾಗೂ ಹೊಲಿಗೆ ತರಬೇತಿ ಕೇಂದ್ರ ಉದ್ಘಾಟನೆ ಹಾಗೂ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಕಾರ್ಯಕ್ರಮವು ಮುರುಕನಹಳ್ಳಿ ಗ್ರಾಮದಲ್ಲಿ ನಡೆಯಿತು.



ಮಹಿಳಾ ಸಂಘಗಳಿಗೆ ಸಾಲದ ಚೆಕ್ ವಿತರಣೆ ಹಾಗೂ ಹೊಲಿಗೆ ತರಬೇತಿ ಕೇಂದ್ರ ಹಾಗೂ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಕಾರ್ಯಕ್ರಮವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಶಾಸಕ ಹೆಚ್.ಟಿ.ಮಂಜು ಅವರು ಮಹಾಸಭೆ ಹಾಗೂ ಹೊಲಿಗೆ ತರಬೇತಿ ಕೇಂದ್ರ ಉದ್ಘಾಟಿಸಿ, ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲದ ಚೆಕ್ಕುಗಳನ್ನು ವಿತರಣೆ ಮಾಡಿ ಮಾತನಾಡಿದರು.

ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕು. ಗ್ರಾಮ ಪಂಚಾಯಿತಿ ಹಾಗೂ ಸರ್ಕಾರದಿಂದ ನೀಡಲಾಗುವ ಸಾಲದ ಮೊತ್ತವನ್ನು ಸ್ವಯಂ ಉದ್ಯೋಗ ಕೈಗೊಳ್ಳಲು ಬಳಕೆ ಮಾಡಬೇಕು. ಪ್ರಮುಖವಾಗಿ ಗುಡಿ ಕೈಗಾರಿಕೆಗಳಾದ ಮೇಣದ ಬತ್ತಿ ತಯಾರಿಕೆ, ಗಂಧದ ಕಡ್ಡಿ ತಯಾರಿಕೆ, ಊಟದ ಎಲೆ, ಊಟದ ಪ್ಲೇಟ್ ತಯಾರಿಕೆ, ಫೆನಾಯಿಲ್, ಬ್ಲೀಚಿಂಗ್ ಪೌಡರ್ ತಯಾರಿಕೆಯಂತಹ ಸಣ್ಣ ಉದ್ಯಮವನ್ನು ಸ್ಥಾಪನೆ ಮಾಡಿ ಕಡಿಮೆ ಬಂಡವಾಳದಿಂದ ಹೆಚ್ಚು ಲಾಭಗಳಿಸಬಹುದು. ಇದರಿಂದ ಹೆಚ್ಚು ಹೆಚ್ಚು ಲಾಭಗಳಿಸಿ ಮಹಿಳೆಯರು ಆರ್ಥಿಕ ಸಬಲೀಕರಣ ಸಾಧಿಸಬೇಕು ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರ ಧರ್ಮಪತ್ನಿ ರಮಾ ಮಂಜು, ಮಹಿಳಾ ಸಂಘಗಳಿಗೆ ಸಾಲದ ಚೆಕ್ಕುಗಳನ್ನು ವಿತರಣೆ ಮಾಡಿದರು. ಬರೋಡಾ ಬ್ಯಾಂಕಿನ ವೆಬ್‌ಸಿಟಿ ಸಂಸ್ಥೆಯ ಪ್ರಸನ್ನ ಕುಮಾರ್, ರವಿ, ತಾಲೂಕು ಆರ್ಥಿಕ ಸಾಕ್ಷರತಾ ಅಧಿಕಾರಿ ಪ್ರಮೋದ್ ತರಬೇತಿ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ.ಉಪಾಧ್ಯಕ್ಷ ಪುನೀತ್‌ಕುಮಾರ್, ಪಿಡಿಓ ಮುಜಾಕಿರ್, ಒಕ್ಕೂಟದ ಅಧ್ಯಕ್ಷೆ ಪೂರ್ಣಿಮ ಆನಂದ್, ಗ್ರಾಮ ಪಂಚಾಯಿತಿ ಸದಸ್ಯರಾದ ಜಗದೀಶ್, ದೇವರಾಜು, ಹೆಚ್.ಟಿ.ಜಗದೀಶ್, ಧನಂಜಯ, ಕುಮಾರಸ್ವಾಮಿ, ಪೂರ್ಣಿಮಾ, ರತ್ನಮ್ಮ, ಲಲಿತಾ, ಪುಷ್ಪ, ನಂದಿನಿ, ಲೀಲಾವತಿ, ಶೋಭ, ತಾಲೂಕು ಸಂಜೀವಿನಿ ಯೋಜನೆಯ ಮಹಿಳಾ ಒಕ್ಕೂಟದ ಮೇಲ್ವಿಚಾರಕ ನಂಜುಂಡಯ್ಯ, ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಒಕ್ಕೂಟದ ಅಧ್ಯಕ್ಷೆ ಪೂರ್ಣಿಮಾ, ಉಪಾಧ್ಯಕ್ಷೆ ಬೇಬಿ, ಕಾರ್ಯದರ್ಶಿ ಕುಮಾರಿ, ಸಹ ಕಾರ್ಯದರ್ಶಿ ಗುಲ್ನಾಜ್ ಭಾನು, ಖಜಾಂಚಿ ಗಂಗಮ್ಮ ಹಾಗೂ ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು, ನೂರಾರು ಮಂದಿ ಸಾರ್ವಜನಿಕರು ಭಾಗವಹಿಸಿದ್ದರು.

ಶ್ರೀರಂಗಪಟ್ಟಣ ಪುರಸಭೆಯಲ್ಲಿ ಜಿಪಂ ಸಿಇಒರಿಂದ ಅಧಿಕಾರಿಗಳ ಸಭೆ

ಶ್ರೀರಂಗಪಟ್ಟಣ: ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಾಗ ಎಚ್ಚರದಿಂದ ಕೆಲಸ ಮಾಡಬೇಕು ಎಂದು ಜಿಪಂ ಸಿಇಒ ಕೆ.ಆರ್.ನಂದಿನಿ ಸಲಹೆ ನೀಡಿದರು.

ಪಟ್ಟಣದ ಪುರಸಭೆ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿ ಇಲಾಖೆ ಸರ್ಕಾರಿ ಯೋಜನೆಗಳ ಅನುಷ್ಠಾನ ಸಂಬಂಧ ಕ್ರಿಯಾ ಯೋಜನೆ ರೂಪಿಸಬೇಕು. ಅದಕ್ಕೆ ಪೂರಕವಾಗಿ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. ಗುರಿ ನಿಗದಿಪಡಿಸಿಕೊಂಡು ಜನಸ್ನೇಹಿಯಾಗಿ ಕೆಲಸ ಮಾಡಬೇಕು. ಸರ್ಕಾರದ ಸವಲತ್ತುಗಳು ಅರ್ಹ ಫಲಾನುಭವಿಗಳಿಗೆ ಸಿಗುವಂತಾಗಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ಅಧಿಕಾರಿ ಅಮೃತಾ ಅವರಿಗೆ ಸೂಚಿಸಿದರು. ತಾಲೂಕಿನಲ್ಲಿ ಕಳೆದ ತಿಂಗಳು ಒಂದು ಪೋಕ್ಸೊ ಪ್ರಕರಣ ಮತ್ತು ಒಂದು ಬಾಲ್ಯವಿವಾಹ ಪ್ರಕರಣ ನಡೆದಿದ್ದು, ಸಂಬಂಧಿಸಿದವರ ವಿರುದ್ಧ ಕ್ರಮ ವಹಿಸಲಾಗಿದೆ ಎಂದು ಅಮೃತಾ ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ ಎಂದು ಅವರು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಪಿ.ಮಹೇಶ್ ಅವರಿಗೆ ಸೂಚಿಸಿದರು. ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳು ಸುಧಾರಿತ ಬೆಳೆ ಪದ್ಧತಿ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಎ.ಬಿ.ವೇಣು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಗಾಯತ್ರಿ, ಸಮಾಜ ಕಲ್ಯಾಣ ಇಲಾಖೆಯ ಎಂ.ಕೆ ಮೇಘನಾ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ರಮಾ, ನರೇಗಾ ಯೋಜನೆಯ ಪಿ.ಸುಮಾ ಇದ್ದರು

ಕರ್ನಾಟಕ ಸಂಘಕ್ಕೆ ಹೊಸ ಆಯಾಮ ತಂದುಕೊಟ್ಟವರು ಜಯಪ್ರಕಾಶ್‌ಗೌಡ

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಭಿಮತ

ಮಂಡ್ಯ,ಫೆ17– ರಂಗಭೂಮಿಗೆ ನೂರಾರು ಕಲಾವಿದರನ್ನು ಕೊಡುಗೆಯಾಗಿ ನೀಡಿದ ಜಯಪ್ರಕಾಶಗೌಡ ಅವರು ಕರ್ನಾಟಕ ಸಂಘಕ್ಕೆ ಹೊಸ ಆಯಾಮ ತಂದು ಕೊಟ್ಟು ರಾಜ್ಯದಲ್ಲಿ ಮನೆಮಾತಾಗುವಂತೆ ಮಾಡಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಭಿಪ್ರಾಯಪಟ್ಟರು.



ಜಯರಾಂ ರಾಯಪುರ ಅವರಿಗೆ ಸಂಘಟನಾ ಪ್ರಶಸ್ತಿ ಹಾಗೂ ಬಿ.ಸುರೇಶ್ ಅವರಿಗೆ ಪ್ರೊ.ಜಯಪ್ರಕಾಶಗೌಡ ರಂಗಭೂಮಿ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಕರ್ನಾಟಕ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪ್ರಥಮ ವರ್ಷದ ಪ್ರೊ.ಬಿ. ಜಯಪ್ರಕಾಶ ಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಸಂಘದಲ್ಲಿ 60 ಪ್ರಶಸ್ತಿಗಳನ್ನು ಸ್ಥಾಪಿಸಿರುವ ಹಿರಿಮೆ ಹೊಂದಿರುವ ಜಯಪ್ರಕಾಶಗೌಡ ಅವರೊಬ್ಬ ಎತ್ತರದ ಕನಸುಗಾರರಾಗಿ ಕನಸುಗಳನ್ನು ಆಗುಮಾಡುವ ಕರ್ತೃತ್ವ ಮತ್ತು ರಚನಾತ್ಮಕ ಶಕ್ತಿ ಇದೆ. ಕರ್ನಾಟಕದ ಸಂಘ ಸಾಹಿತ್ಯ ಸಾಂಸ್ಕೃತಿಕ ಕೇಂದ್ರವಾಗಿದೆ. ಮಂಡ್ಯದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಜಯಪ್ರಕಾಶಗೌಡರು 75ರ ಹರೆಯದವರಾದರೂ 25ರ ಯುವ ಮನಸ್ಸು ಹೊಂದಿದ್ದಾರೆ. ಕರ್ನಾಟಕ ಸಂಘವನ್ನೇ ಬದುಕು ಮತ್ತು ಆದರ್ಶವಾಗಿ ರೂಪಿಸಿಕೊಂಡಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಮಾತನಾಡಿ, ಜಯಪ್ರಕಾಶಗೌಡರು ಚೈತನ್ಯದ ಚಿಲುಮೆಯಾಗಿ ಛಲ ಬಿಡದೆ ಹಿಡಿದ ಕೆಲಸವನ್ನು ಸಾಧಿಸುವ ಮನೋಭಾವ ಹೊಂದಿದ್ದಾರೆ. ಪ್ರಶಸ್ತಿ ಮತ್ತು ಪ್ರಶಸ್ತಿ ಪುರಸ್ಕೃತರಿಗೆ ಗೌರವ ತಂದು ಕೊಡುವ ರೀತಿ ಸಾಧಕರನ್ನು ಆಯ್ಕೆ ಮಾಡಿದ್ದಾರೆ.ಇದರಿಂದ ಪ್ರಶಸ್ತಿಗೆ ಒಂದು ಗೌರವ ದೊರಕಿದೆ ಎಂದರು.

ವಿಧಾನಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿ, ಕೆ.ವಿ.ಶಂಕರಗೌಡರ ಗರಡಿಯಲ್ಲಿ ಪಳಗಿದ ಜೆಪಿಯವರು ಸಾಹಿತ್ಯ, ಕಲೆ, ರಂಗಭೂಮಿ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಿಗೆ ಸಮಾಜಮುಖಿಯಾಗಿ ವೇದಿಕೆಯನ್ನು ರೂಪಿಸಿದವರು ಎಂದರು.

ಜಲ ಸಾರಿಗೆ ನಿಗಮದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಯರಾಂ ರಾಯಪುರ ಅವರಿಗೆ ಸಂಘಟನಾ ಪ್ರಶಸ್ತಿ ಹಾಗೂ ಚಲನಚಿತ್ರ, ರಂಗಭೂಮಿ ನಿರ್ದೇಶಕ ಬಿ.ಸುರೇಶ್ ಅವರಿಗೆ ಪ್ರೊ.ಜಯಪ್ರಕಾಶಗೌಡ ರಂಗಭೂಮಿ ಪ್ರಶಸ್ತಿಯನ್ನು 50,000 ರೂ. ನಗದು ಮತ್ತು ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಜಲಸಾರಿಗೆ ನಿಗಮದ ಸಿಇಓ ಜಯರಾಂ ರಾಯಪುರ, ರಂಗಭೂಮಿ ನಿರ್ದೇಶಕ ಬಿ.ಸುರೇಶ್ ಮಾತನಾಡಿದರು. ಶ್ರೀ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ, ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮತ್ತು ಅವರ ಪತ್ನಿ ಕೆ.ಎಸ್.ಮಂಜುಳಾ, ಕರ್ನಾಟಕ ಸಂಘದ ಪದಾಧಿಕಾರಿಗಳಾದ ಹರೀಶ್‌ಕುಮಾರ್, ಲೋಕೇಶ್ ಚಂದಗಾಲು, ಮಂಜುಳಾ ಉದಯಶಂಕರ್, ಅನಿತಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ತಾಯಿ, ಪತ್ನಿ, ಪುತ್ರನ ಹತ್ಯೆ; ಯಜಮಾನ ಆತ್ಮಹತ್ಯೆ

ಬರೆದಿರುವುದಲ್ಲದೆ, ತನ್ನ ಕುಟುಂಬದವರಿಗಾಗಲೀ, ಸ್ನೇಹಿತರಿಗಾಗಲೀ ಯಾರೂ ತೊಂದರೆ ಕೊಡಬೇಡಿ ಎಂದು ಮನವಿ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆಯಾದರೂ, ಈ ಸಾವುಗಳಿಗೆ ಇದುವೇ ನೈಜ ಕಾರಣವೇ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಚೇತನ್ ಬರೆದಿರುವ ಡೆತ್‌ನೋಟ್‌ನಲ್ಲಿ ತಾನು ಬ್ಯಾಂಕ್ ಆಫ್ ಬರೋಡಾದಲ್ಲಿ ಸಾಲ ಪಡೆದು ಸಂಕಲ್ಪ್ ಶೆರಿನ್ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಫ್ಲಾಟ್‌ಗಳ ಖರೀದಿಸಿದ್ದು, ಈ ಸಾಲದ ಬಗ್ಗೆ ಮಾತ್ರ ಉಲ್ಲೇಖಿಸಿದ್ದಾರೆ ಎಂದು ಹೇಳಲಾಗಿದ್ದು, ಈ ಅಂಶ ಸ್ವಲ್ಪ ಅನುಮಾನ ಮೂಡಿಸುವಂತಿದೆ ಎಂದು ಮೂಲಗಳು ತಿಳಿಸಿವೆ. ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ನಲ್ಲಿ ಚೇತನ್ ಎರಡು ಫ್ಲಾಟ್‌ಗಳನ್ನು ಖರೀದಿಸಿದ್ದು, ಫ್ಲಾಟ್ ಸಂಖ್ಯೆ 6ರಲ್ಲಿ ತಾಯಿ ಪ್ರಿಯಂವಧ ವಾಸಿಸುತ್ತಿದ್ದರೆ, ಫ್ಲಾಟ್ ಸಂಖ್ಯೆ 7ರಲ್ಲಿ ಚೇತನ್ ಪತ್ನಿ ಹಾಗೂ ಪುತ್ರನೊಂದಿಗೆ ವಾಸಿಸುತ್ತಿದ್ದರು. ಪುತ್ರ ಕುಶಾಲ್ ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ 10ನೇ ತರಗತಿ ಓದುತ್ತಿದ್ದ. ಚೇತನ್ ಅವರು ಪತ್ನಿ ಹೆಸರಿನಲ್ಲಿ ಏಜೆನ್ಸಿ ಮಾಡಿಕೊಂಡು ವ್ಯವಹಾರ ನಡೆಸುತ್ತಿದ್ದರು.

ಚೇತನ್ ಅವರು ಇಂದು ಮುಂಜಾನೆ ಅಮೆರಿಕಾದಲ್ಲಿರುವ ಸಹೋದರನಿಗೆ ವಾಟ್ಸಾಪ್ ಸಂದೇಶ ರವಾನಿಸಿದ ತಕ್ಷಣವೇ ಅವರು ಮೈಸೂರಿನ ಅರವಿಂದನಗರದಲ್ಲಿ ವಾಸವಿರುವ ಚೇತನ್ ಅವರ ಮಾವ (ಪತ್ನಿ ರೂಪಾಲಿ ತಂದೆ) ಡಿ. ಸೇತುರಾಮನ್ ಅವರಿಗೆ ವಾಟ್ಸಾಪ್ ಕಾಲ್ ಮೂಲಕ ಮುಂಜಾನೆ 4 ಗಂಟೆಯಲ್ಲಿ ವಿಷಯ ತಿಳಿಸಿದ್ದು, ಚೇತನ್ ಅಪಾರ್ಟ್‌ಮೆಂಟ್‌ಗೆ ಹೋಗಿ ನೋಡುವಂತೆ ಹೇಳಿದ್ದಾರೆ. ಇದರಿಂದ ಗಾಬರಿಗೊಂಡ ಸೇತುರಾಮನ್ ಪತ್ನಿಯೊಡಗೂಡಿ 4.15ರ ಸುಮಾರಿಗೆ ಚೇತನ್ ವಾಸವಿದ್ದ ಅಪಾರ್ಟ್‌ಮೆಂಟ್‌ಗೆ ಹೋಗಿ ಫ್ಲಾಟ್‌ಗಳ ಬಾಗಿಲು ಬಡಿದಾಗ ತೆಗೆಯಲಿಲ್ಲ. ಸೂಕ್ಷ್ಮವಾಗಿ ಗಮನಿಸಿದಾಗ ಎರಡೂ ಫ್ಲಾಟ್‌ಗಳ ಕೀಗಳು ಡೋರ್‌ಲಾಕ್‌ಗೆ ಸಿಕ್ಕಿಸಿರುವುದು ಕಂಡು ಬಂದಿದೆ. ಬಾಗಿಲು ತೆರೆದು ನೋಡಿದಾಗ ಫ್ಲಾಟ್ ಸಂಖ್ಯೆ 6ರಲ್ಲಿ ಚೇತನ್ ತಾಯಿ ಪ್ರಿಯಂವಧ ಮೃತದೇಹ ಹಾಗೂ ಫ್ಲಾಟ್ ಸಂಖ್ಯೆ 7ರ ಬೆಡ್ ರೂಮ್‌ನಲ್ಲಿ ರೂಪಾಲಿ ಮತ್ತು ಕುಶಾಲ್ ಮೃತದೇಹಗಳು ಅಕ್ಕಪಕ್ಕದಲ್ಲಿ ಬಿದ್ದಿದ್ದರೆ, ಚೇತನ್ ಮುಖಕ್ಕೆ ಬಿಳಿ ಬಟ್ಟೆ ಸುತ್ತಿಕೊಂಡು ಸೀಲಿಂಗ್‌ಗೆ ನೈಲಾನ್ ಹಗ್ಗದಿಂದ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಭೇಟಿ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಜಾಹ್ನವಿ, ವಿದ್ಯಾರಣ್ಯಪುರಂ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮೋಹಿತ್ ಸಹದೇವ ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಚೇತನ್ ಬರೆದಿರುವ ಡೆತ್‌ನೋಟ್ ಮತ್ತು ವಾಟ್ಸಾಪ್‌ನಲ್ಲಿ ರವಾನೆಯಾದ ವಾಯ್ಸ್ ರೆಕಾರ್ಡ್ ಅನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಿರುವುದಾಗಿ ಮೂಲಗಳು ತಿಳಿಸಿವೆ. ಮೃತದೇಹಗಳನ್ನು ಕೆ.ಆರ್. ಆಸ್ಪತ್ರೆ ಶವಾಗಾರಕ್ಕೆ ಕೊಂಡೊಯ್ಯಲಾಗಿದ್ದು, ಮರಣೋತ್ತರ ಪರೀಕ್ಷೆ ಮುಗಿದ ಬಳಿಕ ಅಮೆರಿಕದಿಂದ ಚೇತನ್ ಸಹೋದರ ಭರತ್ ಬಂದ ನಂತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಹೇಳಲಾಗಿದೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಕೊಲೆ ಹಾಗೂ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ!

ಖಾಸಗಿ ಕಂಪನಿಯಲ್ಲಿ ಜನರಲ್ ಮ್ಯಾನೇಜರ್ ಆಗಿದ್ದರು. ಮದುವೆ ನಂತರ ಉಡುಪಿಯ ಎಲ್ ಅಂಡ್ ಟಿ ಕಂಪನಿಯಲ್ಲಿ ಜನರಲ್ ಮ್ಯಾನೇಜರ್ ನಂತರ ಮಧ್ಯಪ್ರದೇಶ ಹಾಗೂ ಹೈದರಾಬಾದ್‌ನ ಪ್ರತಿಷ್ಠಿತ ಕಂಪನಿಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರು. ಇದಾದ ಬಳಿಕ ಕುಟುಂಬದೊಂದಿಗೆ ಸೌದಿ ಅರೇಬಿಯಾದ ರಿಯಾದ್‌ಗೆ ಹೋಗಿ 6 ವರ್ಷಗಳ ಕಾಲ ಅಲ್ಲಿನ ಖಾಸಗಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು.

ಕೋವಿಡ್ ಸಂದರ್ಭದಲ್ಲಿ ಮೈಸೂರಿಗೆ ಹಿಂತಿರುಗಿದ ಅವರು, ಈ ಹಿಂದೆಯೇ ಖರೀದಿಸಿದ್ದ ಸಂಕಲ್ಪ್ ಶಿರಿನ್ ಅಪಾರ್ಟ್‌ಮೆಂಟ್‌ನ ಫ್ಲಾಟ್‌ನಲ್ಲಿ ವಾಸವಿದ್ದುಕೊಂಡು, ವಿದೇಶಕ್ಕೆ ಉತ್ತರ ಭಾರತದಿಂದ ಕಾರ್ಮಿಕರನ್ನು ಕಳುಹಿಸುವ ವ್ಯವಹಾರ ನಡೆಸುತ್ತಿದ್ದರು. ಅವರನ್ನು ನೋಡಿದರೆ ಯಾವುದೇ ಸಮಸ್ಯೆಗೆ ಸಿಲುಕಿದವರಂತೆ ಕಂಡುಬರುತ್ತಿರಲಿಲ್ಲ. ಎಲ್ಲರೊಂದಿಗೂ ಅನ್ಯೂನ್ಯವಾಗಿದ್ದರು ಎಂದು ಅವರನ್ನು ಬಲ್ಲವರು ಹೇಳುತ್ತಿದ್ದಾರೆ. ತಮ್ಮ ಈ ನಿರ್ಧಾರಕ್ಕೆ ಹಣಕಾಸಿನ ತೊಂದರೆ ಹಾಗೂ ಸಾಲ ಕಾರಣ ಎಂದು ಚೇತನ್ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ಈ ವಿಷಯದ ಬಗ್ಗೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಚೇತನ್ ಪತ್ನಿ ರೂಪಾಲಿಯವರ ತಂದೆ ಸೇತುರಾಮನ್ ಅವರು, ಸುಮಾರು 6 ತಿಂಗಳ ಹಿಂದೆ ಮಗಳು ರೂಪಾಲಿ ತಮಗೆ ಸ್ವಲ್ಪ ಹಣದ ತೊಂದರೆ ಇರುವ ಬಗ್ಗೆ ತಿಳಿಸಿದ್ದರು. ನಾನು ಅವರಿಗೆ ಹಣ ಸಹಾಯ ಮಾಡುವುದಾಗಿ ಹೇಳಿದ್ದೆ. ಆದರೆ, ಇದಾದ ಸ್ವಲ್ಪ ದಿನದಲ್ಲೇ ಸ್ನೇಹಿತರು ಸಹಾಯ ಮಾಡಿದ್ದಾರೆ. ಹಣಕಾಸಿನ ಸಮಸ್ಯೆ ಪರಿಹಾರವಾಗಿದೆ ಎಂದು ಪುತ್ರಿ ತಿಳಿಸಿರುವುದಾಗಿ ಅವರು ಹೇಳಿದ್ದಾರೆ.

ಕೊನೆ ಬಾರಿ ಹುಟ್ಟೂರು ಗೊರೂರಲ್ಲಿ ನರಸಿಂಹಸ್ವಾಮಿಯ ದರ್ಶನ; ಪೂಜೆ ಸಲ್ಲಿಕೆ



ದುರಂತ ಅಂತ್ಯಕಂಡ ಕುಟುಂಬ ಸದಸ್ಯರು

ಮೈಸೂರು, ಫೆ 17– ಚೇತನ್ ಅವರು ಭಾನುವಾರ ಬೆಳಗ್ಗೆ ಕುಟುಂಬ ಸಮೇತರಾಗಿ ಹುಟ್ಟೂರು ಹಾಸನ ಜಿಲ್ಲೆ ಗೊರೂರಿನಲ್ಲಿರುವ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಬಂದಿದ್ದಾರೆ. ಭಾನುವಾರ ಬೆಳಗ್ಗೆ ಚೇತನ್ ಅವರು ಕುಟುಂಬಸಮೇತರಾಗಿ ಗೊರೂರಿನ ದೇವಸ್ಥಾನಕ್ಕೆ ಹೋಗಿ ಮಧ್ಯಾಹ್ನ ಮೈಸೂರಿಗೆ ಹಿಂತಿರುಗಿದ್ದಾರೆ. ಅರವಿಂದನಗರದಲ್ಲಿರುವ ರೂಪಾಲಿ ತಂದೆ ಸೇತುರಾಮನ್ ಮನೆಗೆ ತೆರಳಿದ್ದ ಈ ಕುಟುಂಬ ಅಲ್ಲೇ ಊಟ ಮಾಡಿ ಮಧ್ಯಾಹ್ನ ತಮ್ಮ ಫ್ಲಾಟ್‌ಗೆ ಹಿಂತಿರುಗಿದ್ದಾರೆ. ಈ ಕುಟುಂಬ ತಮ್ಮ ಮನೆಯಲ್ಲಿ ಖುಷಿಯಾಗಿಯೇ ಊಟ ಮಾಡಿ ಹೋದರು. ಅವರು ಇಂತಹ ಒಂದು ನಿರ್ಧಾರಕ್ಕೆ ಬರುತ್ತಾರೆ ಎಂಬ ಸಣ್ಣ ಸುಳಿವು ಕೂಡ ಅವರ್‍ಯಾರ ಮುಖದಲ್ಲೂ ಕಂಡುಬಂದಿಲ್ಲ ಎಂದು ಸೇತುರಾಮನ್ ಪೊಲೀಸರು ಹಾಗೂ ಆತ್ಮೀಯರೊಂದಿಗೆ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

ಶಾಲಾ ಶಿಕ್ಷಣ ಇಲಾಖೆ ಮೈಸೂರು ದಕ್ಷಿಣ ವಲಯದ ಬಿಇಓ ಕಚೇರಿಯಿಂದ

ವಿಶೇಷ ಬೋಧನಾ ಕಾರ್ಯಕ್ರಮ 'ಕಲಿಕಾಮೃತ'ಕ್ಕೆ ಚಾಲನೆ

ಕಲಿಕೆಯಲ್ಲಿ ಹಿಂದುಳಿದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಆಯೋಜನೆ



ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಸೋಮವಾರ ಕಲಿಕಾಮೃತ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಡಿಡಿಪಿಐ ಎಸ್.ಟಿ.ಜವರೇಗೌಡ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಎದುರಾಗುವ ತೊಡಕುಗಳನ್ನು ನಿವಾರಿಸುವ ಉದ್ದೇಶದಿಂದ ಕಲಿಕಾಮೃತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆ ಮೂಲಕ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಅನುತ್ತೀರ್ಣರಾಗದೇ ಕನಿಷ್ಠ ತೇರ್ಗಡೆಯಾಗುವಂತೆ ಮಾಡುವುದು ಈ ವಿಶೇಷ ಬೋಧನಾ ಕಾರ್ಯಕ್ರಮದ ಉದ್ದೇಶವಾಗಿದೆ.

–ಸಿ.ಎನ್.ರಾಜು, ಕ್ಷೇತ್ರ ಶಿಕ್ಷಣಾಧಿಕಾರಿ, ಮೈಸೂರು ದಕ್ಷಿಣ ವಲಯ

ಮೈಸೂರು,ಫೆ.17(ಪಿಎಂ)– ಶಾಲಾ ಶಿಕ್ಷಣ ಇಲಾಖೆಯ ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಯ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ 'ಕಲಿಕಾಮೃತ' ವಿಶೇಷ ಬೋಧನಾ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಎಸ್ಎಸ್ಎಲ್‌ಸಿ ಪರೀಕ್ಷೆ ಫಲಿತಾಂಶವನ್ನು ಉತ್ತಮಪಡಿಸುವ ಉದ್ದೇಶದಿಂದ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿ ನಡೆಸಲಾಗುತ್ತಿದೆ. ಜಿಲ್ಲಾ ಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಹಾಗೂ ಐದಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾದ 484 ವಿದ್ಯಾರ್ಥಿಗಳಿಗೆ ಕಲಿಕಾಮೃತದ ಮೂಲಕ ವಿಶೇಷ ಬೋಧನೆ ಮಾಡಲಾಗುತ್ತಿದೆ.

ವಿಶೇಷ ಬೋಧನಾ ಕೇಂದ್ರಗಳು: ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆ, ಜ್ಞಾನಗಂಗಾ ಪ್ರೌಢಶಾಲೆ, ಕನಕಗಿರಿಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ತಲಾ ಒಂದು ಕೇಂದ್ರದಂತೆ ಮೂರು ಕೇಂದ್ರಗಳನ್ನು ರಚಿಸಿ ವಿಶೇಷ ಬೋಧನೆಗೆ ವ್ಯವಸ್ಥೆ ಮಾಡಲಾಗಿದೆ. ಈ ಮೂರು ಕೇಂದ್ರಗಳಲ್ಲಿ ತಲಾ 160 ವಿದ್ಯಾರ್ಥಿಗಳಂತೆ ಕೇಂದ್ರಗಳಿಗೆ ಸಮೀಪವಿರುವ ಪ್ರೌಢಶಾಲೆಗಳಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿ ಕೇಂದ್ರಗಳಿಗೆ ವಿದ್ಯಾರ್ಥಿಗಳ ಹಾಜರಾತಿ, ಶಿಸ್ತು ಪಾಲನೆ, ಸಮಯ ಪಾಲನೆ ನಿರ್ವಹಿಸಲು ನಾಲ್ಕು ಜನ ದೈಹಿಕ ಶಿಕ್ಷಣ ಶಿಕ್ಷಕರನ್ನು ನಿಯೋಜಿಸಲಾಗಿದೆ. ಅಲ್ಲದೆ, ಆಯಾಯ ದಿನದ ತರಗತಿಯ ಮೇಲ್ವಿಚಾರಣೆ ನಡೆಸಿ, ನಿಗದಿತ ನಮೂಲನೆಯಲ್ಲಿ ವರದಿ ನೀಡಲು ಪ್ರತಿ ಕೇಂದ್ರಕ್ಕೂ ನೋಡೆಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಫೆ.22ರವರೆಗೆ ಕಲಿಕಾಮೃತ: ಫೆ.22ರವರೆಗೆ ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಕಲಿಕಾಮೃತದ ವಿಶೇಷ ಬೋಧನಾ ತರಗತಿಗಳು ನಡೆಯಲಿವೆ. ಸಂಪನ್ಮೂಲ ಶಿಕ್ಷಕರು ವಿದ್ಯಾರ್ಥಿಗಳಿಗೆ 6 ವಿಷಯಗಳ ಬೋಧನೆ ಮಾಡಲಿದ್ದಾರೆ. ವಿದ್ಯಾರ್ಥಿಗಳಿಗೆ ಆಯಾಯ ದಿನ ನಡೆದ ವಿಷಯಗಳ ಕಲಿಕಾಂಶಗಳ ಕುರಿತು ಕೊನೆಯ ಅವಧಿಯಲ್ಲಿ ದಿನದ ಪರೀಕ್ಷೆಯನ್ನು 25 ಅಂಕಗಳಿಗೆ ನಡೆಸಲಾಗುತ್ತದೆ. ಅಂತಿಮದ ದಿನದ ಕೊನೆ ಅವಧಿಯಲ್ಲಿ ಆರು ದಿನಗಳು ನಡೆದ ಕಲಿಕಾಂಶಗಳನ್ನು ಪರೀಕ್ಷಿಸಲು 60 ಅಂಕಗಳ ಸಾಪಲ್ಯ ಪರೀಕ್ಷೆಯನ್ನು ನೀಡಲಾಗುತ್ತದೆ.

ಗಣಿತ, ವಿಜ್ಞಾನ ಮತ್ತು ಆಂಗ್ಲ ಭಾಷೆ ವಿಷಯಗಳ ಬೋಧನೆಗೆ ಹೆಚ್ಚು ಗಮನ ನೀಡುತ್ತಿದ್ದು, ವಿದ್ಯಾರ್ಥಿಗಳಿಗೆ ಪುನರಾವರ್ತಿತ ಪ್ರಶ್ನೆ ಹಾಗೂ ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುತ್ತದೆ. ವಾರದ ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಪಾಸಿಂಗ್ ಪ್ಯಾಕೇಜ್ ಬುಕ್ ವಿತರಣೆ ಸಹ ಮಾಡಲಾಗುತ್ತದೆ. ಪ್ರತಿದಿನ ಬೆಳಗ್ಗೆ 11 ಹಾಗೂ ಸಂಜೆ 4ಕ್ಕೆ ಹಾಲು ಮತ್ತು ಸ್ನಾಕ್ಸ್ ನೀಡಲಾಗುತ್ತದೆ. ಮಧ್ಯಾಹ್ನ ಇಸ್ಕಾನ್‌ನಿಂದ ಉಪಾಹಾರ ವ್ಯವಸ್ಥೆ ಸಹ ಮಾಡಲಾಗಿದೆ.

ಪರೀಕ್ಷೆ ಬರೆಯಲಿರುವ 4,553 ವಿದ್ಯಾರ್ಥಿಗಳು: ಮೈಸೂರು ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪ್ರೌಢಶಾಲೆಗಳಿಂದ 4,553 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುತ್ತಿದ್ದಾರೆ. ಈ ಪೈಕಿ ಸರ್ಕಾರಿ ಪ್ರೌಢಶಾಲೆಗಳಿಂದ 203 ವಿದ್ಯಾರ್ಥಿಗಳು, 205 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 408 ಮಂದಿ ಪರೀಕ್ಷೆ ಎದುರಿಸಲಿದ್ದಾರೆ. ಅಂತೆಯೇ ಅನುದಾನಿತ ಪ್ರೌಢಶಾಲೆಗಳಿಂದ 993 ವಿದ್ಯಾರ್ಥಿಗಳು, 1,022 ವಿದ್ಯಾರ್ಥಿನಿಯರು ಸೇರಿದಂತೆ 2015 ಮಂದಿ ಹಾಗೂ ಖಾಸಗಿ ಪ್ರೌಢಶಾಲೆಗಳಿಂದ 1141 ವಿದ್ಯಾರ್ಥಿಗಳು, 989 ವಿದ್ಯಾರ್ಥಿನಿಯರು ಸೇರಿದಂತೆ 2,130 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಉದ್ಘಾಟನೆ: ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಸೋಮವಾರ ಉಪನಿರ್ದೇಶಕ ಎಸ್.ಟಿ.ಜವರೇಗೌಡ 'ಕಲಿಕಾಮೃತ' ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಎಲ್ಲಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಬಗ್ಗೆ ಕೆಲವು ಟಿಪ್ಸ್‌ಗಳನ್ನು ತಿಳಿಸಿದರು. ಅಲ್ಲದೆ, ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರ ರಚಿಸುವ ಸುಲಭ ವಿಧಾನಗಳ ಬಗ್ಗೆಯೂ ತಿಳಿಸಿಕೊಟ್ಟರು.

ಪ್ರತಿದಿನ ಓದುವ ಮತ್ತು ಬರೆಯುವ ವಿಧಾನದ ಬಗ್ಗೆ ಸಲಹೆಗಳನ್ನು ನೀಡಿದರು. ಜೊತೆಗೆ ವಿದ್ಯಾರ್ಥಿಗಳಿಗೆ ಶಿಸ್ತು ಪಾಲನೆ ಹಾಗೂ ಪರೀಕ್ಷೆಯಲ್ಲಿ ಸಮಯದ ನಿರ್ವಹಣೆ ಬಗ್ಗೆಯೂ ಅವರು ತಿಳಿಸಿದರು. ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಎಸ್ಎಸ್ಎಲ್‌ಸಿ ನೋಡಲ್ ಅಧಿಕಾರಿ ಮೋಹನ್‌ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ನಾಗರಾಜು, ಸಲ್ಮಾ, ಕವಿತಾ ಮತ್ತಿತರರು ಹಾಜರಿದ್ದರು.

ಕೃಷಿ ಉಪಕರಣ ಮಾರಾಟ ಮಳಿಗೆ ಬೀಗ ಮುರಿದು ಕಳ್ಳತನ

ಮೈಸೂರು, ಫೆ.17(ಎಸ್‌ಬಿಡಿ)– ಕೃಷಿ ಉಪಕರಣ ಮಾರಾಟ ಮಳಿಗೆಯ ಬೀಗ ಮುರಿದು ಸುಮಾರು ಒಂದೂವರೆ ಲಕ್ಷ ರೂ. ಬೆಲೆಬಾಳುವ ವಸ್ತುಗಳನ್ನು ಕದ್ದೊಯ್ದಿರುವ ಘಟನೆ ಇಲವಾಲದಲ್ಲಿ ನಡೆದಿದೆ.

ಇಲವಾಲದ ಮಹಾ ಬಡಾವಣೆ ನಿವಾಸಿ ಹೆಚ್.ನಾಗೇಶ್ ಅವರು ಕರಕನಹಳ್ಳಿ–ಚಿಕ್ಕನಹಳ್ಳಿ ರಸ್ತೆಯಲ್ಲಿ ನಡೆಸುತ್ತಿರುವ ರೈತ ಸ್ನೇಹಿ ಎಂಟರ್‌ಪ್ರೈಸಸ್ ಮಳಿಗೆಯ ಬೀಗ ಮುರಿದು ಒಳನುಗ್ಗಿರುವ ಖದೀಮರು, ಯುಪಿಎಸ್ ಬ್ಯಾಟರಿ, 5 ಬಂಡಲ್ ಮುಳ್ಳು ತಂತಿ, 13 ಕಳೆ ತೆಗೆಯುವ ಯಂತ್ರಗಳು, 5 ರಿಪೇರಿಗೆ ಬಂದಿದ್ದ ಯಂತ್ರಗಳು, ನೀರೆತ್ತುವ ಮೋಟಾರ್‌ಗಳು ಹಾಗೂ ಪೆಟ್ರೋಲ್ ಸ್ಪ್ರೇಯರ್‌ಗಳನ್ನು ಕದ್ದೊಯ್ದಿದ್ದಾರೆ.

ನಾಗೇಶ್ ಅವರು ಫೆ.13ರಂದು ಸಂಜೆ ಅಂಗಡಿ ಬಂದ್ ಮಾಡಿ ಮನೆಗೆ ತೆರಳಿದ್ದರು. ಮರುದಿನ ಸಂಬಂಧಿಕರ ಗೃಹಪ್ರವೇಶ ಸಮಾರಂಭವಿದ್ದ ಕಾರಣ ರಜೆ ಮಾಡಿದ್ದರು. ಆದರೆ ಫೆ.15ರಂದು ಬೆಳಗ್ಗೆ ಪಕ್ಕದ ಟೀ ಅಂಗಡಿಯವರು ಕರೆ ಮಾಡಿ ಅಂಗಡಿ, ನಿಮ್ಮ ಮಳಿಗೆ ಬಾಗಿಲು ತೆರೆದಿದೆ ಎಂದು ತಿಳಿಸಿದ್ದರು. ಕೂಡಲೇ ಮಳಿಗೆ ಬಳಿ ಹೋಗಿ ಪರಿಶೀಲಿಸಿದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿತು. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ರಾಮಕೃಷ್ಣ ನಗರದ ಸುಯೋಗ್ ಆಸ್ಪತ್ರೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವದ ಅಂಗವಾಗಿ ಫೆ.18ರಂದು ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಆಯೋಜಿಸಲಾಗಿದೆ. ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರಲಾಗಿದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ.

ಇ-ಆಸ್ತಿ ತಂತ್ರಾಂಶ ಮೂಲಕ ಆಸ್ತಿ ನಮೂನೆ ಪಡೆಯಲು ಅವಕಾಶ

ಮೈಸೂರು,ಫೆ.17–ಮೈಸೂರು ಮಹಾನಗರಪಾಲಿಕೆ ವತಿಯಿಂದ ಇ–ಆಸ್ತಿ ತಂತ್ರಾಂಶದ ಮೂಲಕ ಆಸ್ತಿಗಳ ಮಾಲೀಕರಿಗೆ ನಮೂನೆ–2/3 ಅನ್ನು ನೀಡಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚನೆಗಳನ್ನು ನೀಡಲಾಗಿರುವುದರಿಂದ ಅಂತರ್ಜಾಲ http://aasthikanaja.karnatakasmartcity.in/kmf24/ನ ಮೂಲಕ ನಗರದ ಪ್ರತಿಯೊಬ್ಬ ಅಧಿಕೃತ ಆಸ್ತಿಗಳ ಮಾಲೀಕ, ನಾಗರಿಕರು ತಮ್ಮ ಆಸ್ತಿ ಸಂಖ್ಯೆಯನ್ನು ನಮೂದಿಸಿ ಕರಡು ಇ–ಆಸ್ತಿಯ ಪ್ರತಿಯನ್ನು ವೀಕ್ಷಿಸಲು ಹಾಗೂ ಸದರಿ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಯಾವುದೇ ಮಾರ್ಪಾಡು, ತಿದ್ದುಪಡಿಗಳು ಇದ್ದಲ್ಲಿ ಫೆ.25ರೊಳಗಾಗಿ ಸಂಬಂಧಪಟ್ಟ ವಲಯ ಕಚೇರಿಗೆ ಸೂಕ್ತ, ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿ ತಮ್ಮ ಇ–ಆಸ್ತಿ ದಾಖಲೆಗಳನ್ನು ಸರಿಪಡಿಸಿಕೊಳ್ಳಬಹುದು. ಸರ್ಕಾರವು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ–ಖಾತಾ ನೀಡುವ ಅಭಿಯಾನಕ್ಕೆ ಮುಖ್ಯಮಂತ್ರಿಗಳು ಫೆ.18ರಂದು ಬೆಳಿಗ್ಗೆ 11.00 ಗಂಟೆಗೆ Video Conference ಮುಖಾಂತರ ಚಾಲನೆ ನೀಡಲಿದ್ದಾರೆ. ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿನ ಅನಧಿಕೃತ ಸ್ವತ್ತುಗಳಿಗೆ ಸಹ ಖಾತಾ ನೀಡುವ ಸಂಬಂಧ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತರಲಾಗಿರುತ್ತದೆ. ಇದರಿಂದ ಅನಧಿಕೃತ ಸ್ವತ್ತುಗಳ ಮಾಲೀಕರು ತಮ್ಮ ಸ್ವತ್ತಿನ ಕಂದಾಯವನ್ನು ಪಾವತಿಸಿ, ಇ–ಖಾತಾ ಪಡೆಯಬಹುದು. ಇದರಿಂದ ಬಹಳ ದಿನಗಳಿಂದ ಅನಧಿಕೃತ ಸ್ವತ್ತುಗಳ ಖಾತಾ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗಿರುತ್ತದೆ. ಸ್ವತ್ತಿನ ಮಾಲೀಕರು ತಮ್ಮ ನಗರ ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ, ಸ್ವತ್ತಿನ ಮಾಲೀಕತ್ವದ ದಾಖಲೆಗಳಾದ ನೋಂದಾಯಿತ ಪತ್ರಗಳು, ಚಾಲ್ತಿ ಸಾಲಿನವರೆಗೆ ಕಂದಾಯ ಪಾವತಿ ರಶೀದಿ, ಋಣಭಾರ ಪ್ರಮಾಣ ಪತ್ರ, ಹಾಗೂ ಮಾಲೀಕರ ಫೋಟೊ, ಆಧಾರ್ ಕಾರ್ಡ್, ಸಲ್ಲಿಸಿ 7 ದಿನಗಳ ಒಳಗಾಗಿ ಇ–ಖಾತಾ ಪಡೆಯಬಹುದು.

ವಿದ್ಯಾರಣ್ಯಪುರಂನಲ್ಲಿ ಶಾಸಕ ಶ್ರೀವತ್ಸ ಪಾದಯಾತ್ರೆ

ಮೈಸೂರು, ಫೆ.17(ಜಿಎ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ವಿದ್ಯಾರಣ್ಯಪುರಂ ಭಾಗದಲ್ಲಿ ಪಾದಯಾತ್ರೆ ನಡೆಸಿ, ಸ್ಥಳೀಯರಿಂದ ಸಮಸ್ಯೆ ಆಲಿಸಿ ಪರಿಹಾರ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಶಾಸಕರ ಬಳಿ ಸಮಸ್ಯೆ ತೋಡಿಕೊಂಡ ಸ್ಥಳೀಯ ನಿವಾಸಿ ರಂಗರಾಜು, ಪಾರ್ಕಿನ ಸುತ್ತ ಗಿಡಗಳನ್ನು ಹಾಕಿಸಿಕೊಡುವುದು ಮತ್ತು ಬೆಳಗಿನ ಸಮಯದಲ್ಲಿ ಮಕ್ಕಳು ಕ್ರಿಕೆಟ್ ಆಡುವುದರ ಮೂಲಕ ಅಕ್ಕ ಪಕ್ಕದ ಮನೆಗಳಿಗೆ ತೊಂದರೆಯಾಗುತ್ತಿದೆ ಹಾಗೂ ರಾತ್ರಿಯ ಸಮಯದಲ್ಲಿ ಪುಂಡ ಹುಡುಗರು ಮದ್ಯಪಾನ ಮಾಡುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.


ಶಾಸಕ ಟಿ.ಎಸ್.ಶ್ರೀವತ್ಸ ವಿದ್ಯಾರಣ್ಯಪುರಂ ಭಾಗದಲ್ಲಿ ಪಾದಯಾತ್ರೆ ನಡೆಸಿ, ಸ್ಥಳೀಯರಿಂದ ಸಮಸ್ಯೆ ಆಲಿಸಿ, ಪರಿಹಾರ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ನಗರಪಾಲಿಕೆ ವತಿಯಿಂದ ಇರುವ ಮಳಿಗೆಗಳು ಶಿಥಿಲವಾಗಿದ್ದು ಹಾಗೂ ಆ ಮಳಿಗೆಗಳು ಪ್ರಯೋಜನಕ್ಕೆ ಬಾರದ ಸ್ಥಿತಿಯಲ್ಲಿವೆ. ಈ ಜಾಗಗಳಲ್ಲಿ ಪುಂಡ ಯುವಕರು ಅಸಭ್ಯ ವರ್ತನೆ ತೋರುತ್ತಾರೆ. ಹೀಗಾಗಿ ಈ ಕೂಡಲೇ ಇದನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲಕರವಾಗುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಸ್ಥಳೀಯ ನಿವಾಸಿ ಪದ್ಮಮ್ಮ ಮನವಿ ಮಾಡಿದರು. ಮನವಿ ಆಲಿಸಿದ ಶಾಸಕ ಶ್ರೀವತ್ಸ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ವಲಯ ಕಚೇರಿಯ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ರೆಡ್ಡಿ, ಇಂಜಿನಿಯರ್ ಚೇತನ್, ಆರೋಗ್ಯಾಧಿಕಾರಿ ಶಿವಪ್ರಸಾದ್, ಶಾಸಕರ ಅಪ್ತ ಸಹಾಯಕ ಆದಿತ್ಯ, ವಾರ್ಡ್ ಉಸ್ತುವಾರಿ ಜೋಗಿ ಮಂಜು, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ವಾರ್ಡ್ ಅಧ್ಯಕ್ಷ ಶಿವಪ್ರಸಾದ್, ಶಿವಲಿಂಗ ಸ್ವಾಮಿ, ಕಿಶೋರ್, ವಾಸು, ಶ್ರೀಧರ್‌ಭಟ್, ಮಹದೇವ್, ಮಂಗಳ, ಮಹದೇವಣ್ಣ, ಕಿಶೋರ್, ಪ್ರದೀಪ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಫೆಬ್ರವರಿ 18ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ 66/11 ಕೆ.ವಿ ಎಫ್.ಟಿ.ಎಸ್ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ರಾಜೇಂದ್ರ ಫೀಡರ್ನ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ರಾಜೇಂದ್ರ ನಗರ, ಸುಭಾಷ್‌ನಗರ, ಓ.ಡಿ ಬ್ಲಾಕ್, ಕುರಿಮಂಡಿ ಮತ್ತು ರಾಜೇಂದ್ರನಗರ ಹೊಸ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಚಾ.ವಿ.ಸ.ನಿ.ನಿ.ಯ ನ.ರಾ.ಮೊಹಲ್ಲಾದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷರ ಮೈಸೂರು ಜಿಲ್ಲಾ ಪ್ರವಾಸ ಇಂದು



ಮೈಸೂರು,ಫೆ.17–ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶಿವಕಾಂತಮ್ಮ (ಕಾಂತಾ) ನಾಯಕ್ ಫೆ.18ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 9.30 ಗಂಟೆಗೆ ಮೈಸೂರು ಜಿಲ್ಲೆಗೆ ಆಗಮಿಸಲಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಮೈಸೂರಿನ ಹೆಬ್ಬಾಳ್‌ನಲ್ಲಿರುವ ವಿದ್ಯಾವರ್ಧಕ ತಾಂತ್ರಿಕ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿರುವ CLL mysuru & CEL Special Training on Business & Finical cellence for Entrepreneurs ತರಬೇತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ 'ನಲ್–ಜಲ್ ಮಿತ್ರ' ಯೋಜನೆಯ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 4 ಗಂಟೆಗೆ ಮೈಸೂರು ಜಿಲ್ಲೆಯ Govt ITI collegeನಲ್ಲಿ ಆಯೋಜಿಸಿರುವ Language Labನ ವೀಕ್ಷಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಬೀಜದುಂಡೆ ನೀಡುವ ಕಾರ್ಯಕ್ರಮ

ಮೈಸೂರು, ಫೆ.17(ಜಿಎ)–ರವಿಸಂತು ಬಳಗದಿಂದ ಬಂಡೀಪುರ ಅರಣ್ಯಕ್ಕೆ ಬೀಜದುಂಡೆಗಳನ್ನು ನೀಡುವುದು, ಕಲಾವಿದರಿಗೆ ಪ್ರಶಸ್ತಿ ವಿತರಣೆ ಹಾಗೂ ಸಂಗೀತ ಕಾರ್ಯಕ್ರಮವನ್ನು ಫೆ.18ರಂದು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ರವಿಸಂತು ಈ ವಿಷಯ ತಿಳಿಸಿ, ಬಳಗದ ವತಿಯಿಂದ 50 ಸರ್ಕಾರಿ ಶಾಲೆಗಳಿಗೆ ಸೇವೆ ಮಾಡಿರುವ ಸಂಭ್ರಮಾಚರಣೆ ಪ್ರಯುಕ್ತ ನಗರದ ಗೋವರ್ಧನ ಲಾಡ್ಜ್ ಬಳಿಯ ಗೋಪಿಕಾ ಸಭಾಂಗಣದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಅಂದು ಮಧ್ಯಾಹ್ನ 1 ಗಂಟೆಗೆ ಮೀನಾಕ್ಷಮ್ಮ ಹಾಗೂ ನಟ ವಿಷ್ಣುವರ್ಧನ್ ಸ್ಮರಣಾರ್ಥ ಬಂಡೀಪುರ ಅರಣ್ಯಕ್ಕೆ ಬೀಜದುಂಡೆಗಳನ್ನು ನೀಡುವುದು, ಕಲಾವಿದರಿಗೆ ಪ್ರಶಸ್ತಿ ವಿತರಣೆ ಹಾಗೂ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಸಮಾಜ ಸೇವೆ ಉದ್ದೇಶದಿಂದ ಬಳಗ ರೂಪಗೊಂಡಿದ್ದು, ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಗೊಳಿಸುವ ಕೆಲಸದಲ್ಲಿ ಪ್ರಮುಖವಾಗಿ ನಿರತರಾಗಿದ್ದೇವೆ. ಹಲವು ಸ್ನೇಹಿತರು ಸಹಕಾರ ನೀಡುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಳಗದ ಸದಸ್ಯರಾದ ಕಿರಣ್, ಸುರೇಶ್‌ಗೌಡ, ರವಿ ಹಂಸಲೇಖ, ಸಿಂಚನಾ, ಲೋಕೇಶ್, ಶ್ರೀಕಂಠ, ಶ್ವೇತಾ, ಶ್ರೀನಿವಾಸ್, ಅನುಭವ್ಯ ಪದ್ಮ, ನಾಗಶ್ರೀ ಉಪಸ್ಥಿತರಿದ್ದರು.

ಸ್ವ–ಸಹಾಯ ಸಂಘಗಳ ಪ್ರೇರಣೆಯಿಂದ ಸ್ವಾವಲಂಬಿ ಬದುಕು

ಮೈಸೂರು ಜಿಲ್ಲಾ ನಿರ್ದೇಶಕ ವಿ.ವಿಜಯ್‌ಕುಮಾರ್ ನಾಗನಾಳ


ಮೈಸೂರು ತಾಲೂಕಿನ ಶ್ಯಾದನಹಳ್ಳಿ ಕಾರ್ಯಕ್ಷೇತ್ರ ಏಕಲವ್ಯ ನಗರದ ನೇತ್ರಾವತಿ ಸ್ವ–ಸಹಾಯ ಸಂಘದ 3ನೇ ವರ್ಷದ ವಾರ್ಷಿಕೋತ್ಸವ ಆಯೋಜಿಸಲಾಗಿತ್ತು.

ಮೈಸೂರು, ಫೆ. 17– ಮೈಸೂರು ತಾಲೂಕಿನ ಶ್ಯಾದನಹಳ್ಳಿ ಕಾರ್ಯಕ್ಷೇತ್ರ ಏಕಲವ್ಯ ನಗರದ ನೇತ್ರಾವತಿ ಸ್ವ–ಸಹಾಯ ಸಂಘದ 3ನೇ ವರ್ಷದ ವಾರ್ಷಿಕೋತ್ಸವ ಆಯೋಜಿಸಲಾಗಿತ್ತು.

ಈ ವೇಳೆ ಕಾರ್ಯಕ್ರಮ ಉದ್ಘಾಟಿಸಿದ ವಿ.ವಿಜಯ್‌ಕುಮಾರ್ ನಾಗನಾಳ ಮಾತನಾಡಿ, ಸ್ವ–ಸಹಾಯ ಸಂಘಗಳ ಮಾಹಿತಿ ಮತ್ತು ಮಾರ್ಗದರ್ಶನದಿಂದ ಪ್ರೇರಣೆಗೊಂಡ ಮಹಿಳೆಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವರದಾನವಾಗಿದೆ ಎಂದು ಹೇಳಿದರು.

ಗ್ರಾಮಾಭಿವೃದ್ಧಿ ಯೋಜನೆ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು ಕುಟುಂಬಗಳ ಅಭಿವೃದ್ಧಿಗಾಗಿ ಮೂಲ ಬಂಡವಾಳವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ನೀಡುತ್ತಿದ್ದು ಈ ನೆರವನ್ನು ಸಂಘದ ಸದಸ್ಯರು ಬಂಡವಾಳವಾಗಿ ರೂಪಿಸಿಕೊಂಡು ಕುಟುಂಬಗಳ ಸಮಗ್ರ ಅಭಿವೃದ್ಧಿಗೆ ಪ್ರೇರಕ ಶಕ್ತಿಗಳಾಗಿ ನಿಂತಿರುವುದು ಸಂತೋಷವೇ ಸರಿ ಎಂದು ನುಡಿದರು.

ನೇತ್ರಾವತಿ ಸಂಘದ ಪ್ರಬಂಧಕರಾದ ನಂದಾ ಮಾತನಾಡಿ, ಸಂಘದಲ್ಲಿ 13 ಮಂದಿ ಸದಸ್ಯರಿದ್ದಾರೆ.

ಮಕ್ಕಳ ಶಿಕ್ಷಣಕ್ಕೆ, ವ್ಯಾಪಾರ, ಮನೆ ರಚನೆ, ಸ್ವ–ಉದ್ಯೋಗ, ಶೌಚಾಲಯ ರಚನೆ ಇನ್ನು ಮುಂತಾದ ಮೂಲಸೌಕರ್ಯಗಳ ಅನುಷ್ಠಾನಕ್ಕೆ, ಸಂಘದ ಸಮಗ್ರ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಹಿತಿ ಪ್ರೇರಣೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿಯಾದ ಶಶಿರೇಖಾ, ಮೇಲ್ವಿಚಾರಕರಾದ ಸುನೀತಾ ಸೇವಾಪ್ರತಿನಿಧಿ ನವೀನಾ, ಒಕ್ಕೂಟ ಪದಾಧಿಕಾರಿಗಳು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಹಣ್ಣು–ಹಂಪಲು, ಲೇಖನ ಸಾಮಗ್ರಿ ವಿತರಣೆ


ಮೈಸೂರಿನ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಕೃಷ್ಣದೇವರಾಯರ 55ನೇ ಜಯಂತಿ ಕಾರ್ಯಕ್ರಮದಲ್ಲಿ ಹಣ್ಣು, ಹಂಪಲು, ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸಲಾಯಿತು. ಹಿರಿಯ ಸಮಾಜಸೇವಕ ಕೆ.ರಘುರಾಮ ವಾಜಪೇಯಿ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಸಂಸ್ಕೃತ ಪಾಠಶಾಲೆಯ ಕುಮಾರ್ ಭಟ್ಟ, ಮಾನವ ಹಕ್ಕು ಆಯೋಗದ ಜಿಲ್ಲಾಧ್ಯಕ್ಷ ಪ್ರಕಾಶ್‌ಗೌಡ, ಕ್ರೀಡಾ ತರಬೇತಿದಾರ ಜಗದೀಶ್, ಸುಬ್ರಮಣಿ, ವೀರಭದ್ರಸ್ವಾಮಿ, ಭಾಸ್ಕರ್, ಶ್ರೀಧರ್, ಯಶ್ವಂತ್‌ಕುಮಾರ್, ಮಾಧವಿ, ಶಾಂತಿ ಪ್ರಿಯ, ನಿಧಿ, ಮನ್ವಿತ್‌ಗೌಡ, ದತ್ತ, ಮಹದೇವ ಸ್ವಾಮಿ, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ನಾಗೇಶ್ ಇನ್ನಿತರರು ಹಾಜರಿದ್ದರು.

ಶ್ಯಾಮ್‌ಗೆ ಕರಾಟೆಯಲ್ಲಿ ಪ್ರಥಮ ಬಹುಮಾನ


ಮೈಸೂರಿನ ವಿದ್ಯಾಜ್ಯೋತಿ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಶ್ಯಾಮ್.ಎಸ್ ಸಿದ್ಧಾರ್ಥನಗರದ ಟೆರಿಷಿಯನ್ ಕಾಲೇಜಿನ ಒಳ ಕ್ರೀಡಾಂಗಣದಲ್ಲಿ ನಡೆದ ಮೈಸೂರು ಓಪನ್ ನ್ಯಾಷನಲ್ ಲೆವೆಲ್ ಕರಾಟೆ ಚಾಂಪಿಯನ್‌ಶಿಪ್ 2025ರ ಕಿರಿಯರ ವಿಭಾಗದ ಕರಾಟೆ ಕಥ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ವೈಲೆಟ್ ಗ್ರೆಟ್ಟಾ ಪ್ರಶಸ್ತಿ ಪತ್ರ ಹಾಗೂ ಫಲಕವನ್ನು ನೀಡಿ ಗೌರವಿಸಿದರು. ಶಾಲೆಯ ಶಿಕ್ಷಕರಾದ ಸಿಸ್ಟರ್ ಮೇರಿ ವಿಮಲ.ಎ, ಸಿಸ್ಟರ್ ರೂತ್ ಅಂಥೋನಿ, ಸಿಸ್ಟರ್ ಮೇರಿ ವಿಮಲ.ಎಸ್, ಸುನಿಲ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಮಾರಮ್ಮನಿಗೆ ವಿಶೇಷ ಪೂಜೆ

ಮೈಸೂರಿನ ಶಿವಪುರ, ದೇವಯ್ಯನಹುಂಡಿ ಗ್ರಾಮದೇವತೆ ಮಾರಮ್ಮನವರ ಪೂಜಾ ಮಹೋತ್ಸವ ನಡೆಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಗ್ರಾಮದ ಮುಖಂಡರಾದ ಬಸವರಾಜು, ನಾಗರಾಜು, ಮತ್ತಿತರರು, ಯಜಮಾನರು ಆತ್ಮೀಯವಾಗಿ ಅಭಿನಂದಿಸಿದರು.

ಉಮ್ಮತ್ತೂರು ಜಿ.ರವಿಶಂಕರ್‌ಗೆ ನಿಸರ್ಗ ಡಾಕ್ಟರ್ ರಾಜ್ಯ ಪ್ರಶಸ್ತಿ ಪುರಸ್ಕಾರ



ಉಮ್ಮತ್ತೂರು ಜಿ.ರವಿಶಂಕರ್‌ಗೆ ನಿಸರ್ಗ ಡಾಕ್ಟರ್ ರಾಜ್ಯ ಪ್ರಶಸ್ತಿ ನೀಡಲಾಯಿತು.

ಮೈಸೂರು, ಫೆ. 17– ಯುವಚೇತನ ಯುವಜನ ಕೇಂದ್ರ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅತ್ಯುತ್ತಮ ಸ್ವಯಂಸೇವಾ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ ವತಿಯಿಂದ ಸಾಮಾಜಿಕವಾಗಿ ಸಮಾಜಮುಖಿ ಹಾಗೂ ಪರಿಸರಕ್ಕೆ ಸಂಬಂಧಿಸಿದ ಸೇವಾಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿರುವ ಸಾಧಕರಿಗೆ ನಿಸರ್ಗ ಡಾಕ್ಟರ್ ಪ್ರಶಸ್ತಿ ಪುರಸ್ಕಾರವನ್ನು ಬೆಂಗಳೂರಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ವಿಶ್ರಾಂತ ನ್ಯಾಯಮೂರ್ತಿಗಳು ಹಾಗೂ ನಿವೃತ್ತ ಲೋಕಾಯುಕ್ತರಾದ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಯುವ ಚೇತನ ಯುವಜನ ಸಂಸ್ಥೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಡಾಕ್ಟರ್ ನಂದಿದುರ್ಗದ ಬಾಲುಗೌಡ, ನಾಡೋಜ ಡಾಕ್ಟರ್ ಹೂಡೆ ಪಿ ಕೃಷ್ಣ, ಸುಬೇದಾರ್ ಮೇಜರ್ ಕುಮಾರ ಸ್ವಾಮಿ, ಕರ್ನಾಟಕ ಸರ್ಕಾರದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಎಪಿಜೆ ಅಬ್ದುಲ್ ಕಲಾಂ ರಾಷ್ಟ್ರ ಪ್ರಶಸ್ತಿ ಪುರಸ್ಕೃತರು, ಮಾಗಡಿ ಮಠದ ಸ್ವಾಮೀಜಿ, ಉಮ್ಮತ್ತೂರು ಜಿ.ರವಿಶಂಕರ್ ಅವರಿಗೆ ನಿಸರ್ಗ ಡಾಕ್ಟರ್ ರಾಜ್ಯ ಪ್ರಶಸ್ತಿ ಪುರಸ್ಕಾರ ಮಾಡಿದರು.

ಪುಟ್ಟ ಮಗುವಿನೊಂದಿಗೆ ಆರ್‌ಪಿಎಫ್ ಮಹಿಳಾ ಸಿಬ್ಬಂದಿ ಕರ್ತವ್ಯ

ನವದೆಹಲಿ: ಇತ್ತೀಚೆಗೆ ದೆಹಲಿ ರೈಲು ನಿಲ್ದಾಣದಲ್ಲಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ ವ್ಯಾಪಕ ಸುದ್ದಿಗೆ ಗ್ರಾಸವಾದ ಬೆನ್ನಲ್ಲೇ ಆರ್‌ಪಿಎಫ್ ಮಹಿಳಾ ಸಿಬ್ಬಂದಿಯೊಬ್ಬರು ಪುಟ್ಟಮಗುವಿನೊಂದಿಗೆ ತಮ್ಮ ಕರ್ತವ್ಯ ನಿರ್ವಹಿಸುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.



ದೆಹಲಿ ರೈಲು ನಿಲ್ದಾಣದಲ್ಲಿ ಕಾನ್ಸ್ಟೆಬಲ್ ರೀನಾ ಎಂಬುವವರು ತಮ್ಮ 1 ವರ್ಷದ ಮಗುವನ್ನು ಎದೆಗೆ ಕಟ್ಟಿಕೊಂಡು ಕರ್ತವ್ಯವನ್ನು ನಿರ್ವಹಿಸಿದರು. ನಿಲ್ದಾಣದಲ್ಲಿದ್ದ ಕೆಲ ಪ್ರಯಾಣಿಕರು ಈ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದ್ದಾರೆ. ಇದೀಗ ಈ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದ್ದು, ಮಹಿಳಾ ಸಿಬ್ಬಂದಿಯ ದ್ವಿಪಾತ್ರ ಮತ್ತು ಸೇವೆಗೆ ಎಲ್ಲೆಡೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಕೆಲವು ನೆಟಿಜನ್‌ಗಳು ರೀನಾಳ ಸಮರ್ಪಣೆಯನ್ನು ಶ್ಲಾಘಿಸಿದರೆ, ಇತರರು ಅಂತಹ ಅಪಾಯಕಾರಿ ಪರಿಸ್ಥಿತಿಯಲ್ಲಿ ಮಗುವನ್ನು ಹೊತ್ತುಕೊಂಡಿದ್ದಕ್ಕಾಗಿ ಅವರನ್ನು ಟೀಕಿಸಿದ್ದಾರೆ.

ರೀನಾ ಅವರನ್ನು ಹೊಗಳಿದ ಮತ್ತೊಬ್ಬ ಬಳಕೆದಾರರು, ತಾಯ್ತನ ಮತ್ತು ಕರ್ತವ್ಯ ವಿವರಿಸಲು ಪದಗಳ ಅಗತ್ಯವಿಲ್ಲ ಎಂದು ಬರೆದಿದ್ದಾರೆ.

ಸದ್ಗುರು ಶ್ರೀರಾಮ ನೇತೃತ್ವದಲ್ಲಿ ಮನೋಶಕ್ತಿ ಕಾರ್ಯಾಗಾರ ಯಶಸ್ವಿ


ಉಪಾಸನ ಫೌಂಡೇಷನ್ ಏರ್ಪಡಿಸಿದ್ದ ಮನೋಶಕ್ತಿ ಕಾರ್ಯಾಗಾರವನ್ನು ಸದ್ಗುರು ಶ್ರೀರಾಮ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯೋಗ ಗುರು ಶಿವಪ್ರಕಾಶ್ ಇದ್ದಾರೆ.

ಮೈಸೂರು, ಫೆ. 17– ಉಪಾಸನ ಫೌಂಡೇಷನ್ ವತಿಯಿಂದ ಮನೋಶಕ್ತಿ ಕಾರ್ಯಾಗಾರವು ನ್ಯೂ ಸಯ್ಯಾಜಿರಾವ್ ರಸ್ತೆಯ ರಿಂಡೋ ಮೆರಿಡಿಯನ್ ಸಭಾಂಗಣದಲ್ಲಿ ಜರುಗಿತು.

ಬೆಂಗಳೂರು ಉಪಾಸನ ಫೌಂಡೇಷನ್ ಸಂಸ್ಥಾಪಕರಾದ ಸದ್ಗುರು ಶ್ರೀರಾಮ ಅವರು ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಸಂಕಲ್ಪದ ಸರಿಯಾದ ಕ್ರಮ, ಸುಪ್ತವಾದ ಮನೋಶಕ್ತಿಯನ್ನು ಜಾಗೃತಗೊಳಿಸುವುದು ಹೇಗೆ, ಶ್ವಾಸಕ್ರಿಯೆ, ವಿಶ್ವಾಕರ್ಷಣ ಧ್ಯಾನವಿಧಿ, ಮುದ್ರೆ, ಗುರಿಯ ನಿರ್ಣಯ, ನಿರ್ಣಯಿಸಿದ ಗುರಿಯನ್ನು ತಲುಪುವ ಹಾದಿ, ಭಾವನೆ ಹಾಗೂ ಬದುಕನ್ನು ಯಾವ ರೀತಿ ದೃಢಪಡಿಸುವುದು– ಇವೇ ಮೊದಲಾದ ವಿಚಾರಗಳನ್ನು ಅವರು ತಿಳಿಸಿಕೊಟ್ಟರು. ಕ್ರಿಯಾಯೋಗ, ಸಂವಹನ ತಂತ್ರ, ಶಕ್ತಿ ಕ್ರಿಯಾ, ಕುಂಡಲಿನಿ ದೀಕ್ಷೆ, ದೇವಿ ಸಾಧನಾ ದೀಕ್ಷೆಯನ್ನು ಕೂಡ ವಿವರಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪರಮಹಂಸ ಯೋಗ ಮಹಾವಿದ್ಯಾಲಯದ ಗುರೂಜಿ ಎಂ.ಎಸ್. ಶಿವಪ್ರಕಾಶ್ ಮುಖ್ಯ ಅತಿಥಿಗಳಾಗಿದ್ದರು. ಚೇತನಾ, ಸಂಗೀತಾ, ಗುರು, ಕಾವಶ್ರೀ ಮೊದಲಾದವರು ಇದ್ದರು. ಸುಳ್ಯ ದೀಪಾಂಜಲಿ ಮಹಿಳಾ ಸಮಾಜದವರು ಭಜನೆ, ಗುರುವಂದನೆ ನಡೆಸಿಕೊಟ್ಟರು. ಮೈಸೂರಲ್ಲಿ ಪ್ರಥಮ ಬಾರಿಗೆ ನಡೆದ ಕಾರ್ಯಾಗಾರದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು.

ಕೆ.ಜಿ.ಕೊಪ್ಪಲಿನ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 11ನೇ ವರ್ಷದ ಕುಂಭಾಭಿಷೇಕ ಮಹೋತ್ಸವ


ಮೈಸೂರಿನ ಕೆ.ಜಿ.ಕೊಪ್ಪಲಿನ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಧರ್ಮದರ್ಶಿಗಳ ಸಮಿತಿ ವತಿಯಿಂದ ಸಿದ್ದಪ್ಪಾಜಿ ದೇವಸ್ಥಾನದ 11ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಸಮಿತಿ ಗೌರವಾಧ್ಯಕ್ಷ ಎಂ.ರವಿಗೌಡ, ಅಧ್ಯಕ್ಷ ಬಸವರಾಜಣ್ಣ, ಉಪಾಧ್ಯಕ್ಷ ರಂಗಪ್ಪ, ಪ್ರಧಾನ ಕಾರ್ಯದರ್ಶಿ ರವಿಗೌಡ, ಖಜಾಂಚಿ ಮೊಗಣ್ಣ, ಮಾಜಿ ಕಾರ್ಪೊರೇಟರ್ ಎಸ್.ಬಾಲು, ತಿಪ್ಪಣ್ಣ, ಜೋಗಪ್ಪ, ಸತೀಶ್, ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಬಲೂನ್ ಸ್ಫೋಟದಲ್ಲಿ ನೇಪಾಳದ ಉಪ ಪ್ರಧಾನಿಗೆ ಸುಟ್ಟ ಗಾಯ

ಕಠ್ಮಂಡು: ಸೋಮವಾರ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಬಲೂನ್ ಸ್ಫೋಟಗೊಂಡ ಪರಿಣಾಮ ನೇಪಾಳದ ಉಪ ಪ್ರಧಾನಿ ಮತ್ತು ಹಣಕಾಸು ಸಚಿವ ಬಿಷ್ಣು ಪ್ರಸಾದ್ ಪೌಡೆಲ್ ಹಾಗೂ ಪೋಖರ ಮೆಟ್ರೋಪಾಲಿಟನ್ ಮೇಯರ್ ಧನರಾಜ್ ಆಚಾರ್ಯ ಅವರಿಗೆ ಸುಟ್ಟ ಗಾಯಗಳಾಗಿವೆ. ಇಂದು ಮಧ್ಯಾಹ್ನ ಪೋಖರ ಪ್ರವಾಸೋದ್ಯಮ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಮೇಲೆ ಹಾರಿಸಲು ಸಿದ್ಧವಾಗಿದ್ದ ಬಲೂನ್‌ಗಳು ಪಟಾಕಿಯ ಬೆಂಕಿ ತಗುಲಿ ಸ್ಫೋಟಗೊಂಡು ಇಬ್ಬರಿಗೂ ಸುಟ್ಟ ಗಾಯಗಳಾಗಿವೆ.



ಇಬ್ಬರನ್ನೂ ಹೆಲಿಕಾಪ್ಟರ್ ಮೂಲಕ ಕಠ್ಮಂಡುವಿಗೆ ಸಾಗಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕೀರ್ತಿಪುರದ ಬರ್ನ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ದೃಢಪಡಿಸಿದ್ದಾರೆ. ಪೊಲೀಸರ ಪ್ರಕಾರ ಇಂದಿನ ಸಮಾರಂಭದ ಸಂದರ್ಭದಲ್ಲಿ ಹೈಡ್ರೋಜನ್ ತುಂಬಿದ ಬಲೂನ್ ಪಟಾಕಿಯ ಬೆಂಕಿ ತಗುಲಿ ಸ್ಫೋಟಗೊಂಡಿತು. ಆಗ ಈ ಅವಘಡ ಸಂಭವಿಸಿದೆ. ನೇಪಾಳದ ಉಪಪ್ರಧಾನಿ ಪೌಡೆಲ್ ಅವರ ಕೈ ಮತ್ತು ಮುಖದ ಮೇಲೆ ಸುಟ್ಟಗಾಯಗಳು ಉಂಟಾಗಿವೆ. ಆದರೆ ಮೇಯರ್ ಆಚಾರ್ಯ ಅವರಿಗೆ ಗಂಭೀರ ಗಾಯಗಳಾಗಿವೆ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾಲೇಜಿಗೆ ಪ್ಯಾರಾಗ್ಲೈಡಿಂಗ್‌ನಲ್ಲಿ ತೆರಳಿದ ವಿದ್ಯಾರ್ಥಿ

ಮುಂಬೈ: ಮಹಾನಗರ ಟ್ರಾಫಿಕ್ ಭೀತಿ ಹಿನ್ನೆಲೆಯಲ್ಲಿ ವಿದ್ಯಾರ್ಥಿಯೋರ್ವ ಕಾಲೇಜಿಗೆ ಸರಿಯಾದ ಸಮಯಕ್ಕೆ ಹೋಗಲು ಪ್ಯಾರಾಚೂಟ್ ಬಳಸಿರುವ ವಿಡಿಯೋವೊಂದು ವ್ಯಾಪಕ ವೈರಲ್ ಆಗುತ್ತಿದೆ. ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ಈ ಘಟನೆ ನಡೆದಿದ್ದು, ಪರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಕಾಲೇಜಿಗೆ ಸರಿಯಾದ ಸಮಯಕ್ಕೆ ಹೋಗಲು ವಿದ್ಯಾರ್ಥಿಯೋರ್ವ ಪ್ಯಾರಾಚೂಟ್ ಬಳಸಿ ಸುದ್ದಿಗೆ ಗ್ರಾಸವಾಗಿದ್ದಾನೆ. ವಾಯ್ ತಾಲೂಕಿನ ಪಸರಾನಿ ಗ್ರಾಮದ ವಿದ್ಯಾರ್ಥಿ ಸಮರ್ಥ್ ಮಹಾಂಗಡೆ ಎಂಬಾತ ಪರೀಕ್ಷೆಗೆ ಕೇವಲ 15–20 ನಿಮಿಷಗಳು ಉಳಿದಿರುವಾಗ ಭಾರಿ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳುತ್ತೇನೆ ಎಂಬ ಭೀತಿಯಿಂದ ಪ್ಯಾರಾಗ್ಲೈಡಿಂಗ್ ಮೂಲಕ ಕಾಲೇಜಿಗೆ ಆಗಮಿಸಿದ್ದಾನೆ.



ವರದಿಗಳ ಪ್ರಕಾರ ಪರೀಕ್ಷೆಯ ದಿನದಂದು ವೈಯಕ್ತಿಕ ಕೆಲಸದ ನಿಮಿತ್ತ ಸಮರ್ಥ್ ಪಂಚಗಣಿಯಲ್ಲಿದ್ದರು. ಪರೀಕ್ಷೆಗೆ ಕೇವಲ 15–20 ನಿಮಿಷಗಳು ಉಳಿದಿರುವಾಗ ಸಮಯಕ್ಕೆ ಸರಿಯಾಗಿ ಕೇಂದ್ರವನ್ನು ತಲುಪಬೇಕು ಎಂದು ವಾಹನದಲ್ಲಿ ಹೋಗಲು ಸಿದ್ಧತೆ ನಡೆಸಿದ್ದ. ಆದರೆ ಭಾರಿ ಟ್ರಾಫಿಕ್ ಹಿನ್ನೆಲೆಯಲ್ಲಿ ಆತ ಪ್ಯಾರಾಗ್ಲೈಡಿಂಗ್ ಮಾರ್ಗ ಆರಿಸಿಕೊಂಡಿದ್ದಾನೆ.

ಚೆರ್ನೋಬಿಲ್ ಪರಮಾಣು ಸ್ಥಾವರದ ಮೇಲೆ ರಷ್ಯಾದ ಡ್ರೋನ್ ದಾಳಿ

ಕೈವ್: ರಷ್ಯಾ ಡ್ರೋನ್‌ಗಳ ಸಹಾಯದಿಂದ ಚೆರ್ನೋಬಿಲ್ ಪರಮಾಣು ಸ್ಥಾವರದ ನಾಲ್ಕನೇ ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿ, ಜಾಗತಿಕ ಪರಮಾಣು ಭದ್ರತೆಗೆ ಅಪಾಯವನ್ನುಂಟುಮಾಡಿವೆ. ನಿನ್ನೆ ರಾತ್ರಿಯಿಡೀ ನಡೆದ ದಾಳಿಯಲ್ಲಿ ರಷ್ಯಾದ ಡ್ರೋನ್ ಉಕ್ರೇನ್‌ನ ಚೆರ್ನೋಬಿಲ್‌ನಲ್ಲಿರುವ ಪರಮಾಣು ವಿದ್ಯುತ್ ಸ್ಥಾವರದ ಮೇಲೆ ದಾಳಿ ನಡೆಸಿದೆ ಎಂದು ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ.



ರಷ್ಯಾದ ಈ ದಾಳಿಯನ್ನು ಜಾಗತಿಕ ಭದ್ರತೆಗೆ ಪ್ರಮುಖ ಬೆದರಿಕೆ ಎಂದು ತಜ್ಞರು ಪರಿಗಣಿಸಿದ್ದಾರೆ. ಚೆರ್ನೋಬಿಲ್‌ನಲ್ಲಿ ನಿರ್ಮಿಸಲಾದ ಈ ವಿಶೇಷ ಘಟಕವನ್ನು ಉಕ್ರೇನ್, ಯುರೋಪ್, ಅಮೆರಿಕ ಮತ್ತು ಇತರ ದೇಶಗಳ ಸಹಾಯದಿಂದ ರಚಿಸಲಾಗಿದೆ. ಇದರ ಉದ್ದೇಶ ವಿಕಿರಣದ ಅಪಾಯಗಳನ್ನು ತಪ್ಪಿಸುವುದಾಗಿತ್ತು. ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಈ ಘಟನೆಯನ್ನು ಭಯೋತ್ಪಾದಕ ದಾಳಿ ಎಂದು ಬಣ್ಣಿಸಿದ್ದಾರೆ. ರಷ್ಯಾ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ಪರಮಾಣು ತಾಣಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

ಪೋರ್ನ್ ಸಿನಿಮಾದಲ್ಲಿ ಭಾರತೀಯ ಸೈನಿಕನ ಪಾತ್ರ: ಏಕ್ತಾ ಕಪೂರ್ ವಿರುದ್ಧ ದೂರು

ನವದೆಹಲಿ: ಸಾಫ್ಟ್ ಪೋರ್ನ್ ಸಿನಿಮಾದಲ್ಲಿ ಭಾರತೀಯ ಸೈನಿಕನ ಪಾತ್ರ ಬಳಸಿದ್ದಕ್ಕಾಗಿ ನಿರ್ಮಾಪಕಿ ಏಕ್ತಾ ಕಪೂರ್ ವಿರುದ್ಧ ಆಕ್ರೋಶ ಭುಗಿಲೆದ್ದಿದೆ. ಭಾರತೀಯ ಸೈನಿಕರಿಗೆ ಅಪಮಾನ ಎಸಗಿದ್ದಾರೆ ಎಂಬ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣವೂ ದಾಖಲಾಗಿದೆ. ಏಕ್ತಾ ಕಪೂರ್ ಅವರನ್ನು ಕಿರುತೆರೆಯ ಕಿಂಗ್ ಮೇಕರ್ ಎಂದೇ ಕರೆಯಲಾಗುತ್ತದೆ. ಹಲವಾರು ಟಿವಿ ಧಾರಾವಾಹಿಗಳ ನಿರ್ಮಾಪಕಿ ಆಗಿರುವ ಅವರು, ಆಲ್ಟ್ ಬಾಲಾಜಿ ಹೆಸರಿನ ಒಟಿಟಿಯನ್ನೂ ನಡೆಸುತ್ತಿದ್ದಾರೆ. ಈ ಆಲ್ಟ್ ಬಾಲಾಜಿ ಒಟಿಟಿಯಲ್ಲಿ ಸಾಫ್ಟ್ ಪಾರ್ನ್ ರೀತಿಯ ವೆಬ್ ಸರಣಿ, ಸಿನಿಮಾಗಳನ್ನು ಪ್ರಸಾರ ಮಾಡಲಾಗುತ್ತದೆ. ಈ ರೀತಿಯ ವೆಬ್ ಸೀರೀಸ್‌ನಲ್ಲಿ ಸೈನಿಕನ ಪಾತ್ರವನ್ನು ಬಳಸಿಕೊಂಡು ಸಮವಸ್ತ್ರದಲ್ಲಿದ್ದಾಗಲೇ ಲೈಂಗಿಕ ಕ್ರಿಯೆಯಲ್ಲಿ ತೊಡಗುವ ದೃಶ್ಯವನ್ನು ಚಿತ್ರೀಕರಿಸಲಾಗಿತ್ತು. ಸೈನಿಕನಿಗೆ ಅವಮಾನ ಮಾಡಲಾಗಿದೆ ಎಂದು ಯೂಟ್ಯೂಬರ್ ವಿಕಾಸ್ ಪಾಠಕ್ ಪೊಲೀಸ್ ಠಾಣೆಗೆ ಏಕ್ತಾ ಕಪೂರ್ ವಿರುದ್ಧ ದೂರು ನೀಡಿದ್ದರು. ದೂರು ದಾಖಲಿಸಿಕೊಂಡಿರುವ ಪೊಲೀಸರು ಎಫ್‌ಐಆರ್ ನಮೂದು ಮಾಡಿಕೊಂಡಿದ್ದರು. ಇದೀಗ ನ್ಯಾಯಾಲಯ ಮಧ್ಯಪ್ರವೇಶ ಮಾಡಿದ್ದು, ಮೇ 9ರೊಳಗೆ ವರದಿ ನೀಡುವಂತೆ ಪೊಲೀಸರಿಗೆ ಸೂಚಿಸಿದೆ.



ಅಮೆರಿಕದಿಂದ ಇಸ್ರೇಲ್‌ಗೆ 907 ಕೆಜಿ ತೂಕದ ಎಂಕೆ–84 ಬಾಂಬ್‌ಗಳ ಪೂರೈಕೆ ಪುನಾರಂಭ

ಜೆರುಸಲೇಂ(ಇಸ್ರೇಲ್): ಅಮೆರಿಕವು ಇತ್ತೀಚೆಗೆ ಎಂಕೆ–84 ಬಾಂಬ್‌ಗಳ ಪೂರೈಕೆಯ ಮೇಲಿನ ತಾತ್ಕಾಲಿಕ ನಿಷೇಧವನ್ನು ತೆಗೆದುಹಾಕಿದ ನಂತರ, ಅಮೆರಿಕವು ಇಸ್ರೇಲ್‌ಗೆ ಭಾರಿ ತೂಕದ ಎಂಕೆ–84 ಬಾಂಬ್‌ಗಳನ್ನು ಕಳುಹಿಸಿಕೊಟ್ಟಿದೆ ಎಂದು ಇಸ್ರೇಲ್ ರಕ್ಷಣಾ ಸಚಿವಾಲಯ ತಿಳಿಸಿದೆ. ಎಂಕೆ–84 ಇದು 907 ಕೆಜಿ ತೂಕದ ಮಾರ್ಗದರ್ಶಿಯಲ್ಲದ ಬಾಂಬ್ ಆಗಿದ್ದು, ರಿ ಇನ್‌ಫೋರ್ಸ್ಡ್ ಗುರಿಗಳನ್ನು ಭೇದಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ತನ್ನ ಬಲವಾದ ಸ್ಫೋಟಕ ಶಕ್ತಿಯಿಂದ ವ್ಯಾಪಕ ಹಾನಿಯನ್ನುಂಟು ಮಾಡುತ್ತದೆ. ಸಚಿವಾಲಯ ಬಿಡುಗಡೆ ಮಾಡಿದ ವೀಡಿಯೊ ದೃಶ್ಯಾವಳಿಗಳಲ್ಲಿ ಹಡಗು ಕಂಟೇನರ್‌ಗಳನ್ನು ಡಜನ್‌ಗಟ್ಟಲೆ ಟ್ರಕ್‌ಗಳಲ್ಲಿ ಲೋಡ್ ಮಾಡುತ್ತಿರುವುದು ಕಾಣಿಸಿದೆ. ಅವುಗಳನ್ನು ಇಸ್ರೇಲ್‌ನ ವಾಯುಪಡೆಯ ನೆಲೆಗಳಿಗೆ ಸಾಗಿಸಲಾಗಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಗಾಜಾ ಪಟ್ಟಿಯ ಜನನಿಬಿಡ ಪ್ರದೇಶಗಳಲ್ಲಿ ಈ ಬಾಂಬ್‌ಗಳ ಸಂಭಾವ್ಯ ಬಳಕೆಯಿಂದಾಗಬಹುದಾದ ಹಾನಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡನ್ ಆಡಳಿತಾವಧಿಯಲ್ಲಿ ಇಸ್ರೇಲ್‌ಗೆ ಈ ಬಾಂಬ್‌ಗಳ ಪೂರೈಕೆಯನ್ನು ನಿಲ್ಲಿಸಲಾಗಿತ್ತು.

ಮೈಸೂರು ಮಿತ್ರ ಮಂಗಳವಾರ 18 ಫೆಬ್ರವರಿ 2025

ನಲ್ಲೂರು ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ



ನಲ್ಲೂರು ಗ್ರಾಮದಲ್ಲಿ ಹುಲಿ ಪತ್ತೆಯಾಗಿರುವುದು.

ಗೋಣಿಕೊಪ್ಪ, ಫೆ.17–ಪೊನ್ನಂಪೇಟೆ ತಾಲೂಕಿನಲ್ಲಿ ನಲ್ಲೂರು ಗ್ರಾಮದಲ್ಲಿ ಸೋಮವಾರ ಹುಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಬೆಳಗ್ಗೆ 10 ಗಂಟೆಯಲ್ಲಿ ನಲ್ಲೂರು ಗ್ರಾಮದ ಕೊಕ್ಕಲೆಮಾಡ ದೇವಯ್ಯ ಅವರ ತೋಟದ ಬಳಿ ಹುಲಿ ಕಂಡು ಬಂದಿದ್ದು, ನಲ್ಲೂರಿನಿಂದ ಶ್ರೀಮಂಗಲ ಕಡೆಗೆ ತೆರಳುತ್ತಿದ್ದ ಡಾ.ಶ್ರೀನಿವಾಸ್ ದಂಪತಿ ಹುಲಿಯನ್ನು ಕಂಡು ಬೆಚ್ಚಿ ಬಿದ್ದಿದ್ದಾರೆ. ಹುಲಿ ಮಾಯಮುಡಿ ರುದ್ರಬೀಡು ಗ್ರಾಮದ ಕಡೆ ಸಂಚರಿಸಿರುವ ಬಗ್ಗೆ ಸ್ಥಳೀಯರು ತಿಳಿಸಿದ್ದಾರೆ.

ಹುಲಿ ರಸ್ತೆ ದಾಟುತ್ತಿರುವ ಫೋಟೋ ಇದೀಗ ಮೊಬೈಲ್‌ಗಳಲ್ಲಿ ಹರಿದಾಡುತ್ತಿದ್ದು, ಪೊನ್ನಂಪೇಟೆ ಅರಣ್ಯ ವಲಯದ ಸುಮಾರು 20ಕ್ಕೂ ಹೆಚ್ಚು ಸಿಬ್ಬಂದಿ ಹುಲಿ ಪತ್ತೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ ಎಂದು ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಶಂಕರ್ ತಿಳಿಸಿದ್ದಾರೆ.

ವಂಚಿಸುವ ಉದ್ದೇಶದಿಂದ ಗ್ರಾಹಕರಿಂದ ಹಣ ಸಂಗ್ರಹಿಸುತ್ತಿದ್ದ

ಎಸ್.ವಿ.ಸ್ಮಾರ್ಟ್ ವಿಷನ್ ಸ್ಕೀಂನ ಐವರ ಬಂಧನ

● 1100ಕ್ಕೂ ಹೆಚ್ಚು ಜನರಿಂದ ಹಣ ಸಂಗ್ರಹ ● ಎಸ್‌ಪಿ ಕೆ.ರಾಮರಾಜನ್ ಮಾಹಿತಿ

ಮಡಿಕೇರಿ, ಫೆ.17–ಯಾವುದೇ ಅಧಿಕೃತ ದಾಖಲಾತಿಗಳನ್ನು ಹೊಂದದೆ ವಂಚನೆ ಮಾಡುವ ಉದ್ದೇಶದಿಂದ ಗ್ರಾಹಕರಿಂದ ಹಣ ಸಂಗ್ರಹಿಸುತ್ತಿದ್ದ ಎಸ್.ವಿ.ಸ್ಮಾರ್ಟ್ ವಿಷನ್ ಸ್ಕೀಂನ ಮಾಲೀಕ ಸೇರಿ 5 ಪ್ರತಿನಿಧಿಗಳನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸ್ಕೀಂ ಮಾಲೀಕ ಮಂಗಳೂರು ಸೂರತ್ಕಲ್ ಮೂಲದ ಮಹಮದ್ ಅಶ್ರಫ್(37), ಮಡಿಕೇರಿ ಮಲ್ಲಿಕಾರ್ಜುನ ನಗರದ ನಿವಾಸಿ ಎಂ.ವೈ.ಸುಲೈಮಾನ್(37), ತ್ಯಾಗರಾಜ ಕಾಲೋನಿಯ ಅಬ್ದುಲ್ ಗಫೂರ್(34), ಮೊಹಮದ್ ಅಕ್ರಂ(34) ಹಾಗೂ ಕುಂಬಳಕೇರಿ ನಿವಾಸಿ ಹೆಚ್.ಎನ್.ಕಿಶೋರ್(41) ಬಂಧಿತರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ನಗರ ಪೊಲೀಸ್ ಠಾಣೆ ವ್ಯಾಪ್ತಿಯ ರಾಣಿಪೇಟೆಯಲ್ಲಿ ಜ.30ರಿಂದ ಎಸ್.ವಿ. ಸ್ಮಾರ್ಟ್ ವಿಷನ್ ಸ್ಕೀಂ ನಡೆಸಿ ಸಾರ್ವಜನಿಕರಿಂದ ಹಣ ಸಂಗ್ರಹಿಸಲಾಗುತ್ತಿದೆ. ಈ ಸ್ಕೀಂನಲ್ಲಿ ಈಗಾಗಲೇ 1100ಕ್ಕೂ ಹೆಚ್ಚು ಜನರು ಸೇರಿದ್ದಾರೆ. ಸ್ಕೀಂಗೆ ಸೇರಲು ಪ್ರತಿ ತಿಂಗಳು 1 ಸಾವಿರ ರೂ.ನಂತೆ 24 ಕಂತುಗಳನ್ನು ಗ್ರಾಹಕರು ಕಟ್ಟಬೇಕು. ಪ್ರತಿ ತಿಂಗಳ 30ನೇ ತಾರೀಕಿನಂದು ಸಂಜೆ 5 ಗಂಟೆಗೆ ರಾಣಿಪೇಟೆಯಲ್ಲಿರುವ ಗೆಜ್ಜೆ ಸಂಗಪ್ಪ ಕಲ್ಯಾಣ ಮಂಟಪದಲ್ಲಿ ಲಕ್ಕಿ ಡ್ರಾ ಮಾಡಿ ಫಲಿತಾಂಶವನ್ನು ವಾಟ್ಸಾಪ್ ಗ್ರೂಪ್ ಮೂಲಕ ತಿಳಿಸಿ, ಬಹುಮಾನವನ್ನು 50–60 ದಿನಗಳಲ್ಲಿ ಗ್ರಾಹಕರಿಗೆ ನೀಡಲಾಗುವುದು. 20 ತಿಂಗಳ ಲಕ್ಕಿ ಡ್ರಾನಲ್ಲಿ ಒಟ್ಟು 96 ಜನರಿಗೆ ವಿವಿಧ ಬಹುಮಾನ ನೀಡುವುದಾಗಿ ಬಂಧಿತರು



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಸ್.ವಿ.ಸ್ಮಾರ್ಟ್ ವಿಷನ್ ಸ್ಕೀಂ ವಂಚಿಸಿರುವ ಪೋಸ್ಟರ್ ಪ್ರದರ್ಶಿಸಿದರು.

ಘೋಷಿಸಿದ್ದರು ಎಂದು ಮಾಹಿತಿ ನೀಡಿದರು.

ಯಾವುದೇ ಪರವಾನಗಿ ಇಲ್ಲ: ಅಲ್ಲದೇ, ಸಾರ್ವಜನಿಕರಿಂದ ಠೇವಣಿ ಮಾದರಿಯಲ್ಲಿ ಹಣ ಸಂಗ್ರಹಿಸುವ ಮುನ್ನ ಬ್ಯಾಂಕಿಂಗ್ ವಲಯದ ಅನುಮತಿ ಪಡೆದಿರಬೇಕು. ಆದಾಯ ತೆರಿಗೆ, ಜಿಎಸ್‌ಟಿ ಪಾವತಿಗೆ ಸಂಬಂಧಿಸಿದಂತೆ ದಾಖಲಾತಿ ಹೊಂದಿರ ಬೇಕು. ಆದರೆ, ಎಸ್.ವಿ.ಸ್ಮಾರ್ಟ್ ಮಿಷನ್ ಸ್ಕೀಂ ನಡೆಸುತ್ತಿದ್ದ ವರು ಯಾವುದೇ ದಾಖಲೆ, ಪರವಾನಗಿ ಪಡೆಯದೇ ಅಕ್ರಮವಾಗಿ ಸ್ಕೀಂ ನಡೆಸುತ್ತಿದ್ದರು ಎಂದು ವಿವರಿಸಿದರು.

ಬಹುಮಾನ ನೀಡಿದ್ದರು: ಮೊದಲನೇ ತಿಂಗಳ ಬಹುಮಾನ ವಾಗಿ ಒಬ್ಬರಿಗೆ ಥಾರ್ ಜೀಪ್ ಹಾಗೂ 8 ಜನರಿಗೆ ಬೈಕ್ ನೀಡಬೇಕಾಗಿದ್ದು, ಥಾರ್ ಜೀಪ್ ಬದಲಾಗಿ 7.60 ಲಕ್ಷ ರೂ. ಮತ್ತು 7 ಜನರಿಗೆ 43 ಸಾವಿರ ರೂ. ಚೆಕ್ ಅನ್ನು ನೀಡಿದ್ದಾರೆ.

ಪೊಲೀಸ್ ಗುಪ್ತ ದಳದ ಸಿಬ್ಬಂದಿ ಮೂಲಕ ಪಡೆದ ಮಾಹಿತಿ ಆಧರಿಸಿ, ಈ ಸ್ಕೀಂ ವಿರುದ್ಧ ನಗರ ಠಾಣೆಯಲ್ಲಿ ಸುಮೋಟೋ ಕೇಸ್ ದಾಖಲಿಸಲಾಗಿದೆ. ಸ್ಕೀಂನ ಕಚೇರಿಯಲ್ಲಿದ್ದ ವಿವಿಧ ಉಪಕರಣಗಳನ್ನು ಇದೀಗ ಜಪ್ತಿ ಮಾಡಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ. ಇವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸುವ ಅಗತ್ಯವಿರುವ ಕಾರಣ ಮತ್ತೆ ಪೊಲೀಸ್ ಕಸ್ಟಡಿಗೆ ಪಡೆಯಲಾಗುವುದು ಎಂದು ಕೆ.ರಾಮರಾಜನ್ ಹೇಳಿದರು.

ಯಾರು ಮೋಸ ಹೋಗಬೇಡಿ: ಇಂತಹ ಅನಧಿಕೃತ ಸ್ಕೀಂಗಳನ್ನು ನಂಬಿ ಯಾವುದೇ ಸಾರ್ವಜನಿಕರು ಮೋಸ ಹೋಗಬಾರದು ಎಂದು ಎಸ್ಪಿ ಕೆ.ರಾಮರಾಜನ್ ಮನವಿ ಮಾಡಿದರು.

ಜಿಲ್ಲೆಯಲ್ಲಿ ಇಂತಹ ಮತ್ತೊಂದು ಸ್ಕೀಂ ನಡೆಸುತ್ತಿರುವ ಬಗ್ಗೆ ಮಾಹಿತಿ ದೊರೆತ್ತಿದ್ದು, ಅದರ ವಿರುದ್ಧವೂ ಕ್ರಮ ಜರುಗಿಸಲಾಗುವುದು. ಎಸ್.ವಿ.ಸ್ಮಾರ್ಟ್ ಮಿಷನ್ ಹೆಸರಿನ ಸ್ಕೀಂನಲ್ಲಿ ಹಣ ಹೂಡಿಕೆ ಮಾಡಿ ವಂಚನೆಗೆ ಒಳಗಾದವರು ಸೂಕ್ತ ದಾಖಲಾತಿಗಳೊಂದಿಗೆ ಮಡಿಕೇರಿ ನಗರ ಪೊಲೀಸ್ ಠಾಣೆಗೆ ಹಾಜರಾಗಿ ಮಾಹಿತಿ ನೀಡುವಂತೆ ಎಸ್‌ಪಿ ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಮಡಿಕೇರಿ ಡಿವೈಎಸ್‌ಪಿ ಪಿ.ಎ.ಸೂರಜ್, ವೃತ್ತ ನಿರೀಕ್ಷಕ ಪಿ.ಕೆ.ರಾಜು, ನಗರ ಠಾಣಾಧಿಕಾರಿ ಸಿ.ವಿ.ಶ್ರೀಧರ್, ಅಪರಾಧ ವಿಭಾಗದ ಠಾಣಾಧಿಕಾರಿ ರಾಧ, ನಗರ ಠಾಣೆ ಹಾಗೂ ಕ್ರೈಂ ವಿಭಾಗದ ಸಿಬ್ಬಂದಿ ಭಾಗವಹಿಸಿದ್ದರು.

ಗುಂಡು ಹೊಡೆದುಕೊಂಡು ಅವಿವಾಹಿತ ಆತ್ಮಹತ್ಯೆ

ವಿರಾಜಪೇಟೆ, ಫೆ.17–ಜೀವನದಲ್ಲಿ ಜಿಗುಪ್ಸೆಗೊಂಡಿದ್ದ ಅವಿವಾಹಿತ ಮನೆಯಲ್ಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಕೆ.ಬೋಯಿಕೇರಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.



ಅನಿಲ್‌ಕುಮಾರ್

ಮಡಿಕೇರಿ ತಾಲೂಕಿನ ಐಯ್ಯಂಗೇರಿ ಸಣ್ಣಪುಲಿಕೋಟು ಗ್ರಾಮ ದಿವಂಗತ ಬೋಳೇರಿರ ಪೊನ್ನಪ್ಪ ಮತ್ತು ದಮಯಂತಿ ದಂಪತಿ ಪುತ್ರ ಬಿ.ಪಿ.ಅನಿಲ್ ಕುಮಾರ್ ಅಲಿಯಾಸ್ ಸತೀಶ್ (40) ಆತ್ಮಹತ್ಯೆ ಮಾಡಿಕೊಂಡ ಅವಿವಾಹಿತ.

ಮೃತ ಅನಿಲ್ ಕುಮಾರ್, ತಾಯಿ ದಮಯಂತಿ ಹಾಗೂ ಅಣ್ಣ ಬಿ.ಪಿ.ಬೆಳ್ಯಪ್ಪ ಅವರೊಂದಿಗೆ ವಿರಾಜಪೇಟೆ ಬಳಿಯ ಕೆಬೋಯಿಕೇರಿಯಲ್ಲಿ ವಾಸವಾಗಿದ್ದರು. ಭಾನುವರ ರಾತ್ರಿ ಮನೆ ರೂಂನಲ್ಲಿ ಒಂಟಿನಾಳಿಕೆ ಕೋವಿಯಿಂದ ಕುತ್ತಿಗೆ ಹಾಗೂ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈತ ಮರಗೆಲಸ ಮಾಡಿಕೊಂಡಿದ್ದು, ಮದ್ಯ ಸೇವನೆಯ ಚಟವಿತ್ತು. ಆದರೆ, ನನಗೆ 40 ವರ್ಷವಾದರೂ ಮದುವೆ ಆಗಿಲ್ಲ ಎಂಬ ಕೊರಗು ಬಿ.ಪಿ.ಅನಿಲ್ ಕುಮಾರ್‌ಗೆ ಕಾಡುತ್ತಿತ್ತು ಎನ್ನಲಾಗಿದೆ. ಸ್ಥಳಕ್ಕೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಎನ್.ಜೆ.ಲತಾ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಸಿಕೊಂಡಿದ್ದಾರೆ.

ಪುಸ್ತಕಗಳೇ ಪೂಜಾ ಸಾಮಗ್ರಿಗಳೆಂದು ಭಾವಿಸಿ



ಅರಮೇರಿ ಕಳಂಚೇರಿ ಮಠದಲ್ಲಿ ನಡೆದ ಹೊಂಬೆಳಕು ಕಾರ್ಯಕ್ರಮದಲ್ಲಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಉಪನ್ಯಾಸಕಿ ಕೆ.ಜಯಲಕ್ಷ್ಮೀ, ಶಿಕ್ಷಕಿ ರತಿಕುಮಾರಿ ಇದ್ದರು.

ವಿರಾಜಪೇಟೆ, ಫೆ.17–ಮಕ್ಕಳ ಉತ್ತಮ ಶಿಕ್ಷಣ ಹಾಗೂ ಉತ್ತಮ ನಾಗರಿಕರನ್ನಾಗಿ ಅವರ ಭವಿಷ್ಯದ ಬಗ್ಗೆ ಯೋಚಿಸುವ ಜವಾಬ್ದಾರಿ ಪೋಷಕರು, ಶಿಕ್ಷಕರು ಮತ್ತು ಸರ್ಕಾರದ ಮೇಲಿದೆ ಎಂದು ಮಡಿಕೇರಿ ಸಂತ ಜೋಸೆಫರ ಕಾಲೇಜಿನ ಉಪನ್ಯಾಸಕಿ ಕೆ.ಜಯಲಕ್ಷ್ಮೀ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ–228ರ ಮಾಸಿಕ ತತ್ತ್ವಚಿಂತನಾ ಗೋಷ್ಠಿ ಕಾರ್ಯಕ್ರಮದಲ್ಲಿ 'ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಪೋಷಕರು, ಶಿಕ್ಷಕರ ಪಾತ್ರ' ಕುರಿತು ಉಪನ್ಯಾಸ ನೀಡಿದ ಅವರು, ಪ್ರತಿಯೊಂದು ಮಗುವಿಗೂ ಶಿಕ್ಷಣ ನೀಡುವುದು ಪೋಷಕರ ಕರ್ತವ್ಯ. ಮಕ್ಕಳ 5 ವರ್ಷದ ಪಾಲನೆ ನಂತರ ಎಲ್ಲಾ ಸಂಸ್ಕಾರವನ್ನು ಪೋಷಕರೇ ಕಲಿಸಬೇಕು ಎಂದರು.

ಮಕ್ಕಳ ಭವಿಷ್ಯ ರೂಪಿಸಲು ಶಿಕ್ಷಣ ಅಗತ್ಯ. ಮಕ್ಕಳು ಗುರು–ಹಿರಿಯರಿಗೆ ಗೌರವ ನೀಡಬೇಕು. ಪುಸ್ತಕಗಳೇ ಪೂಜಾ ಸಾಮಗ್ರಿಗಳೆಂದು ಭಾವಿಸಬೇಕು. ಶಿಕ್ಷಕರು ಮಕ್ಕಳಲ್ಲಿ ಅಡಗಿರುವ ಕಲೆ ಮತ್ತು ಪ್ರತಿಭೆ ಗುರುತಿಸಿ ಹೊರತರುಲು ಶಕ್ತರಾಗಬೇಕು. ಯಾವುದೇ ಕಾರಣಕ್ಕೂ ಮಕ್ಕಳನ್ನು ನಿಂದಿಸಬಾರದು. ಮಕ್ಕಳಿಗೆ ಪ್ರೋತ್ಸಹ ನೀಡುವಂತಾಗಬೇಕು. ಯುವ ಜನಾಂಗ ದಾರಿ ತಪ್ಪದಂತೆ ದುಷ್ಚಟಗಳಿಂದ ದೂರವಿರಬೇಕು ಎಂದು ಸಲಹೆ ನೀಡಿದರು.

ಮಕ್ಕಂದೂರು ಸರ್ಕಾರಿ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ರತಿ ಕುಮಾರಿ ಮಾತನಾಡಿ, ಮಕ್ಕಳ ಭವಿಷ್ಯದ ಬಗ್ಗೆ ಪೋಷಕರು ಹೆಚ್ಚು ಜವಾಬ್ದಾರಿ ವಹಿಸಬೇಕು. ಇತ್ತೀಚೆಗೆ ತಂತ್ರಜ್ಞಾನ ಹೆಚ್ಚು ಮುಂದುವರಿಯುತ್ತಿದ್ದು, ಹೆಚ್ಚು ಜ್ಞಾನ ಪಡೆದುಕೊಳ್ಳಬೇಕು ಎಂದರು.

ಅರಮೇರಿ ಕಳಂಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವಿದ್ಯಾರ್ಥಿಗಳಾದ ದೀಪ್ತಿ, ಕೆ.ಬಿ.ಇಂಪನಾ, ಯಶಸ್ವಿನಿ, ಸುಸ್ಮಿತ ಪ್ರಸಾದ್ ಇದ್ದರು.

ಚೌಟಿ ಮಾರಿಯಮ್ಮ ದೇವಾಲಯ ಪ್ರತಿಷ್ಠಾಪನಾ ಮಹೋತ್ಸವ

ಮಡಿಕೇರಿ, ಫೆ.17–ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯದ ನಾಗದೇವರ ನೂತನ ಆಲಯ, ಪುನರ್ ಪ್ರತಿಷ್ಠಾಪನಾ ಮಹೋತ್ಸವ ಹಾಗೂ ನಾಗ ದರ್ಶನ ಫೆ.22 ಮತ್ತು 23ರಂದು ನಡೆಯಲಿದೆ.



ಕ್ಷೇತ್ರ ತಂತ್ರಿಗಳಾದ ಕೆ.ಶ್ರೀಕೃಷ್ಣ ಉಪಾಧ್ಯ ನೇತೃತ್ವದಲ್ಲಿ 2 ದಿನ ವಿವಿಧ ಪೂಜಾ ಕೈಂಕರ್ಯ ಜರುಗಲಿದ್ದು, ಫೆ.22ರಂದು ಸಂಜೆ 6 ಗಂಟೆಯಿಂದ ಗುರುಗಣಪತಿ ಪೂಜೆ, ಪುಣ್ಯಾಹ ವಾಚನ, ಮಹಾ ಸಂಕಲ್ಪ, ಮಾತೃಕಾ ಪೂಜೆ, ಋತ್ವಿಗ್ವರಣೆ, ಪ್ರಸಾದ ಪ್ರತಿಗ್ರಹ, ಸ್ಥಾನ, ಪ್ರಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಪೂಜೆ, ವಾಸ್ತು ಬಲಿ, ಆಶ್ಲೇಷ ಬಲಿ, ಮಹಾಮಂಗಳಾರತಿ ಜರುಗಲಿದೆ. ಫೆ.23ರಂದು ಬೆಳಗ್ಗೆ 7.30ರಿಂದ ಗುರುಗಣಪತಿ ಪೂಜೆ, ಹೋಮ, 8.36ಕ್ಕೆ ನಾಗದೇವರ ಪ್ರತಿಷ್ಠೆ, ಹೋಮ, ಕಲಶಾಭಿಷೇಕ, ಅಲಂಕಾರ ಪೂಜೆ, ಮಹಾಪೂಜೆ ನಡೆಯಲಿದ್ದು, 11.30ಕ್ಕೆ ಉಡುಪಿಯ ವೇ.ಬ್ರ.ಶ್ರೀ ಎ.ಸುಬ್ರಹ್ಮಣ್ಯ ಮಧ್ಯಸ್ಥ ನಾಗಪಾತ್ರಿ ನಾಗದರ್ಶನ ಸೇವೆ ನಡೆಸಲಿದ್ದಾರೆ. ನಂತರ ತೀರ್ಥಪ್ರಸಾದ ವಿತರಣೆ ಹಾಗೂ ಅನ್ನದಾನ ನೆರವೇರಲಿದೆ ಎಂದು ದೇವಾಲಯ ವ್ಯವಸ್ಥಾಪನ ಮಂಡಳಿ ಮನವಿ ತಿಳಿಸಿದೆ.

ಪಂಜೆ ಮಂಗೇಶರಾಯರ ಜನ್ಮ ದಿನಾಚರಣೆ ಕುರಿತು ಸಭೆ



ಸಭೆಯಲ್ಲಿ ಪಂಜೆ ಮಂಗೇಶರಾಯರ ದಿನಾಚರಣೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಮಡಿಕೇರಿ: ಕವಿ ಪಂಜೆ ಮಂಗೇಶರಾಯರ 150ನೇ ಜನ್ಮ ದಿನಾಚರಣೆ ಕುರಿತು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವಕಾಮತ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಜಿಲ್ಲಾ ಪದಾಧಿಕಾರಿಗಳು, ತಾಲೂಕು ಮತ್ತು ಹೋಬಳಿ ಅಧ್ಯಕ್ಷರುಗಳಿಗೆ ಜವಾಬ್ದಾರಿ ವಹಿಸಲಾಯಿತು. ಪಂಜೆ ಮಂಗೇಶರಾಯರ 150ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ಬಿಡುಗಡೆಗೊಳಿಸಿದರು.

ಇದೇ ಸಂದರ್ಭ ಸ್ವಾಗತ ಸಮಿತಿ ಅಧ್ಯಕ್ಷರಾಗಿ ರಾಜೇಶ್ ಪದ್ಮನಾಭ ವೇದಿಕೆ ಸಮಿತಿ ಅಧ್ಯಕ್ಷರಾಗಿ ಅಂಬೆಕಲ್ ನವೀನ್, ಆಹಾರ ಸಮಿತಿ ಅಧ್ಯಕ್ಷರಾಗಿ ಕಡ್ಲೇರ ತುಳಸಿ ಮೋಹನ್, ಸನ್ಮಾನ ಸಮಿತಿ ಅಧ್ಯಕ್ಷರಾಗಿ ಪುದಿಯ ನೆರವನ ರೇವತಿ ರಮೇಶ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾಗಿ ಡಾ.ಕಾವೇರಿ ಪ್ರಕಾಶ್ ಅವರನ್ನು ನೇಮಿಸಲಾಯಿತು. ಸಭೆಯಲ್ಲಿ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ. ರಮೇಶ್, ಜಿಲ್ಲಾ ಗೌರವ ಕಾರ್ಯದರ್ಶಿ ಎಸ್.ಐ.ಮುನೀರ್ ಅಹ್ಮದ್ ಮತ್ತು ಜಿಲ್ಲಾ ಸಹಕಾರ್ಯದರ್ಶಿ ಜಲಜ ಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಶಿವರಾತ್ರಿ, ಯುಗಾದಿ ಜಾತ್ರೆಗೆ ಅಗತ್ಯ ಸಿದ್ಧತೆ ಕೈಗೊಳ್ಳಿ

● ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರ ಆಗಮನ ಹಿನ್ನೆಲೆ
● ಅಧಿಕಾರಿಗಳಿಗೆ ಹನೂರು ಶಾಸಕ ಮಂಜುನಾಥ್ ಸೂಚನೆ

ಚಾಮರಾಜನಗರ, ಫೆ.17–ಪ್ರಸಿದ್ಧ ಯಾತ್ರಾಕ್ಷೇತ್ರ ಮಹದೇಶ್ವರಬೆಟ್ಟದಲ್ಲಿ ಫೆ.25 ರಿಂದ ಮಾ.1ರವರೆಗೆ ಮಹಾಶಿವರಾತ್ರಿ ಹಾಗೂ ಮಾ.27 ರಿಂದ 30ರವರೆಗೆ ಯುಗಾದಿ ಜಾತ್ರಾ ಮಹೋತ್ಸವ ನಡೆಯಲಿದ್ದು, ಜಾತ್ರೆಗೆ ಆಗಮಿಸುವ ಭಕ್ತರ ಸೌಲಭ್ಯಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಹನೂರು ಕ್ಷೇತ್ರದ ಶಾಸಕ ಎಂ.ಆರ್.ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಾತ್ರಾ ಮಹೋತ್ಸವ ಸಂಬಂಧ ನಡೆದ ವರ್ಚುವಲ್ ಪೂರ್ವಸಿದ್ಧತೆ ಸಭೆಯಲ್ಲಿ ಮಾತನಾಡಿದ ಅವರು, ಜಾತ್ರೆಗೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಆಗಮಿಸಲಿದ್ದಾರೆ. ಈ ವೇಳೆ ಭಕ್ತರಿಗೆ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ವಾಸ್ತವ್ಯ, ದಾಸೋಹ, ದೇವರ ದರ್ಶನಕ್ಕೆ ಯಾವುದೇ ತೊಂದರೆಯಾಗದಂತೆ ಅನುಕೂಲ ಕಲ್ಪಿಸಬೇಕು. ಹೀಗಾಗಿ ಎಲ್ಲಾ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವುದರಿಂದ ಘಟಕಗಳ ನೀರಿನ ಮಾದರಿಗಳನ್ನು ಪರೀಕ್ಷಿಸಬೇಕು. ಪಾದಯಾತ್ರೆಯಲ್ಲಿ ಸಾಕಷ್ಟು ಜನರು ಕ್ಷೇತ್ರಕ್ಕೆ ಆಗಮಿಸುವುದರಿಂದ ಮಾರ್ಗಮಧ್ಯೆ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಮಹದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧ ಇರುವುದರಿಂದ ಪ್ಲಾಸ್ಟಿಕ್ ಬಾಟಲ್ ಸೇರಿದಂತೆ ಇತರೆ ತ್ಯಾಜ್ಯಗಳನ್ನು ಕೊಂಡೊಯ್ಯದಂತೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಾತ್ರಾ ಮಹೋತ್ಸವದ ಪೂರ್ವಸಿದ್ಧತೆ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಕ್ಷೇತ್ರದಲ್ಲಿ ನೈರ್ಮಲ್ಯ ಕಾಪಾಡಬೇಕು. ಆರೋಗ್ಯ ಇಲಾಖೆಯಿಂದ ಹೆಚ್ಚುವರಿ ವೈದ್ಯರು, ಸಿಬ್ಬಂದಿ ನಿಯೋಜಿಸಿ ಅಗತ್ಯ ಔಷಧ ದಾಸ್ತಾನು ಮಾಡಿಕೊಳ್ಳಬೇಕು. ಪಾದಯಾತ್ರಿಗಳು ಬರುವ ಹಿನ್ನೆಲೆಯಲ್ಲಿ ಕೌದಳ್ಳಿ ಆರೋಗ್ಯ ಕೇಂದ್ರದಲ್ಲಿ ದಿನದ 24 ಗಂಟೆಯಲ್ಲೂ ವೈದ್ಯಕೀಯ ಸೇವೆ ಲಭ್ಯವಾಗಬೇಕು. ಪಾದಯಾತ್ರೆಗಳಿಗೆ ನೇರವಾಗಿ ದೇವರ ದರ್ಶನಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ಜಾತ್ರೆಗೆ ಹೆಚ್ಚು ಸಂಖ್ಯೆಯಲ್ಲಿ ಬಸ್‌ಗಳು ಸಂಚರಿಸಲಿವೆ. ರಾಜ್ಯ ಸಾರಿಗೆ ಸಂಸ್ಥೆ ಮತ್ತು ತಮಿಳುನಾಡಿನ ವಿವಿಧ ಭಾಗಗಳಿಂದಲೂ ಬಸ್‌ಗಳು ಹೆಚ್ಚು ನಿಯೋಜನೆಯಾಗಲಿವೆ. ನಿಗಮದ ಅಧಿಕಾರಿಗಳನ್ನು ಕ್ಷೇತ್ರಕ್ಕೆ ನಿಯೋಜಿಸಿ ಜನರ ಅಗತ್ಯಕ್ಕೆ ತಕ್ಕಂತೆ ಬಸ್‌ಗಳನ್ನು ಮುಂಚಿತವಾಗಿಯೇ ಸಂಚರಿಸುವ ವ್ಯವಸ್ಥೆಯಾಗಲಿ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಭಕ್ತರು, ಗಣ್ಯರು ಸೇರಿದಂತೆ ಎಲ್ಲರಿಗೂ ಮಾಹಿತಿ ನೀಡುವ ಕಾರ್ಯ ಸಮರ್ಪಕವಾಗಿರಬೇಕು. ಯಾವುದೇ ಗೊಂದಲಗಳಿಗೆ ಅವಕಾಶವಾಗದಂತೆ ಸಿಬ್ಬಂದಿ ನಿಯೋಜಿಸಬೇಕು. ದೇವಾಲಯದಲ್ಲಿ ನಡೆಯುವ ವಿಶೇಷ ಪೂಜೆ ಇನ್ನಿತರ ಕೈಂಕರ್ಯಗಳ ಬಗ್ಗೆ ಎಲ್‌ಇಡಿ ಮೂಲಕ ವೀಕ್ಷಣೆಗೆ ಅವಕಾಶವಾಗಬೇಕು. ನಿಗದಿಪಡಿಸಿದ ಸ್ಥಳಗಳಲ್ಲಿ ವಾಹನ ನಿಲುಗಡೆಯಾಗಬೇಕು. ಸುಸೂತ್ರವಾಗಿ ಜಾತ್ರೆ ನಡೆಯಲು ಪೂರಕವಾಗಿ ಎಲ್ಲಾ ಅಗತ್ಯ ವ್ಯವಸ್ಥೆ ಕಲ್ಪಿಸಬೇಕೆಂದು ಹೇಳಿದರು.

> ಶಿವರಾತ್ರಿ ಜಾತ್ರೆಗೆ ಅಗತ್ಯ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಇಬ್ಬರು ಡಿವೈಎಸ್‌ಪಿ, 9 ಇನ್ಸ್‌ಪೆಕ್ಟರ್, 32 ಸಬ್‌ಇನ್ಸ್‌ಪೆಕ್ಟರ್, 67 ಸಹಾಯಕ ಸಬ್ ಇನ್ಸ್‌ಪೆಕ್ಟರ್, 421 ಕಾನ್ಸ್‌ಟೇಬಲ್, 98 ಮಹಿಳಾ ಪೊಲೀಸರು, 401 ಗೃಹರಕ್ಷಕರು, ಡಿಆರ್ 4 ತುಕಡಿ, ಕೆಎಸ್‌ಆರ್‌ಪಿ 1 ತುಕಡಿ ನಿಯೋಜಿಸಲಾಗಿದೆ.
>
> –ಡಾ.ಬಿ.ಟಿ.ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಜಿಪಂ ಸಿಇಓ ಮೋನಾ ರೋತ್, ಸಾಲೂರು ಬೃಹನ್ಮಠದ ಡಾ.ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು, ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾದ ಗಂಗನ ತಿಮ್ಮಯ್ಯ, ಭಾಗ್ಯಮ್ಮ, ಮಹದೇವಪ್ಪ.ಬಿ, ಮರಿಸ್ವಾಮಿ, ಆರ್.ಎಸ್.ಕುಮಾರ ವಿಜಯ, ದೇವಾಲಯ ಅರ್ಚಕ ಕೆ.ವಿ.ಮಾದೇಶ್, ಮಹದೇಶ್ವರ ವನ್ಯಜೀವಿ ವಿಭಾಗದ ಅಧಿಕಾರಿ ಪರಮೇಶ್ವರ್, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಜೀವನದಲ್ಲಿ ಭಗವದ್ಗೀತೆ ಅನುಸರಿಸಲು ಸಲಹೆ



ಚಾಮರಾಜನಗರದ ಸೇವಾ ಭಾರತಿ ಶಾಲಾವರಣದಲ್ಲಿ ನಡೆದ ಭಗವದ್ಗೀತಾ ಅಭಿಯಾನ ಸಮಾರೋಪದಲ್ಲಿ ಶ್ರೀ ದೇಶಿಕೇಂದ್ರಷಡಕ್ಷರಿ ಸ್ವಾಮೀಜಿ ಮಾತನಾಡಿದರು.

ಚಾಮರಾಜನಗರ, ಫೆ.17–ನಮ್ಮ ಜೀವನದಲ್ಲಿ ಭಗವದ್ಗೀತೆಯನ್ನು ಅನುಸರಣೆ ಮಾಡಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಅನಂತ ನಾಗೇಂದ್ರ ಭಟ್ ಹಿತ್ಲಳ್ಳಿ ಹೇಳಿದರು.

ನಗರದ ಸೇವಾ ಭಾರತಿ ಶಾಲಾವರಣದಲ್ಲಿ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ, ಸರ್ವಜ್ಞೇಂದ್ರ ಸರಸ್ವತಿ ಪ್ರತಿಷ್ಠಾನ ಹಾಗೂ ಭಗವದ್ಗೀತಾ ಅಭಿಯಾನ ಸಮಿತಿಯಿಂದ ಆಯೋಜಿಸಿದ್ದ ಭಗವದ್ಗೀತಾ ಅಭಿಯಾನ ಸಮಾರೋಪದಲ್ಲಿ ಮಾತನಾಡಿದ ಅವರು, ಭಗವದ್ಗೀತಾ ಅಭಿಯಾನ ಸಮಾರೋಪ ಮುಕ್ತಾಯವಲ್ಲ, ಇದು ಪ್ರಾರಂಭ. ಅಭಿಯಾನದ ಮೂಲಕ ಹಲವಾರು ವಿದ್ಯಾರ್ಥಿಗಳು ಭಗವದ್ಗೀತೆ ಶ್ಲೋಕ ಕಲಿತಿದ್ದಾರೆ. ಅದನ್ನು ಅವರು ಜೀವನದಲ್ಲಿ ಅಳವಡಿಸಿಕೊಳ್ಳುವ ಜತೆಗೆ ಅನುಕರಣೆ ಮಾಡಬೇಕು ಎಂದು ಸಲಹೆ ನೀಡಿದರು.

ಇದರಿಂದ ನಮ್ಮ ಜೀವನ ಸುಗಮವಾಗುದಲ್ಲದೇ, ಜೀವನಕ್ಕೆ ಬೇಕಾದ ಅಂಶಗಳನ್ನು ಸಹ ತಿಳಿದುಕೊಳ್ಳಬಹುದು. ಯೋಚನೆ ಶಕ್ತಿಗಳನ್ನು ದೂರಗೊಳಿಸಿ, ಸಂತೋಷ ಸಿಗಲು ಇದು ಸಹಕಾರಿಯಾಗುವುದಲ್ಲದೇ, ಸಮಸ್ಯೆಗಳನ್ನು ಬಗೆಹರಿಸುವ ಶ್ರೇಷ್ಠ ಗ್ರಂಥವಾಗಿದೆ ಎಂದರು.

ಬಳಿಕ ಅಭಿಯಾನದ ಗೌರವಾಧ್ಯಕ್ಷ ಜಿ.ಎಂ.ಹೆಗಡೆ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಶ್ಲೋಕಗಳನ್ನು ಹೇಳಿಕೊಡಲಾಗುತ್ತಿದೆ. ಜತೆಗೆ ಅದರ ಸಂಬಂಧ ಕಂಠಪಾಠ, ಭಾಷಣ ಸ್ಪರ್ಧೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ನಂತರ ಕಂಠಪಾಠ, ಭಾಷಣ ಸ್ಪರ್ಧೆಗಳಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಂಸನಾ ಪತ್ರ ವಿತರಿಸಲಾಯಿತು. ನಗರಸಭೆ ಅಧ್ಯಕ್ಷ ಸುರೇಶ್ ಕಾರ್ಯಕ್ರಮ ಉದ್ಘಾಟಿಸಿದರು. ತಿ.ನರಸೀಪುರದ ಶ್ರೀ ದೇಶಿಕೇಂದ್ರಷಡಕ್ಷರಿ ಸ್ವಾಮೀಜಿ, ಭಗವದ್ಗೀತಾ ಅಭಿಯಾನ ಸಮಿತಿ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ದುಗ್ಗಹಟ್ಟಿ, ಖಜಾಂಜಿ ಎಸ್.ಬಾಲಸುಬ್ರಹ್ಮಣ್ಯ, ಕಾರ್ಯದರ್ಶಿ ಸುರೇಶ್ ಎನ್.ಋಗ್ವೇದಿ ಇನ್ನಿತರರಿದ್ದರು.

ಜಾನಪದ ಜಾತ್ರೆ ಮುಂದೂಡಿಕೆ

ಚಾಮರಾಜನಗರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಶೇಷ ಘಟಕ ಉಪ ಯೋಜನೆಯಡಿ ಫೆ.21ರಂದು ಮಹದೇಶ್ವರಬೆಟ್ಟದಲ್ಲಿ ನಿಗದಿಯಾಗಿದ್ದ ಜಾನಪದ ಜಾತ್ರೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ನಿರ್ದೇಶನದಂತೆ ಮುಂದೂಡಲಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದುವೆ ಮನೆಯಲ್ಲಿ ಹಣದ ಬ್ಯಾಗ್ ಕಳವು ಮಾಡಿದ್ದವನ ಬಂಧನ

ಚಾಮರಾಜನಗರ: ಮದುವೆ ಮನೆಯಲ್ಲಿ ವಧುವಿನ ಮುಯ್ಯಿನ ಕವರ್ ಬ್ಯಾಗ್ ಕಳವು ಮಾಡಿದ ಆರೋಪಿಯನ್ನು ಪೊಲೀಸರು ಕೆಲವೇ ಗಂಟೆಯಲ್ಲಿ ಬಂಧಿಸಿದ್ದಾರೆ.



ಯಾಸಿನ್

ನಗರದ ಬೀಡಿ ಕಾಲೋನಿಯ ಅಹಮದ್ ನಗರದ ನಿವಾಸಿ ಯಾಸಿನ್ (19) ಬಂಧಿತ. ನಗರದ ಬಿ.ರಾಚಯ್ಯ ಜೋಡಿರಸ್ತೆಯ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಅನುಭವ ಮಂಟಪದಲ್ಲಿ ಭಾನುವಾರ ತಾಲೂಕಿನ ಬಂದಿಗೌಡನಹಳ್ಳಿ ಗ್ರಾಮದ ಮಹೇಶ್ವರಿ ಹಾಗೂ ಕೊತ್ತಲವಾಡಿ ಗ್ರಾಮದ ಕೆ.ಎನ್.ಗುರುಪ್ರಸಾದ್ ಅವರ ಮದುವೆ ಕಾರ್ಯಕ್ರಮ ನಡೆಯುತ್ತಿತ್ತು. ಈ ವೇಳೆ ವಧುವಿನ ಕೊಠಡಿಯಲ್ಲಿದ್ದ ಮುಯ್ಯಿ ಕವರ್ ಬ್ಯಾಗ್ ಅನ್ನು ಈತ ಕಳ್ಳತನ ಮಾಡಿದ್ದ.

ಈ ಸಂಬಂಧ ವಧುವಿನ ಮನೆಯವರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಸ್ಥಳಕ್ಕೆ ಪೊಲೀಸರು ಆಗಮಿಸಿ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಆರೋಪಿ ವಧುವಿನ ಕೊಠಡಿಯಲ್ಲಿ ಬ್ಯಾಗ್ ಕಳವು ಮಾಡಿರುವುದು ಪತ್ತೆಯಾಗಿದೆ. ಕೂಡಲೇ ಕಾರ್ಯಾಚರಣೆ ನಡೆಸಿದ ಪೊಲೀಸರು, ಕೆಲವೇ ಗಂಟೆಗಳಲ್ಲೇ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಚಾಮರಾಜನಗರ ವಿವಿ ಮುಚ್ಚದಂತೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಫೆ.17–ಚಾಮರಾಜನಗರ ವಿಶ್ವವಿದ್ಯಾನಿಲಯ ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ ಎಂದು ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಮೂಲಕ ಶ್ರೀಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕನ್ನಡ ಸಂಘಟನೆ ಮುಖಂಡ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಚಾಮರಾಜನಗರ ಸೇರಿದಂತೆ ರಾಜ್ಯದ 9 ವಿಶ್ವವಿದ್ಯಾನಿಲಯಗಳನ್ನು ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ. ರಾಜ್ಯದ ಗಡಿ ಪ್ರದೇಶದಲ್ಲಿರುವ ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳು ಹೆಚ್ಚಾಗಿವೆ. ಜಿಲ್ಲೆಯಲ್ಲಿ ದಲಿತರು, ಹಿಂದುಳಿದ ವರ್ಗದವರು, ಆರ್ಥಿಕವಾಗಿ ದುರ್ಬಲರಾಗಿರುವವರು, ಮಧ್ಯಮ ವರ್ಗದವರು ಹೆಚ್ಚಾಗಿದ್ದು, ಚಾಮರಾಜನಗರ ವಿವಿಯಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.



ಚಾಮರಾಜನಗರ ವಿವಿ ಮುಚ್ಚಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ ಚಾಮರಾಜನಗರ ವಿವಿಯನ್ನು ಸೇರಿದಂತೆ ರಾಜ್ಯದ 9 ವಿಶ್ವ ವಿದ್ಯಾಲಯಗಳನ್ನು ಮುಚ್ಚಲು ಮುಂದಾಗಿರುವುದು ಖಂಡನೀಯವಾಗಿದೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಚಾಮರಾಜನಗರ ರಾಜ್ಯದ ಗಡಿ ಭಾಗವಾಗಿದ್ದು, ಚಾಮರಾಜನಗರ ವಿವಿಯಲ್ಲಿ 5 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಚಾಮರಾಜನಗರ ವಿವಿ ಮುಚ್ಚಬಾರದು. ವಿವಿ ಮುಚ್ಚಲು ಮುಂದಾದರೆ ಸಾವಿರಾರು ವಿದ್ಯಾರ್ಥಿಗಳು ಬೀದಿಗಳಿದು ಹೋರಾಟ ನಡೆಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಚಾ.ಸಿ.ಸೋಮನಾಯಕ, ಆಟೋ ಲಿಂಗರಾಜು, ಆಟೋ ಸುರೇಶ್, ರಾಜಪ್ಪ, ಚಾ.ಸಿ.ಸಿದ್ದರಾಜು, ನಂಜುಂಡಶೆಟ್ಟಿ, ವೀರಭದ್ರ, ಪ್ರಕಾಶ್, ಚಂದ್ರು ಇತರರು ಭಾಗವಹಿಸಿದ್ದರು.

ಬಸವಾಪುರ ಗ್ರಾಮದ ಮಹಿಳೆ ನಾಪತ್ತೆ

ಯಳಂದೂರು, ಫೆ.17– ತಾಲೂಕಿನ ಬಸವಾಪುರ ಗ್ರಾಮದ ಮಹದೇವ ಅವರ ಪತ್ನಿ ಗಂಗಾ (23) ನಾಪತ್ತೆಯಾಗಿದ್ದು, ಈ ಸಂಬಂಧ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಗಂಗಾ

ಈಕೆ ಫೆ.12ರಂದು ಮನೆಯಿಂದ ಕೊಳ್ಳೇಗಾಲ ಆಸ್ಪತ್ರೆಗೆ ಹೋಗಿ ಬರುತ್ತೇನೆಂದು ಹೋದವರು ವಾಪಸ್ ಮನೆಗೆ ಬಂದಿಲ್ಲ ಎಂದು ಪತಿ ಮಹದೇವ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈಕೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ಅಗರ–ಮಾಂಬಳ್ಳಿ ಠಾಣೆಗೆ ತಿಳಿಸಬಹುದು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿದೆ 'ಗೂಳಿಗಳ ದ್ವೀಪ'

●ರಂಗನತಿಟ್ಟು ಪಕ್ಷಿಧಾಮದಲ್ಲಿ ಶತಮಾನಗಳ ವಿಸ್ಮಯ ಗೂಳಿತಿಟ್ಟು ●ವಾರಸುದಾರರಿಲ್ಲದೇ ವಂಶಾಭಿವೃದ್ಧಿ ಹೊಂದಿರುವ ಕಾಡು ಜಾನುವಾರುಗಳು ●ಜಗತ್ತಿನಲ್ಲಿಯೇ ಅತಿ ಹಳೆಯ ಕಾಲದ ಕಾಡಸುಗಳ ತಾಣ ●ಕಾಲರಾ, ಪ್ಲೇಗ್ ಬಂದು ಊರು ತೊರೆದ ಜನ ●ಜನರನ್ನು ಕಂಡು ಅಂಜಿ ದೂರ ಸರಿಯುವ ಹಸುಗಳು ●ಮಿಂಚಿನ ವೇಗದಲ್ಲಿ ಓಡಿ ಕ್ಷಣಾರ್ಧದಲ್ಲಿ ಮರೆಯಾಗುವ ಸ್ವಭಾವ



ಜನರನ್ನು ಕಂಡೊಡನೆ ಮಿಂಚಿನ ವೇಗದಲ್ಲಿ ಓಡುತ್ತಿರುವ ಕಾಡಸುಗಳು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಫೆ.17– ವನ್ಯಜೀವಿ ಜಗತ್ತಿನಲ್ಲಿ ಮಾನವ ಕಂಡು ಕೇಳರಿಯದ ಹಲವು ವಿಸ್ಮಯಗಳು ಸಾಮಾನ್ಯ. ಆ ಜಗತ್ತಿನಲ್ಲಿ ಕಾಡು ಜಾನುವಾರುಗಳು ಸದ್ದಿಲ್ಲದೆ ತಮ್ಮ ಸಾಮ್ರಾಜ್ಯ ಸ್ಥಾಪಿಸಿಕೊಂಡು, ವಾರಸುದಾರರಿಲ್ಲದೆಯೂ ಸಂತತಿ ಬೆಳೆದು ಬರುತ್ತಿರುವ ಅಪರೂಪದ ವಿಸ್ಮಯಕ್ಕೆ ಶ್ರೀರಂಗಪಟ್ಟಣ ಸಾಕ್ಷಿಯಾಗಿದೆ.

ವಿಶ್ವದಲ್ಲಿ ಕೇವಲ ಮೂರ್‍ನಾಲ್ಕು ಸ್ಥಳದಲ್ಲಿ ಮಾತ್ರ ಕಾಡಸು ಮತ್ತು ಕಾಡೆತ್ತುಗಳ ಸಾಮ್ರಾಜ್ಯವಿದ್ದು, ಅವುಗಳಲ್ಲಿ ಕರ್ನಾಟಕದ, ಅದರಲ್ಲೂ ಮಂಡ್ಯ ಜಿಲ್ಲೆಗೆ ಒಳಪಡುವ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದ ದ್ವೀಪಗಳಲ್ಲಿ 25ನೇ ಸಂಖ್ಯೆಯ ದ್ವೀಪ ಇದೀಗ ಜಗತ್ತಿನ ದೃಷ್ಟಿ ತನ್ನತ್ತ ಸೆಳೆಯುವಂತೆ ಮಾಡಿದೆ. ವಲಸೆ(ವಿದೇಶಿ) ಪಕ್ಷಿಗಳು ಮಾತ್ರವಲ್ಲದೆ, 40ಕ್ಕೂ ಹೆಚ್ಚು ಬಗೆಯ ಪಕ್ಷಿ ಸಂಕುಲ ಮತ್ತು ನೂರಾರು ಮೊಸಳೆಗಳನ್ನು ಹೊಂದಿರುವ ರಂಗನತಿಟ್ಟು ಪಕ್ಷಿಧಾಮಕ್ಕೆ ಸೇರಿದ ದೊಡ್ಡ ದ್ವೀಪದಲ್ಲಿ ಕಾಡಸು, ಕಾಡೆತ್ತುಗಳಿವೆ. ಈ ತಳಿಗೆ ಶತಮಾನಗಳ ಇತಿಹಾಸವಿದೆ.

ಗೂಳಿತಿಟ್ಟು: ರಂಗನತಿಟ್ಟು ಪಕ್ಷಿಧಾಮಕ್ಕೆ ಸೇರಿದ 30ಕ್ಕೂ ದ್ವೀಪಗಳಿದ್ದು, ಅದರಲ್ಲಿ ಕೆಲ ದ್ವೀಪಗಳು ವಿವಿಧ ಬಗೆಯ ಪಕ್ಷಿ ಸಂತತಿಗೆ ಆಶ್ರಯ ನೀಡಿವೆ. ರಂಗನತಿಟ್ಟು ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರು ಬೋಟ್ ಸಫಾರಿಯಲ್ಲಿ ವಿವಿಧ ದ್ವೀಪಗಳಲ್ಲಿರುವ ಪಕ್ಷಿ ಸಂತತಿ ಕಣ್ತುಂಬಿಕೊಂಡು ವಾಪಸ್ಸಾಗಲಿದ್ದಾರೆ. ಆದರೆ, ಬೋಟ್ ಸಫಾರಿಯಿಂದ ಸ್ವಲ್ಪ ದೂರ ಕಾವೇರಿ ನದಿಯಲ್ಲೇ ಕ್ರಮಿಸಿದರೆ ದೊಡ್ಡ ದ್ವೀಪವೊಂದು ಸಿಗುತ್ತದೆ. ಆ ದ್ವೀಪದಲ್ಲೇ ಕಾಡುಹಸುಗಳು ನೆಲೆ ಕಂಡುಕೊಂಡಿದ್ದು, ನಾಗರಿಕ ಪ್ರಪಂಚ ವಿಸ್ಮಯಕ್ಕೆ ಒಳಗಾಗುವಂತೆ ಮಾಡಿದೆ. ಸುಮಾರು 66.6 ಎಕರೆ ವಿಸ್ತೀರ್ಣವುಳ್ಳ ಈ ಗೂಳಿತಿಟ್ಟು ದ್ವೀಪ ರಂಗನತಿಟ್ಟು ಪಕ್ಷಿಧಾಮದಲ್ಲಿಯೇ ಅತೀ ದೊಡ್ಡ ದ್ವೀಪವಾಗಿದೆ.

ದ್ವೀಪದಲ್ಲಿ ಹಸು ಸಂತತಿ ಪ್ರವೇಶ: ಶತಮಾನಗಳ ಹಿಂದೆ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಹೊಂದಿಕೊಂಡಂತೆ ಹಲವು ಸಣ್ಣ ಪುಟ್ಟ ಗ್ರಾಮಗಳಿದ್ದು, ಗುಡಿಸಲು ಹಾಗೂ ಸಣ್ಣ ಜೋಪಡಿ ಮನೆಗಳಲ್ಲಿ ಜನ ವಾಸಿಸುತ್ತಿದ್ದರು. 200 ವರ್ಷಗಳ ಹಿಂದೆ ಜನರನ್ನು ಕಾಡಿದ ಪ್ಲೇಗ್, ಕಾಲರಾ ಸೇರಿದಂತೆ ಕೆಲ ಸಾಂಕ್ರಾಮಿಕ ರೋಗದ ಹಾವಳಿಯಿಂದಾಗಿ ಕೆಲವರ ಜೀವಹಾನಿ ಆಗಿದ್ದು, ಇದರಿಂದ ಹೆದರಿದ ವಿವಿಧ ಗ್ರಾಮಗಳ ಜನತೆ ಊರು ತೊರೆದು ಹೋದಾಗ ಕೆಲ ಜಾನುವಾರು ಅಲ್ಲೇ ಉಳಿದವು. ಗೂಳಿತಿಟ್ಟಿನಲ್ಲಿದ್ದ ಜನರು 200 ವರ್ಷಗಳ ಹಿಂದೆ ಊರು ಬಿಟ್ಟಾಗ ಅಲ್ಲಿದ್ದ ಜಾನುವಾರು ಅಲ್ಲಿಯೇ ಜೀವನ ರೂಪಿಸಿಕೊಂಡು ಇಂದು ಕಾಡು ಹಸು, ಕಾಡು ಎತ್ತು(ವೈಲ್ಡ್ ಆಕ್ಸ್, ವೈಲ್ಡ್ ಕೌವ್)ಗಳಾಗಿ ಮಾರ್ಪಟ್ಟಿವೆ.

ಮೈಸೂರು ಅರಸರ ಹೆಜ್ಜೆ: ಕಾವೇರಿ ನದಿ ಕವಲು ಸ್ಥಳದಲ್ಲಿ ಗೂಳಿತಿಟ್ಟು ದ್ವೀಪವಿದ್ದು, ಅಲ್ಲಿ ಸಣ್ಣ ಗ್ರಾಮವೊಂದಿತ್ತು. ಬಹಳ ಹಿಂದೆ ಕಾವೇರಿ ನದಿ ಧಾರಾಕಾರವಾಗಿ ಹರಿಯುತ್ತಿತ್ತು. ಆದರೂ ತಿಟ್ಟಿನ ಗ್ರಾಮಕ್ಕೆ ಯಾವುದೇ ಹಾನಿಯಾಗುತ್ತಿರಲಿಲ್ಲ. ಅಲ್ಲಿನ ಪರಿಸರವನ್ನು ಆಸ್ವಾದಿಸಲು ಮೈಸೂರು ರಾಜವಂಶಸ್ಥರು ದ್ವೀಪಕ್ಕೆ ಬಂದು ವಿಹರಿಸಿ ಹೋಗುತ್ತಿದ್ದರು ಎನ್ನಲಾಗಿದೆ. ರಾಜವಂಶಸ್ಥರಿಗಾಗಿ ಚಿಕ್ಕದಾಗಿ ಸುಂದರ ಮನೆ ಹಾಗೂ ಎತ್ತರದಿಂದ ಪಕ್ಷಿ ಸಂಕುಲ ಮತ್ತು ಪರಿಸರ ವೀಕ್ಷಣೆಗೆಂದು ಮರದಲ್ಲಿಯೇ ಅಟ್ಟಿ(ವೀಕ್ಷಣಾ ಗೋಪುರ) ನಿರ್ಮಿಸಲಾಗಿತ್ತು ಎನ್ನಲಾಗಿದೆ. ಕೆಲ ದಶಕಗಳ ಹಿಂದೆ ಕಾವೇರಿ ನದಿಯಲ್ಲಿ ಉಂಟಾದ ಪ್ರವಾಹದಿಂದ ಗೂಳಿಗುಡ್ಡದಲ್ಲಿ ರಾಜವಂಶಸ್ಥರಿಗಾಗಿ ಕಟ್ಟಿದ್ದ ಮನೆ, ಮರದ ಅಟ್ಟಿ ಹಾಗೂ ಅಲ್ಲಿ ವಾಸವಿದ್ದ ಜನರ ಗುಡಿಸಲುಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದವು. ಅದರ ಕುರುಹಾಗಿ ಮನೆಯ ಅಡಿಪಾಯ ಇಂದಿಗೂ ಇದೆ.

ಮೊಸಳೆ ಪಾರ್ಕ್ ಮಾಡುವ ಆಲೋಚನೆ ಇತ್ತು: ರಂಗನತಿಟ್ಟು ಪಕ್ಷಿಧಾಮದ ಪ್ರದೇಶದಲ್ಲಿ ಕಾವೇರಿ ನದಿಯಲ್ಲಿ 200ಕ್ಕೂ ಹೆಚ್ಚು ಮೊಸಳೆಗಳಿವೆ. 10 ವರ್ಷದ ಹಿಂದೆ ಗೂಳಿತಿಟ್ಟು ದ್ವೀಪದಲ್ಲಿ ದೊಡ್ಡ ಕೆರೆಯೊಂದನ್ನು ನಿರ್ಮಿಸಿ, ಅಲ್ಲಿಗೆ ಕಾವೇರಿ ನದಿಯಿಂದ ಮೊಸಳೆ ಹಿಡಿದು ಬಿಟ್ಟು ಮೊಸಳೆ ಪಾರ್ಕ್ ಮಾಡಬೇಕೆಂಬ ಆಲೋಚನೆ ಅರಣ್ಯ ಇಲಾಖೆಯದ್ದಾಗಿತ್ತು ಆದರೆ, ಆ ಯೋಜನೆಗೆ ಪರಿಸರವಾದಿಗಳಿಂದ ವಿರೋಧದ ಹಿನ್ನೆಲೆಯಲ್ಲಿ ಗೂಳಿತಿಟ್ಟಿನ ನೈಸರ್ಗಿಕ ವಾತಾವರಣ ಹಾಗೆ ಕಾಯ್ದುಕೊಳ್ಳಲಾಗಿದೆ.

ನೂರರಿಂದ 21ಕ್ಕೆ ಕುಸಿತ: ಶತಮಾನಗಳಿಂದ ವಾರಸುದಾರರಿಲ್ಲದ ಕಾಡೆತ್ತು, ಕಾಡಸುಗಳ ತಾಣ 'ಗೂಳಿತಿಟ್ಟು'. ಈ ಹಿಂದೆ ನೂರಕ್ಕೂ ಹೆಚ್ಚು ಇಂತಹ ಜಾನುವಾರುಗಳ ಹೊಂದಿತ್ತು ಎನ್ನಲಾಗಿದೆ. ಆದರೆ, ಅಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಕಾಡಸುಗಳ ಕರುಗಳನ್ನು ತಿಂದು ತೇಗಿವೆ. ಇದರಿಂದ ಜಾನುವಾರುಗಳ ಸಂಖ್ಯೆ 21ಕ್ಕೆ ಕುಸಿದಿದೆ ಎಂಬ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ.

ಸಂತತಿ ರಕ್ಷಣೆಗೆ ಕ್ರಮ ಅಗತ್ಯ: ಕಾಡಸು–ಕಾಡೆತ್ತುಗಳ ಸಂತತಿ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಅಪ್ಪಟ ದೇಸಿ ತಳಿಯೂ ಆಗಿರುವ ಗೂಳಿತಿಟ್ಟಿನ ಹಸು, ಎತ್ತುಗಳ ಜೀವನ ಕ್ರಮದ ಬಗ್ಗೆ ಸಂಶೋಧನೆ ನಡೆಸಬೇಕಾದ ಅಗತ್ಯವಿದ್ದು, ಸಂರಕ್ಷಿತ ಅರಣ್ಯ ಪ್ರದೇಶವಾಗಿರುವುದರಿಂದ ಸಾರ್ವಜನಿಕರ ಪ್ರವೇಶ ನಿಷಿದ್ಧವಾಗಿದೆ. ಜನರ ಪ್ರವೇಶವಿಲ್ಲದೇ ಇದ್ದರೂ ಆ ಕಾಡು ಹಸುಗಳ ಸಂತತಿ ಸ್ವಚ್ಛಂದವಾಗಿ ವಿಹರಿಸುತ್ತಿರುವುದು ಗಮನಾರ್ಹ.

ನಾಚಿಕೆ ಸ್ವಭಾವ, ದಷ್ಟಪುಷ್ಟ ಶಕ್ತಿ: ರಂಗನತಿಟ್ಟು ಪಕ್ಷಿಧಾಮದ 'ಗೂಳಿತಿಟ್ಟು' ದ್ವೀಪದಲ್ಲಿ ವಾರಸುದಾರರಿಲ್ಲದೇ ಶತಮಾನಗಳಿಂದಲೂ ಜೀವಿಸುತ್ತಿರುವ ಹಸು, ಕರು, ಎತ್ತುಗಳು ಮಾನವನ ಸಂಪರ್ಕವಿಲ್ಲದೆ, ತನ್ನದೇ ಆದ ಜೀವನ ಶೈಲಿಯಲ್ಲಿ ವಂಶಾಭಿವೃದ್ಧಿ ಮಾಡಿಕೊಂಡು ಬರುತ್ತಿದೆ. ನೋಡಲು ಸುಂದರವಾಗಿಯೂ ದಷ್ಟಪುಷ್ಟ, ದೈತ್ಯಾಕಾರವಾಗಿಯೂ ಇವೆ ನಾಚಿಕೆ ಸ್ವಭಾವದ್ದಾಗಿರುವ ಈ ಹಸುಗಳು ಜನರನ್ನು ಕಂಡರೆ ಸಾಕು ಅಂಜಿಕೆಯಿಂದ ಓಡಿ ಹೋಗುತ್ತವೆ. ಹಗ್ಗ, ಮೂಗುದಾರವಿಲ್ಲದ ಇವುಗಳು ಜನರನ್ನು ಕಂಡರೆ ದಿಟ್ಟಿಸಿ ನೋಡುತ್ತವೆ. ಆದರೆ ದಾಳಿ ಮಾಡಲು ಮುಂದಾಗದೇ ಮಿಂಚಿನ ವೇಗದಲ್ಲಿ ಕಾಲ್ಕೀಳುತ್ತವೆ.


ಸ್ಥಳಾಂತರ ಯತ್ನ ವಿಫಲ: 10–15 ವರ್ಷಗಳ ಹಿಂದೆ ಗೂಳಿಗುಡ್ಡದಲ್ಲಿರುವ ಹಸು, ಎತ್ತುಗಳನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಪ್ರಯತ್ನ ನಡೆದಿತ್ತು. ದ್ವೀಪದಲ್ಲಿ ನಿಗದಿತ ಸ್ಥಳದ ಸುತ್ತ ಬೇಲಿ ಹಾಕಿ, ಕಲ್ಲುಕಂಬ ನೆಟ್ಟು ಗೂಳಿ, ಹಸು ಹಿಡಿಯಲು ಯತ್ನ ನಡೆಸಲಾಗಿತ್ತು. ಆದರೆ, ಆ ಗೂಳಿಗಳು ಕಲ್ಲು ಕಂಬಕ್ಕೆ ಕೊಂಬಿನಿಂದ ತಿವಿದು ಪುಡಿ ಪುಡಿ ಮಾಡಿದ್ದವು. ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ಕೃಪೆ ಗೂಳಿತಿಟ್ಟಿನ ಹಸುಗಳ ಮೇಲಿದೆ ಎನ್ನುವ ಸ್ಥಳೀಯರು, ಆ ಕಾರಣದಿಂದಲೇ ಶತಮಾನಗಳಿಂದಲೂ ಈ ಹಸು ಸಂತತಿ ನೆಲೆಸಿದೆ. ಅಲ್ಲದೆ, ಅವುಗಳನ್ನು ಹಿಡಿಯುವ ಪ್ರಯತ್ನವೂ ವಿಫಲವಾಗಿವೆ ಎನ್ನುತ್ತಾರೆ.



ರಂಗನತಿಟ್ಟು ಪಕ್ಷಿಧಾಮದ ಗೂಳಿತಿಟ್ಟಿನಲ್ಲಿರುವ ಕಾಡಸುಗಳ ಹಿಂಡು.

ಕಾಡಸುಗಳ ಪ್ರಪಂಚ...

ಶ್ರೀರಂಗಪಟ್ಟಣ ತಾಲೂಕಿನ ಗೂಳಿತಿಟ್ಟು ದ್ವೀಪದಲ್ಲಿರುವಂತೆ ದೇಶ ಹಾಗೂ ವಿದೇಶದ ಬೆರಳೆಣಿಕೆಯಷ್ಟು ಸ್ಥಳದಲ್ಲಿ ವಾರಸುದಾರರಿಲ್ಲದೇ ಕಾಡಸು, ಕಾಡೆತ್ತುಗಳ ಸಂತತಿ ನೆಲೆಸಿವೆ. ಸ್ಥಳೀಯರು ನೀಡಿದ ಮಾಹಿತಿಯನುಸಾರ ಗೂಳಿತಿಟ್ಟಿನ ಹಸುಗಳಿಗೆ ಸುಮಾರು 200 ವರ್ಷಗಳ ಇತಿಹಾಸವಿದೆ ಎನ್ನಲಾಗಿದೆ. ಒಡಿಸ್ಸಾದ ಹಿರಾಕೂಡ್ ಅರಣ್ಯ ಪ್ರದೇಶದಲ್ಲೊಂದು ಇಂತಹ ಜಾನುವಾರುಗಳ ತಾಣವಿದ್ದು, ಅದಕ್ಕೆ 65 ವರ್ಷಗಳ ಇತಿಹಾಸವಿದೆ. 1950ರಲ್ಲಿ ಅಲ್ಲಿನ ಮಹಾನದಿಗೆ ಅಣೆಕಟ್ಟು ಕಟ್ಟಿದ ಪರಿಣಾಮ ಒಡಿಸ್ಸಾದ 141 ಹಾಗೂ ಛತ್ತೀಸ್‌ಘಡ್‌ಗೆ ಸೇರಿದ 33 ಗ್ರಾಮಗಳು ಮುಳುಗಡೆಯಾಗಿದ್ದವು. ಅಲ್ಲಿನ ಜನರು ತಾವು ಸಾಕಿದ್ದ ಜಾನುವಾರುಗಳನ್ನು ಅಲ್ಲಿಯೇ ಬಿಟ್ಟು ಹೋದರು. ಅವುಗಳ ಸಂತತಿ ಇಂದಿಗೂ ನೂರಾರು. ಅಲ್ಲದೆ ಅಮೇರಿಕಾದಲ್ಲೂ ಇಂತಹ ಒಂದು ದ್ವೀಪದಲ್ಲಿ ಕಾಡಸುಗಳು ನೆಲೆಸಿವೆ.



ಗೂಳಿತಿಟ್ಟಿನ ಉಪಗ್ರಹದ ಚಿತ್ರ.

ಮಾರಮ್ಮನ ಜಾತ್ರಾ ಮಹೋತ್ಸವ



ಮೈಸೂರು, ಫೆ.17(ಎಸ್‌ಪಿಎನ್)– ಮೈಸೂರು ಶ್ರೀರಾಂಪುರ 2ನೇ ಹಂತದಲ್ಲಿನ ಶಿವಪುರ ಮತ್ತು ದೇವಯ್ಯನಹುಂಡಿ ಗ್ರಾಮದ ಗ್ರಾಮದೇವತೆ ಮಾರಮ್ಮನವರ ಜಾತ್ರಾ ಮಹೋತ್ಸವ ಸೋಮವಾರ ಜರುಗಿತು.

ಇಲ್ಲಿನ ಗ್ರಾಮಸ್ಥರು ಒಗ್ಗಟ್ಟಾಗಿ ಗ್ರಾಮದ ಮಾರಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿ ದೇವಿಕೃಪೆಗೆ ಪಾತ್ರರಾಗಿದ್ದಾರೆ. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೇರಿದಂತೆ ಇತರರು ಮಾರಮ್ಮನ ದೇವಸ್ಥಾನಕ್ಕೆ ಭೇಟಿ ನೀಡಿ, ದೇವಿಗೆ ತಮ್ಮ ಭಕ್ತಿ ಸಮರ್ಪಿಸಿದರು. ಈ ವೇಳೆ ಗ್ರಾಮದ ಮುಖಂಡರಾದ ಬಸವರಾಜು, ನಾಗರಾಜು ಮತ್ತಿತರರು, ಯಜಮಾನರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು, ಫೆ.17– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಟಿ.ಪಿ.ಶಶಿಕುಮಾರ್ ಮಾರ್ಗದರ್ಶನದಲ್ಲಿ ಎಲ್.ಪ್ರೇಮಕುಮಾರಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮುಕ್ತ ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ಪ್ರೇಮಾಕುಮಾರಿ ಕೊಳ್ಳೇಗಾಲದ ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ.

ಫೆ.20, ಸಂತ ಕವಿ ಸರ್ವಜ್ಞ ಜಯಂತಿ



ಮೈಸೂರು,ಫೆ.17–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂತ ಕವಿ ಸರ್ವಜ್ಞ ಜಯಂತಿಯನ್ನು ಫೆ.20ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರ ಆವರಣದ, ಕಿರುರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ಎ.ಬಿ. ರಮೇಶ್‌ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್ ಹಾಗೂ ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಮತ್ತು ವಿವೇಕಾನಂದ.ಎಸ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಡಿಕೇರಿ, ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಡಾ.ಸಿ. ರೇಣುಕಾಂಬ ಉಪನ್ಯಾಸ ನೀಡಲಿದ್ದಾರೆ.

ಬಸವ ಜಯಂತಿಯ ಪೋಸ್ಟರ್ ಬಿಡುಗಡೆ...



ಮೇ 10 ಮತ್ತು 11ರಂದು ಮೈಸೂರಿನಲ್ಲಿ ಆಚರಿಸುವ ಬಸವ ಜಯಂತಿಯ ಪೋಸ್ಟರ್ ಅನ್ನು ಸುತ್ತೂರು ಶ್ರೀಗಳು ಬಿಡುಗಡೆ ಮಾಡಿದರು. ಅಧ್ಯಕ್ಷ ಬ್ಯಾತಹಳ್ಳಿ ನಾಗರಾಜು, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಬಾಬು, ಕೋಶಾಧ್ಯಕ್ಷ ಹದಿನಾರು ರಾಜು, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಹಿನಕಲ್ ಬಸವರಾಜು, ರೇಚಣ್ಣ ಮತ್ತು ಶ್ರೀಕಂಠಮೂರ್ತಿ ಉಪಸ್ಥಿತರಿದ್ದರು.

ಶಾಲೆಗಳಲ್ಲಿ ಇನ್ನು ಮೊಟ್ಟೆ, ಬಾಳೆಹಣ್ಣು ಮಾತ್ರ ವಿತರಣೆ

ಚಿಕ್ಕಿ ಮಕ್ಕಳ ಆರೋಗ್ಯಕ್ಕೆ ಹಾನಿ ಹಿನ್ನಲೆಯಲ್ಲಿ ಸ್ಥಗಿತ

ಮೈಸೂರು, ಫೆ.17(ಎಸ್‌ಪಿಎನ್)– ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಂದರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಕೆ ಅನುಮತಿ ನೀಡಿ ಸೋಮವಾರ(ಫೆ.17) ಆದೇಶಿಸಿದೆ.

ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸುವ ಕುರಿತು ಪ್ರತ್ಯೇಕವಾದ ಮಾರ್ಗಸೂಚಿ ಹೊರಡಿಸತಕ್ಕದ್ದು. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಟಿಎಫ್‌ಪಿ 2024, ದಿ:3.1.2025ರಲ್ಲಿ ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು, ನಿರ್ದೇಶನದನ್ವಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯ ದರ್ಶಿ(ಯೋಜನೆ) ವೈ.ಸಿ.ರವಿಕುಮಾರ್ ಆದೇಶಿಸಿದ್ದಾರೆ.

2022–23 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ ಯೋಜನೆಯಡಿ ರಾಜ್ಯದ ಎಲಾ ಜಿಲ್ಲೆಗಳಲ್ಲಿ 1–8ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 46 ದಿನಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆಹಣ್ಣು/ಚಿಕ್ಕಿಯನ್ನು ವಿತರಿಸಲು ಆದೇಶಿಸಲಾಗಿತ್ತು. ಅಂತೆಯೇ 2023–24ನೇ ಸಾಲಿನ ಜುಲೈ ಆಯವ್ಯಯ ಭಾಷಣದಲ್ಲಿನ ಘೋಷಣೆಯಂತೆ ರಾಜ್ಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1–10ನೇ ತರಗತಿಗಳವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ಪ್ರತಿ ವಿದ್ಯಾರ್ಥಿಗಳ ಒಂದು ದಿನದ ಘಟಕದ ವೆಚ್ಚ 6ರೂನಂತೆ) 80 ದಿನಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ/ಶೇಂಗಾ ಚಿಕ್ಕಿ/ ಬಾಳೆಹಣ್ಣು ವಿತರಿಸಲು ಆದೇಶಿಸಲಾಗಿತ್ತು.

ಚಿಕ್ಕಿಯಲ್ಲಿ ಕೊಬ್ಬಿನಾಂಶ ಪತ್ತೆ: ಈಗಾಗಲೇ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ವಿತರಿಸಲಾಗುತ್ತಿರುವ ಚಿಕ್ಕಿಯಲ್ಲಿ ಮಕ್ಕಳ ಆರೋಗ್ಯಕ್ಕೆ ಹಾನಿಕಾರಕ ಎನ್ನಬಹುದಾದಂತಹ ಅಪರ್ಯಾಪ್ತ ಕೊಬ್ಬಿನಾಂಶ (Unsaturated Fats) ಹೆಚ್ಚಿಗೆ ಇದ್ದು, ಇದರಲ್ಲಿನ ಸಕ್ಕರೆ ಅಂಶ ಕೂಡ ಅಧಿಕವಾಗಿದೆ, ಈ ಚಿಕ್ಕಿಯನ್ನು ಸರಿಯಾಗಿ ಸಂಗ್ರಹಿಸದಿದ್ದಲ್ಲಿ ಅದು ಕಲುಷಿತವಾಗಿ ಮಕ್ಕಳ ಆರೋಗ್ಯಕ್ಕೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ ಎಂಬ ಧಾರವಾಡ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರು ವರದಿ ಹಿನ್ನಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಈ ಆದೇಶ ಹೊರಡಿಸಿದೆ.

ಷೇರು ಮಾರುಕಟ್ಟೆ ಹೂಡಿಕೆ ನೆಪದಲ್ಲಿ 21.60 ಲಕ್ಷ ವಂಚನೆ



ಮೈಸೂರು, ಫೆ.17(ಎಸ್‌ಬಿಡಿ)– ಷೇರು ಮಾರುಕಟ್ಟೆ ನೆಪದಲ್ಲಿ ವ್ಯಕ್ತಿಯೊಬ್ಬರಿಂದ 21.60 ಲಕ್ಷ ರೂ. ಲಪಟಾಯಿಸಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಬೋಗಾದಿ ನಿವಾಸಿಯೊಬ್ಬರು ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ನೀಡುವ ವಾಟ್ಸಾಪ್ ಗ್ರೂಪ್ ಸೇರಿ, ಮೋಸ ಹೋಗಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಕುಳಿತಲ್ಲೇ ಹೆಚ್ಚು ಹಣ ಗಳಿಸಬಹುದು ಎಂದು ನಂಬಿ, 20 ದಿನಗಳಲ್ಲಿ ಹಂತ ಹಂತವಾಗಿ 21.60 ಲಕ್ಷ ಹಣವನ್ನು ವಂಚಕರು ತಿಳಿಸಿದ ಖಾತೆಗೆ ವರ್ಗಾಯಿಸಿದ್ದಾರೆ. ನಂತರ ಈ ಬಗ್ಗೆ ಪರಿಶೀಲಿಸಿದಾಗ ಮೋಸ ಹೋಗಿರುವುದು ಗೊತ್ತಾಗಿದೆ.

ಮಹಾಶಿವರಾತ್ರಿ ಪ್ರಯುಕ್ತ ಧರ್ಮಸ್ಥಳಕ್ಕೆ ಪಾದಯಾತ್ರೆ



ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಮಾಲಾಧಾರಿ ಭಕ್ತರು ಮೈಸೂರಿಂದ ಧರ್ಮಸ್ಥಳಕ್ಕೆ ಸೋಮವಾರದಿಂದ ಪಾದಯಾತ್ರೆ ಆರಂಭಿಸಿದರು.

ಮೈಸೂರು, ಫೆ.17(ಎಸ್‌ಪಿಎನ್)– ಮಹಾಶಿವರಾತ್ರಿ ಪ್ರಯುಕ್ತ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿಗೆ ಇಂದಿ (ಸೋಮವಾರ)ನಿಂದ ಫೆ.26ರವರೆಗೆ ಆಯೋಜಿಸಿರುವ ಮಾಲಾಧಾರಿ ಭಕ್ತರು ಪಾದಯಾತ್ರೆಯನ್ನು ಮೈಸೂರು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆಸೇವಾ ಟ್ರಸ್ಟಿನ ಮಹಿಳಾ ಭಕ್ತರು ತಾತ್ಕಾಲಿಕವಾಗಿ ಸ್ಥಾಪಿಸಿದ್ದ ಶ್ರೀ ಮಂಜುನಾಥಸ್ವಾಮಿ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಸೋಮವಾರ ಆರಂಭಿಸಿದರು.

ಈ ಪಾದಯಾತ್ರೆ ನೇತೃತ್ವವನ್ನು ಟ್ರಸ್ಟ್ ಅಧ್ಯಕ್ಷ ಎಂ.ಕೆ.ಮಹದೇವ ವಹಿಸಿದ್ದು, ಸುಮಾರು 60ಕ್ಕೂ ಹೆಚ್ಚು ಭಕ್ತರಿಗೆ ಮಂಜುನಾಥ ಸ್ವಾಮಿ ಮಾಲೆ ಧರಿಸಿ, ಭಕ್ತಿ–ಭಾವದೊಂದಿಗೆ ಎಲ್ಲರೂ ಇಂದಿನಿಂದ ಮೈಸೂರು–ಮಡಿಕೇರಿ ಮಾರ್ಗವಾಗಿ ಧರ್ಮಸ್ಥಳಕ್ಕೆ ಪಾದಯಾತ್ರೆ ತೆರಳಲಿದ್ದಾರೆ. ಇಂದು 60 ಜನರೊಂದಿಗೆ ಆರಂಭಿಸುವ ಈ ಯಾತ್ರೆ, ಧರ್ಮಸ್ಥಳಕ್ಕೆ ಸೇರುವಷ್ಟರಲ್ಲಿ 200ಕ್ಕೂ ಹೆಚ್ಚು ಮಂದಿ ನಮ್ಮೊಂದಿಗೆ ಸೇರಿಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಪಾದಯಾತ್ರೆಗೆ ಭಕ್ತಾದಿಗಳು ನೀಡುವ ಧನ–ಧಾನ್ಯವನ್ನು ಉಪಯೋಗಿಸಿಕೊಂಡು ಎಲ್ಲರಿಗೂ ಉಚಿತ ಪ್ರಸಾದಕ್ಕೆ ವ್ಯವಸ್ಥೆ ಮಾಡಲಾಗಿದೆ. ದಾರಿಮಧ್ಯೆ ಭಕ್ತಾದಿಗಳು ನೀಡುವ ಧನ–ಧಾನ್ಯಗಳನ್ನು ಧರ್ಮಸ್ಥಳದ ದಾಸೋಹ ಭವನಕ್ಕೆ ನೀಡುತ್ತೇವೆ ಎಂದು ಮಾಹಿತಿ ನೀಡಿದರು. ಈ ವೇಳೆ ಟ್ರಸ್ಟ್ ಸದಸ್ಯರಾದ ಮಾದೇಶ, ಜಿ.ಮಹದೇವ, ಅಶೋಕ ಕುಮಾರ್, ಮುರುಗೇಶ್, ಚಿನ್ನಸ್ವಾಮಿ, ಸೂರ್ಯಕುಮಾರ್, ಮಂಜಣ್ಣ ಗೋಪಮ್ಮ ರಾಜೇಶ್ವರಿ, ಕೌಶಲ್ಯ, ತೇಜಸ್ ಸೇರಿದಂತೆ ಇತರರಿದ್ದರು.

ಪರವಾನಗಿ ರಹಿತ ತಂಬಾಕು ದಂಡ ರಹಿತವಾಗಿ ಖರೀದಿ

●ಕೇಂದ್ರ ಸರ್ಕಾರದ ಆದೇಶ ●ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಇತ್ತೀಚೆಗೆ ಸಂಸದ ಯದುವೀರ್ ಭೇಟಿ ಮಾಡಿದ ಫಲಶ್ರುತಿ

ಮೈಸೂರು, ಫೆ.17(ಎಂಕೆ)– ಪರವಾನಗಿ ರಹಿತ ತಂಬಾಕು ಬೆಳೆಗಾರರು ಎಫ್‌ಸಿವಿ (ಫ್ಲೂ ಕ್ಯೂರ್ಡ್ ವರ್ಜೀನಿಯಾ) ತಂಬಾಕು ಮಾರಾಟ ಮಾಡಲು ಅವಕಾಶ ನೀಡಲು ಹಾಗೂ ದಂಡ ವಿಧಿಸದೆ ಇರಲು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಪರವಾನಗಿ ರಹಿತ ತಂಬಾಕು ಬೆಳೆಗಾರರಿಗೂ ಮಾರಾಟಕ್ಕೆ ಅವಕಾಶ ನೀಡಬೇಕು ಹಾಗೂ ಅವರಿಗೆ ವಿಧಿಸಲಾಗುತ್ತಿದ್ದ ದಂಡ ಮನ್ನಾ ಮಾಡಬೇಕು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರ, ಅಧಿಕೃತವಾದ ಹರಾಜು ವೇದಿಕೆಗಳಲ್ಲಿ ಮಾರಾಟ ಮಾಡಲು ಅನುಮತಿ ನೀಡಿದೆ.

ಈ ಕುರಿತು ಮಾಹಿತಿ ನೀಡಿರುವ ಸಂಸದ ಯದುವೀರ್, ಕೇಂದ್ರ ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹವಾಗಿದೆ. ಇದರಿಂದ ಸಾವಿರಾರು ಬೆಳೆಗಾರರಿಗೆ ಅನುಕೂಲವಾಗಲಿದೆ. ಎಫ್‌ಸಿವಿ ತಂಬಾಕನ್ನು 53,325 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು 40,487 ನೋಂದಾಯಿತ ಹಾಗೂ 12,838 ಪರವಾನಗಿ ರಹಿತ ಬೆಳೆಗಾರರು ಬೆಳೆಯುತ್ತಿದ್ದಾರೆ. ಕೇಂದ್ರ ಸರ್ಕಾರದ ನಿರ್ಧಾರದಿಂದಾಗಿ ಪ್ರಮುಖವಾಗಿ 12,838 ತಂಬಾಕು ಬೆಳೆಗಾರರಿಗೆ ಅನುಕೂಲವಾಗಲಿದೆ. ಕರ್ನಾಟಕ ತಂಬಾಕು ಬೆಳೆಗಾರರ ಸಂಕಷ್ಟವನ್ನು ನಿವಾರಿಸಲು ಕೇಂದ್ರ ಬಿಜೆಪಿ ಸರ್ಕಾರ ಸಮರ್ಪಕ ನಿರ್ಧಾರ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಕಳೆದ ಮೇ ಮತ್ತು ಜೂನ್ ತಿಂಗಳಿನಲ್ಲಿ ಸುರಿದ ಭಾರಿ ಮಳೆಯಿಂದ ತಂಬಾಕು ಬೆಳೆ ನಷ್ಟವಾಗಿತ್ತು. ತಂಬಾಕು ಬೆಳೆ ಉಳಿಸಲು ಪರ್ಯಾಯ ಕ್ರಮಗಳನ್ನು ಕೈಗೊಳ್ಳುತ್ತಿದ್ದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿ ರೈತರು ಸಂಕಷ್ಟ ಅನುಭವಿಸುವಂತಾಗಿತ್ತು. ಕಳೆದ ಫೆ.6 ರಂದು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ತಂಬಾಕು ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಮನವಿ ಮಾಡಲಾಗಿತ್ತು. ಇದಕ್ಕೆ ಸಚಿವರು ಸ್ಪಂದಿಸಿ ಸೂಕ್ತ ನಿರ್ಧಾರ ಕೈಗೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ, ವಾಣಿಜ್ಯ ಸಚಿವರಿಗೆ ಅಭಿನಂದನೆ ತಂಬಾಕು ಬೆಳೆಗಾರರಿಗೆ ಅನುಕೂಲಕರ ನಿರ್ಧಾರವನ್ನು ಕೈಗೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರಿಗೆ ಕರ್ನಾಟಕದ ತಂಬಾಕು ಬೆಳೆಗಾರರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಅತ್ಯಂತ ತ್ವರಿತವಾಗಿ ಸಚಿವರು ತೀರ್ಮಾನ ಕೈಗೊಂಡಿರುವುದು ರಾಜ್ಯದ ಮತ್ತು ಮೈಸೂರು–ಕೊಡಗು ಕ್ಷೇತ್ರ ವ್ಯಾಪ್ತಿಯ ಬೆಳೆಗಾರರಿಗೆ ಸಾಕಷ್ಟು ನೆರವಾಗಲಿದೆ ಎಂದು ತಿಳಿಸಿದ್ದಾರೆ.



ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಇತ್ತೀಚೆಗೆ ಭೇಟಿಯಾಗಿದ್ದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪರವಾನಗಿ ರಹಿತ ತಂಬಾಕು ಬೆಳೆಗಾರರಿಗೂ ಮಾರಾಟಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದ್ದರು.

ಅನಧಿಕೃತ ತಂಬಾಕು ಮಾರಾಟಕ್ಕೆ ಅನುಮತಿಗೆ ಬಿಜೆಪಿ ಜಿಲ್ಲಾಧ್ಯಕ್ಷರ ಕೃತಜ್ಞತೆ



ಮೈಸೂರು, ಫೆ.17(ಎಸ್‌ಬಿಡಿ)– ಕರ್ನಾಟಕದ ತಂಬಾಕು ಬೆಳೆಗಾರರ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸಿರುವುದಕ್ಕೆ ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸಂತಸ ವ್ಯಕ್ತಪಡಿಸಿದ್ದಾರೆ.

ಪರವಾನಗಿಯುಳ್ಳ ಬೆಳೆಗಾರರ ಹೆಚ್ಚುವರಿ ತಂಬಾಕು ಉತ್ಪನ್ನ ಹಾಗೂ ಪರವಾನಗಿ ಹೊಂದಿರದ ಬೆಳೆಗಾರರ ಅನಧಿಕೃತ ಉತ್ಪನ್ನವನ್ನು ತಂಬಾಕು ಮಂಡಳಿ ಹರಾಜಿನಲ್ಲಿ ಮಾರಾಟ ಮಾಡಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಒಪ್ಪಿಗೆ ನೀಡಿದ್ದು, ಈ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ರೈತಾಪಿ ವರ್ಗದ ಪರವಾಗಿದೆ ಎನ್ನುವುದನ್ನು ಮತ್ತೊಮ್ಮೆ ಸಾಭೀತುಪಡಿಸಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಬಣ್ಣಿಸಿದ್ದಾರೆ.

ರಾಜ್ಯದಲ್ಲಿನ ನೋಂದಾಯಿತ ಹಾಗೂ ನೋಂದಾಯಿತವಲ್ಲದ ತಂಬಾಕು ಬೆಳೆಗಾರರು ತಾವು ಬೆಳೆದ ಉತ್ಪನ್ನವನ್ನು ಯಾವುದೇ ಹೆಚ್ಚಿನ ಶುಲ್ಕವಿಲ್ಲದೇ ಮಾರಾಟ ಮಾಡಬಹುದಾಗಿದೆ. ಮಾರಾಟಕ್ಕಿದ್ದ ಮಿತಿಯನ್ನೂ ರದ್ದುಗೊಳಿಸಿರುವುದರಿಂದ ಪ್ರಾಕೃತಿಕ ವಿಪತ್ತುಗಳಿಂದ ಸಂಕಷ್ಟಕ್ಕೊಳಗಾಗಿದ್ದ ಸಾವಿರಾರು ರೈತರಿಗೆ ಅನುಕೂಲವಾಗಲಿದೆ. ಈ ವೇಳೆ ಪ್ರಧಾನಿ ನರೇಂದ್ರ ಮೋದಿ, ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ರೈತರ ಪರವಾಗಿ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಉರುಳಿಗೆ ಸಿಲುಕಿ ಚಿರತೆ ಸಾವು



ನಂಜನಗೂಡು, ಫೆ.17– ತಾಲೂಕಿನ ರಾಂಪುರ ಹೊರ ವಲಯದ ಖಾಸಗಿ ಜಮೀನೊಂದರಲ್ಲಿ ಕಾಡುಹಂದಿ ಸೇರಿದಂತೆ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಹಾಕಲಾಗಿದ್ದ ಉರುಳಿಗೆ ಸಿಲುಕಿ ಸುಮಾರು ನಾಲ್ಕರಿಂದ ಐದು ವರ್ಷದ ಹೆಣ್ಣು ಚಿರತೆ ಮೃತಪಟ್ಟಿದೆ.

ಮೈಸೂರು ಸಮೀಪದ ಯಡಹಳ್ಳಿ ಗ್ರಾಮದ ಎನ್.ಮಹೇಶ್ ಅವರಿಗೆ ಸೇರಿದ ಜಮೀನನ್ನು ಶಿರಮಳ್ಳಿ ಗ್ರಾಮದ ಪುಟ್ಟಮಾದಶೆಟ್ಟಿ, ಪ್ರಸನ್ನ ಎಂಬುವರಿಗೆ ಗುತ್ತಿಗೆಗೆ ಕೊಟ್ಟಿದ್ದರು. ಶುಕ್ರವಾರ ರಾತ್ರಿ ಉರುಳಿಗೆ ಚಿರತೆಯೊಂದು ಸಿಕ್ಕಿ ಬಿದ್ದಿದ್ದು, ನೋವಿನಿಂದ ನರಳುತ್ತಿರುವ ದೃಶ್ಯವನ್ನು ಕಂಡ ರೈತರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ನಂತರ ನಂಜನಗೂಡು ವಲಯ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಚಿರತೆಗೆ ಅರವಳಿಕೆ ಮದ್ದು ನೀಡುವ ಮೂಲಕ ನಂಜನಗೂಡಿನ ನರ್ಸರಿಗೆ ಹೆಚ್ಚಿನ ಚಿಕಿತ್ಸೆಗಾಗಿ ರವಾನಿಸಲಾಗಿತ್ತು. ಮೈಸೂರು ಪಶು ವೈದ್ಯಾಧಿಕಾರಿ ಮುಜೀಬ್ ನಂಜನಗೂಡಿನ ನರ್ಸರಿಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದ ಸಂದರ್ಭ ಚಿಕಿತ್ಸೆ ಫಲಕಾರಿಯಾಗಿದೇ ಶನಿವಾರ ಮೃತಪಟ್ಟಿದೆ. ಘಟನೆ ಸಂಬಂಧ ಆರೋಪಿಗಳು ತಲೆಮರೆಸಿಕೊಂಡಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

ವಿದ್ಯಾರ್ಥಿ ನಾಪತ್ತೆ



ತಿ.ನರಸೀಪುರ, ಫೆ17– ತಾಲೂಕಿನ ಚಿಕ್ಕಬೂವಹಳ್ಳಿ ಗ್ರಾಮದ ಬಾಲಕ ನಾಪತ್ತೆಯಾಗಿದ್ದಾನೆ. ತಾಲೂಕಿನ ಬೆನಕನಹಳ್ಳಿ ಗುರುಮಲ್ಲೇಶ್ವರ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿದ್ದ ಜೀವನ್(14) ಫೆ.13ರಂದು ಬೆಳಗ್ಗೆ ಶಾಲೆಗೆ ಹೋಗಿ ಬರುವುದಾಗಿ ಮನೆಯಿಂದ ಹೋದವನು ವಾಪಸ್ ಬಂದಿಲ್ಲ. ಈ ಸಂಬಂಧ ಬಾಲಕನ ತಾಯಿ ತಿ.ನರಸೀಪುರ ಠಾಣೆಗೆ ದೂರು ನೀಡಿದ್ದು, ಈತನ ಸುಳಿವು ಸಿಕ್ಕಲ್ಲಿ ನರಸೀಪುರ ಠಾಣೆ ದೂ: 08227–261227ಗೆ ಸಂಪರ್ಕಿಸಲು ಕೋರಲಾಗಿದೆ.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಯುವಕ ಸಾವು



ತಿ.ನರಸೀಪುರ, ಫೆ.17– ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಇಂಡವಾಳು ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಕರೋಹಟ್ಟಿ ಗ್ರಾಮದ ನಿವಾಸಿ ರಂಗಸ್ವಾಮಿ ಅವರ ಪುತ್ರ ಆರ್.ಪವನ್(21) ಸಾವನ್ನಪ್ಪಿದವರು. ಈತ ಮೈಸೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಇಂದು ಮುಂಜಾನೆ 5.30ರಲ್ಲಿ ತನ್ನ ಕೆಟಿಎಂ ಡ್ಯೂಕ್ 200 ಸಿಸಿ (ಕೆಎ.55, ಇಡಿ.7670) ಬೈಕ್‌ನಲ್ಲಿ ಕೆಲಸಕ್ಕೆ ಗ್ರಾಮದಿಂದ ಮೈಸೂರಿಗೆ ತೆರಳುವ ಮಾರ್ಗಮಧ್ಯೆ ಇಂಡುವಾಳು ಗ್ರಾಮದ ಬಳಿ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆಯ ತಿರುವಿನಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪವನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಪವನ್ ತಂದೆ ರಂಗಸ್ವಾಮಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನಾಲ್ವರು ಜೂಜುಕೋರರ ಬಂಧನ

ಹೆಚ್.ಡಿ.ಕೋಟೆ, ಫೆ.17– ಕಬಿನಿ ಹಿನ್ನೀರಿನಲ್ಲಿ ಜೂಜಾಡುತ್ತಿದ್ದ ನಾಲ್ವರನ್ನು ಬಂಧಿಸುವಲ್ಲಿ ಅಂತರಸಂತೆ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಗೋಳೂರು ಗ್ರಾಮದ ಬಾಬು(53), ಕೇರಳದ ಸುಲ್ತಾನ್ ಬತೇರಿಯ ವರ್ಗೀಸ್(57), ಬೆನೋವ್(47) ಹಾಗೂ ಸೋಮನ್(65) ಬಂಧಿತ ಆರೋಪಿಗಳು. ಫೆ.16ರಂದು ಮಧ್ಯಾಹ್ನ 3.30ರಲ್ಲಿ ಅಂತರಸಂತೆ ಠಾಣಾ ವ್ಯಾಪ್ತಿಯ ಮಚ್ಚೂರು ಬಳಿಯ ಕಬಿನಿ ಹಿನ್ನೀರಿನಲ್ಲಿ ಅಂದರ್ ಬಾಹರ್ ಆಡುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ್ ಹಾಗೂ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿ ಅವರಿಂದ 76,410 ರೂ., 52 ಇಸ್ಪೀಟ್ ಎಲೆಗಳು ಹಾಗೂ ಒಂದು ಪ್ಲಾಸ್ಟಿಕ್ ಚೀಲವನ್ನು ವಶಪಡಿಕೊಂಡು ಪ್ರಕರಣ ದಾಖಲಿಸಿದ್ದಾರೆ. ದಾಳಿ ವೇಳೆ ಮತ್ತಿಬ್ಬರು ನಾಪತ್ತೆಯಾಗಿದ್ದು, ಅವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಜೀಪ್ ಚಾಲಕ ರಾಮಕೃಷ್ಣ, ಗೋಪಾಲಕೃಷ್ಣ, ಸತೀಶ್, ಅಬ್ದುಲ್ ಲತೀಫ್, ಭಾಸ್ಕರ್, ಅಶೋಕ್ ಇನ್ನಿತರರಿದ್ದರು.

ಇಂದು ಅಭಿನಂದನಾ ಸಮಾರಂಭ


ಅನಿಲ್ ಚಿಕ್ಕಮಾದು


ಸುನಿಲ್‌ಬೋಸ್


ಡಾ. ಯತೀಂದ್ರ

ಮೈಸೂರು, ಫೆ.17– ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮಾನಿಗಳ ಬಳಗದಿಂದ ನಗರದ ಬೋಗಾದಿ–ಹಿನಕಲ್ ವರ್ತುಲ ರಸ್ತೆಯಲ್ಲಿರುವ ಹೋಟೆಲ್ ಬೈಪಾಸ್ ಕೋಸ್ಟಲ್ ಪರ್ಲ್‌ನಲ್ಲಿ ಫೆ.18ರಂದು ಸಂಜೆ 5 ಗಂಟೆಗೆ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ, ಶಾಸಕ ಅನಿಲ್ ಚಿಕ್ಕಮಾದು ಹಾಗೂ ಸಂಸದ ಸುನಿಲ್ ಬೋಸ್ ಅವರಿಗೆ ಅಭಿನಂದಾ ಸಮಾರಂಭಆಯೋಜಿಸಲಾಗಿದೆ

ಕಾರ್ಯಕ್ರಮದಲ್ಲಿ ಶಾಸಕರಾದ ಕೆ. ಹರೀಶ್‌ಗೌಡ, ಡಿ.ರವಿಶಂಕರ್, ದರ್ಶನ್, ಹೆಚ್.ಎಂ.ಗಣೇಶ್ ಪ್ರಸಾದ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಹಣ್ಣು ಮತ್ತು ಸಮವಸ್ತ್ರ ವಿತರಣೆ, ಕೊರೊನಾ ವಾರಿಯರ್ಸ್‌ಗಳಿಗೆ ಸನ್ಮಾನ, ಬುದ್ಧಿಮಾಂದ್ಯ, ಹಾಗೂ ಅಂಧ ಮಕ್ಕಳಿಗೆ ಪಠ್ಯ ಸಲಕರಣೆ ಮತ್ತು ಬಟ್ಟೆ ವಿತರಣೆ, ಬಡ ರೈತರಿಗೆ ಕೃಷಿ ಸಲಕರಣೆಗಳ ವಿತರಣೆ, ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರದಂತಹ ಸೇವಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಉದ್ಯಮಿ ಬೈಪಾಸ್ ಮಂಜುನಾಥ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಬಸವರಾಜು ಸಿ.ಚೆಟ್ಟಿಹುಂಡಿ, ಬೀರ್ವಾಳು ಎಂ.ಚಿಕ್ಕಣ್ಣ, ಮರಿಸ್ವಾಮಿ, ವೈಕೆ ಮಂಜುನಾಥ್ ಇತರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

3.45 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ


ಶಾಸಕ ದರ್ಶನ್ ಸಿಂಧುವಳ್ಳಿ ಗೇಟ್ ಬಳಿ ಸಮುದಾಯ ಬಡಾವಣೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

ನಂಜನಗೂಡು/ಮಲ್ಲುಂಡಿ, ಫೆ.17– ತಾಲೂಕಿನ ನಿರಾಶ್ರಿತ ಹಂದಿ ಜೋಗಿ ಸಮುದಾಯಕ್ಕೆ ಶಾಶ್ವತ ಸೂರು ಕಲ್ಪಿಸುವ ಸಲುವಾಗಿ 1 ಕೋಟಿ ವೆಚ್ಚದಲ್ಲಿ ತಾಲೂಕಿನ ಸಿಂಧುವಳ್ಳಿ ಗೇಟ್ ಬಳಿ ಬಡಾವಣೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಕರಳಪುರ, ಕೂಗಲೂರು, ಕೃಷ್ಣಾಪುರ, ಲಕ್ಷ್ಮಣಪುರ, ಕಸುವಿನಹಳ್ಳಿ, ಕುರಹಟ್ಟಿ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮತ್ತು ಸಮುದಾಯ ಭವನ ನಿರ್ಮಾಣ ಕಾಮಗಾರಿ, ಸಿಂಧುವಳ್ಳಿ ಗೇಟ್ ಬಳಿ ಹಂದಿ ಜೋಗಿ ಸಮುದಾಯಕ್ಕೆ ಬಡಾವಣೆ ನಿರ್ಮಾಣ ಕಾಮಗಾರಿ ಸೇರಿದಂತೆ 3 ಕೋಟಿ 45 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹಂದಿ ಜೋಗಿ ಸಮುದಾಯ ಶೈಕ್ಷಣಿಕ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದು, ಅವರಿಗೆ ಶಿಕ್ಷಣ ಮತ್ತು ಮೂಲ ಸೌಕರ್ಯ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ಸಂಕಲ್ಪದಿಂದ ನಗರದ ಸಮೀಪದಲ್ಲಿರುವ ಹಾಗೂ ಅತ್ಯಂತ ಬೆಲೆ ಬಾಳುವ ಜಾಗದಲ್ಲಿ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿ, ಸರ್ಕಾರದ ವತಿಯಿಂದ ಅನುದಾನವನ್ನು ನೀಡಿ ಮನೆ ನಿರ್ಮಿಸುವ ಮೂಲಕ ಶಾಶ್ವತವಾಗಿ ಸೂರು ಕಲ್ಪಿಸಲಾಗುವುದು. ಜೊತೆಗೆ ಹಂದಿ ಜೋಗಿ ಸಮುದಾಯ ಸಮಾಜದ ಮುಖ್ಯ ವಾಹಿನಿಗೆ ಬರಲು ಸಕಲ ಸೌಲಭ್ಯ ಒದಗಿಸಲಾಗುವುದು. ಈ ನಿಟ್ಟಿನಲ್ಲಿ ಇಂದು 1 ಕೋಟಿ ವೆಚ್ಚದಲ್ಲಿ ಹಂದಿ ಜೋಗಿ ಬಡಾವಣೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಶೀಘ್ರ ಬಡಾವಣೆ ನಿರ್ಮಾಣಗೊಂಡು ನಿವೇಶನ ಹಂಚಿಕೆಯಾಗಲಿದೆ ಎಂದರು.

ತಾಲೂಕಿನ ಕರಳಪುರದಲ್ಲಿ 15 ಲಕ್ಷ, ಕೂಗಲೂರು ಗ್ರಾಮದಲ್ಲಿ 15 ಲಕ್ಷ, ಕೃಷ್ಣಾಪುರದಲ್ಲಿ 10 ಲಕ್ಷ, ಲಕ್ಷ್ಮಣಪುರದಲ್ಲಿ 20 ಲಕ್ಷ, ಕಸುವಿನಹಳ್ಳಿಯಲ್ಲಿ 20 ಲಕ್ಷ, ಮಾಕನಪುರದಲ್ಲಿ 10 ಲಕ್ಷ, ಕುರಹಟ್ಟಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಸಾಮಾನ್ಯ ವರ್ಗದ ಜನರು ವಾಸಿಸುವ ಬೀದಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕುರಹಟ್ಟಿ ಗ್ರಾಮದಲ್ಲಿ ಎಸ್‌ಇಪಿ ಯೋಜನೆಯಲ್ಲಿ 1 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಲ್ಲದೇ ಕೂಗಲೂರು ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ದೇವಾಲಯ ನಿರ್ಮಾಣ, ಕಸುವಿನಹಳ್ಳಿಯಲ್ಲಿ ಬಸವ ಭವನದ ಮುಂದುವರಿದ ಕಾಮಗಾರಿಗಳಿಗೆ 20 ಲಕ್ಷ, ಶಾಸಕರ ಅನುದಾನದಿಂದ 5 ಲಕ್ಷ ಸೇರಿದಂತೆ 25 ಲಕ್ಷ ಅನುದಾನ ನೀಡಲಾಗಿದ್ದು, ಒಟ್ಟಾರೆ 3 ಕೋಟಿ 45 ಲಕ್ಷ ವೆಚ್ಚದ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದ್ದು, ಕಾಮಗಾರಿಗಳು ಶೀಘ್ರ ಮುಕ್ತಾಯಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಕಾಂಗ್ರೆಸ್ ಉಸ್ತುವಾರಿ ಸೋಮೇಶ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಮುಖಂಡರಾದ ರವಿಕುಮಾರ್, ಶಿವಮೂರ್ತಿ, ಕೆ.ಎಂ.ಶಿವಪ್ಪ, ಎನ್.ಮಲ್ಲೇಶ್, ಮಹದೇವ, ದಸಂಸ ಸಂಚಾಲಕರಾದ ನಾರಾಯಣ, ಹಂದಿ ಜೋಗಿ ಸಮುದಾಯದ ರಾಜ್ಯಾಧ್ಯಕ್ಷ ವೆಂಕಟರಮಣ, ಕೆಆರ್‌ಐ ಡಿಎಲ್ ಎಇಇ ಶೋಭಾ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗ, ನಿರ್ಮಿತಿ ಕೇಂದ್ರದ ಇಂಜಿನಿಯರ್ ಯಶವಂತ್, ಗುತ್ತಿಗೆದಾರ ಮಹದೇವು, ಮಾದಪ್ಪ ಸೇರಿದಂತೆ ಇತರರಿದ್ದರು.

"ನಮ್ಮ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ತ್ವರಿತ ಅನುಷ್ಠಾನದ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭಿವೃದ್ಧಿಗೂ ಹೆಚ್ಚು ಒತ್ತು ನೀಡಿ 150 ಕೋಟಿಗೂ ಹೆಚ್ಚು ಅನುದಾನ ನೀಡಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಬಡವರು ತಮ್ಮ ಬದುಕು ಕಟ್ಟಿಕೊಳ್ಳಲು ಆಸರೆಯಾಗಿದೆ. ಮುಂದಿನ ದಿನಗಳಲ್ಲಿ ಅತೀ ಹೆಚ್ಚು ಅನುದಾನವನ್ನು ತಂದು ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ಮೂಲಸೌಕರ್ಯ ಕಲ್ಪಿಸುವ ಮೂಲಕ ಅಭಿವೃದ್ಧಿ ಕೆಲಸಗಳು ಬಾಕಿ ಇಲ್ಲದಂತೆ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಮಾದರಿ ಕ್ಷೇತ್ರವನ್ನಾಗಿ ರೂಪಿಸಲಾಗುವುದು. – ದರ್ಶನ್, ಶಾಸಕ

ಕ್ಯಾತನಹಳ್ಳಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ


ಕ್ಯಾತನಹಳ್ಳಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ ನಡೆಯಿತು.

ಹೆಚ್.ಡಿ.ಕೋಟೆ, ಫೆ.17– ಮಡಿವಾಳ ಮಾಚಿದೇವರು 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಶ್ರೇಷ್ಠ ವಚನಕಾರರಾಗಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು ತಿಳಿಸಿದರು.

ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬಸವಣ್ಣನವರ ಅನುಭವ ಮಂಟಪದಲ್ಲಿ ಶ್ರೇಷ್ಠ ವಚನಕಾರರಾಗಿ ಅಪಾರ ಭಕ್ತಿಯಿಂದ ಶಿವನನ್ನು ಒಲಿಸಿಕೊಂಡ ಮಾಚಿದೇವ ಶರಣರು ಸಮಾಜದಲ್ಲಿದ್ದ ಅಂಕು ಡೊಂಕುಗಳನ್ನು ತಮ್ಮ ವಚನಗಳ ಮೂಲಕ ತಿದ್ದುವ ಮೂಲಕ ಶ್ರೇಷ್ಠ ಶರಣರು ಎನಿಸಿಕೊಂಡಿದ್ದಾರೆ ಎಂದರು.

ಈ ವೇಳೆ ಮಡಿವಾಳ ಸಮಾಜದ ಅಧ್ಯಕ್ಷ ಜವರಶೆಟ್ಟಿ, ಸಮಾಜದ ಮುಖಂಡ ಎಸ್.ಬೀರೇಶ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆ.ಪಿ.ಚೆಲುವರಾಜು, ಮುಖಂಡರಾದ ಎಸ್.ಬೀರೇಗೌಡ, ಎನ್.ವೆಂಕಟರಾಜು, ಎಸ್.ಶಿವರಾಜು, ಮಾರಿಗುಡಿ ಗುಡ್ಡಪ್ಪ, ಚಿಕ್ಕನಾಯಕ, ಶಿವಶಂಕರಗೌಡ, ಗ್ರಾಪಂ ಉಪಾಧ್ಯಕ್ಷ ಪ್ರಸನ್ನ ಕುಮಾರ್, ಮಾಜಿ ಅಧ್ಯಕ್ಷ ಕೆ.ಆರ್. ಬಸವರಾಜ್, ಮಾಜಿ ಸದಸ್ಯ ಕೆ.ಟಿ. ಕಮಲಾಕ್ಷ, ಕೃಷ್ಣೇಗೌಡ, ರವಿಕುಮಾರ್, ರಾಮಚಂದ್ರ, ಚೇರ್ಮನ್ ಮಹದೇವ, ಕುಮಾರ, ಗುತ್ತಿಗೆದಾರ ಕೃಷ್ಣ, ಆಟೋ ರವಿ, ಚೆಲುವರಾಜು, ಗೋವಿಂದೇಗೌಡ, ಮಹದೇವಶೆಟ್ಟಿ, ದೇವರಾಜಶೆಟ್ಟಿ, ಚಿಕ್ಕಸ್ವಾಮಿ, ಬಸವರಾಜಶೆಟ್ಟಿ, ಮಹದೇವ, ಕೆಂಡ, ಶ್ರೀಕಂಠ, ಶಿವಣ್ಣ, ಹೊನ್ನಯ್ಯ, ಕುಮಾರ್ ಭಾಗಮ್ಮ, ಜೈರಾಮ ಇನ್ನಿತರರಿದ್ದರು.

ಮೂಗೂರು ಪಿಎಸಿಎಸ್‌ಗೆ 12 ನಿರ್ದೇಶಕರ ಆಯ್ಕೆ

ಮೂಗೂರು, ಫೆ.17– ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



5 ವರ್ಷದ ಆಡಳಿತ ಮಂಡಳಿಗೆ ಸಾಲಗಾರರ ಕ್ಷೇತ್ರದಿಂದ 11, ಸಾಲಗಾರರಲ್ಲದ ಕ್ಷೇತ್ರದಿಂದ ಒಬ್ಬರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಮಹೇಂದ್ರ ಕುಮಾರ್ (ಭಾನು), ಗೌಡರ ಜಗದೀಶ್ ಮೂರ್ತಿ, ನಿಜಗುಣ, ರಮೇಶ್ ನಾಯ್ಕ, ಶರತ್ ಕುಮಾರ್, ಶಿವಸ್ವಾಮಿ, ಕಮಲಮ್ಮ, ರಾಧ, ಪರಶಿವಮೂರ್ತಿ, ತವಸಾರಯ್ಯ, ಶಿವಮೂರ್ತಿ, ಸತೀಶ್ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಹೆಚ್.ಎನ್.ಸುಮ ಕಾರ್ಯ ನಿರ್ವಹಿಸಿದರು.

ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಮೂಗೂರು, ಹೊಸಹಳ್ಳಿ ಹಾಗೂ ಹೊಸಹಳ್ಳಿ ಮೋಳೆ, ಗ್ರಾಮದ ಜನತೆ ಯಾವುದೇ ರೀತಿಯ ಪೈಪೋಟಿಗೆ ಅವಕಾಶ ನೀಡದ ಪರಿಣಾಮ ಆಯ್ಕೆ ಪ್ರಕ್ರಿಯೆ ಇತರೆ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ. ಈ ಸಂದರ್ಭ ಮೂಗೂರು ಪಿಎಸಿಎಸ್ ಸಿಇಓ ಎಂ.ನಂದೀಶ್, ಕಚೇರಿ ಸಹಾಯಕ ಅಬಿನಂಧನ್ ಹಾಜರಿದ್ದರು.

ಸರಗೂರು: ವಿಜೃಂಭಣೆಯ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ


ಶ್ರೀಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಫೆ.17– ತಾಲೂಕಿನ ಕೆ.ಬೆಳ್ತೂರು ಗ್ರಾಮದಲ್ಲಿ ಶ್ರೀಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯಿಂದಲೇ ದೇವರಿಗೆ ಹೋಮ–ಹವನ, ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿತು. ಬಳಿಕ ಉತ್ಸವ ಮೂರ್ತಿಯನ್ನು ವಿವಿಧ ಬಗೆಯ ಹೂವಿನಿಂದ ಅಲಂಕಾರಗೊಳಿಸಿ ಪೂಜೆ ಸಲ್ಲಿಸಲಾಯಿತು. ನಂತರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ದೇವರಿಗೆ ಜೈಕಾರ ಕೂಗಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ ಹಣ್ಣು ಜವನ ಎಸೆದು ಸಂಭ್ರಮಿಸಿದರು.

ಭಕ್ತರಿಗೆ ಪಾನಕ, ಕೋಸಂಬರಿ ಮಜ್ಜಿಗೆ ವಿತರಿಸಲಾಯಿತು. ಭಕ್ತರು ದೇವರ ದರ್ಶನ ಪಡೆದು ಪುಳಕಿತರಾದರು. ದೇವಸ್ಥಾನದ ಪ್ರಧಾನ ಅರ್ಚಕರು ಪೂಜಾ ಕಾರ್ಯಕ್ರಮ ನೆರವೇರಿಸಿದರು. ಸರಗೂರು ಠಾಣೆ ಎಸ್‌ಐ ಆರ್.ಕಿರಣ್, ಗೋಪಾಲ್, ಮುಖ್ಯಪೇದೆಗಳಾದ ಚಂದ್ರು, ನಟ ರಾಜು, ಪೊಲೀಸ್ ಸಿಬ್ಬಂದಿಗಳಾದ ನಂದೀಶ್, ಇಮ್ರಾನ್ ಅಹಮದ್, ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.


ಕೆ.ಬೆಳ್ತೂರು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಯಜಮಾನರು, ಮುಖಂಡರು ಹಾಗೂ ಚಾಮರಾಜನಗರ, ಮಂಡ್ಯ, ಮೈಸೂರು ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಭಕ್ತರು ಆಗಮಿಸಿದ್ದರು.

ಸನ್ಮಾನ



ತಿ.ನರಸೀಪುರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಪರಮೇಶ್ ಪಟೇಲ್ ಹಲವಾರ ಅವರು ಖೋ ಖೋ ವಿಶ್ವಕಪ್ ವಿಜೇತೆ ಕುರುಬೂರು ಗ್ರಾಮದ ಚೈತ್ರಾ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಈ ವೇಳೆ ಶಿಕ್ಷಕಿ ಜ್ಯೋತಿ ಪರಮೇಶ್ ಇದ್ದರು.

ರಾಮೇಶ್ವರ, ಬಸವೇಶ್ವರ ದೇವಾಲಯ ಉದ್ಘಾಟನೆ


ಕಾರ್ಯಕ್ರಮದಲ್ಲಿ ಹಲವರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಫೆ.17– ಪಿರಿಯಾಪಟ್ಟಣ ತಾಲೂಕಿನ ಕೋಗಿಲವಾಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ರಾಮೇಶ್ವರ ಮತ್ತು ಬಸವೇಶ್ವರ ದೇವಾಲಯವನ್ನು ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ಶ್ರೀಶಿವಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಮನಸ್ಸಿಗೆ ನೆಮ್ಮದಿ, ಶಾಂತಿ ನೀಡುವ ಏಕೈಕ ತಾಣ ದೇವಾಲಯ. ಗ್ರಾಮದಲ್ಲಿ ದೇವಾಲಯ ನಿರ್ಮಿಸಿದರೇ ಆಸ್ಪತ್ರೆ ನಿರ್ಮಿಸಿದಂತೆ. ಆಸ್ಪತ್ರೆಗಳಿಗೆ ಹೋಗಿ ಎಲ್ಲಾ ಕಾಯಿಲೆಗಳಿಗೆ ನಾವು ಚಿಕಿತ್ಸೆ ಪಡೆಯುತ್ತೇವೆ. ಅದರಂತೆ ಮನಸ್ಸಿಗೆ ನೆಮ್ಮದಿ, ಶಾಂತಿ ನೀಡುವ ದೇವಾಲಯಗಳು ಇರಬೇಕು ಎಂದರು.

ಈ ವೇಳೆ ಶ್ರೀಶಿವಸುಜ್ಞಾನ ಸ್ವಾಮೀಜಿ, ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹಾಸನದ ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ, ದಿಂಡಗಾಡು ಮಠದ ಅಪ್ಪಾಜಿ ಸ್ವಾಮೀಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೆ ಮಹದೇವ್, ದೇವಸ್ಥಾನ ಸಮಿತಿ ಅಧ್ಯಕ್ಷ ಲಕ್ಷ್ಮಣ್ ಪಟೇಲ್, ಉಪಾಧ್ಯಕ್ಷ ಮಹದೇವಪ್ಪ, ಪ್ರಧಾನ ಕಾರ್ಯದರ್ಶಿ ಶಿವಪ್ಪ, ಖಜಾಂಚಿ ಗಿರೀಶ್, ಜಂಟಿ ಕಾರ್ಯದರ್ಶಿ ಮಹೇಶ್, ಸಂಘಟನಾ ಕಾರ್ಯದರ್ಶಿ ಶಂಕ್ರಪ್ಪ, ಸಂಚಾಲಕರಾದ ಶಂಕರ್ ಗುರು, ಮೇಲ್ವಿಚಾರಕರಾದ ಶಿವಪ್ಪ, ನಿರ್ದೇಶಕರಾದ ವಿಠಲ್, ಗ್ರಾಮದ ಯಜಮಾನ ವೀರಪ್ಪ, ಮುಖ್ಯ ಅತಿಥಿಗಳಾದ ಕೂರ್ಗಲ್ ಶಿವಕುಮಾರಸ್ವಾಮಿ ಇನ್ನಿತರರಿದ್ದರು. ಈ ವೇಳೆ ಹಲವರನ್ನು ಸನ್ಮಾನಿಸಲಾಯಿತು. ಭಕ್ತರಿಗೆ ಅನ್ನದಾನ ಹಮ್ಮಿಕೊಳ್ಳಲಾಗಿತ್ತು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮ ಪಡಿಸಲು

ಪ್ರೇರಣಾ ಕಾರ್ಯಕ್ರಮ ಆಯೋಜನೆ: ಬಿಇಓ ಮಹದೇವ್


ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಒಂದು ದಿನದ ಪ್ರೇರಣಾ ಕಾರ್ಯಕ್ರಮ ನಡೆಯಿತು.

ಹುಣಸೂರು ಫೆ.17– ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮ ಪಡಿಸಲು ಪ್ರತಿ ಹೋಬಳಿ ಕೇಂದ್ರದಲ್ಲಿ ಪ್ರೇರಣಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್ ತಿಳಿಸಿದರು.

ತಾಲೂಕಿನ ಹನಗೋಡಿನಲ್ಲಿ ಹೋಬಳಿ ವ್ಯಾಪ್ತಿಯ 6 ಪ್ರೌಢಶಾಲೆಗಳ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಒಂದು ದಿನದ ಪ್ರೇರಣಾ ಕಾರ್ಯಕ್ರಮ ಉದ್ಘಾಟಿಸಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ತಾಲೂಕಿನಲ್ಲಿ ಈಗಾಗಲೇ ವಿಷಯವಾರು ಶಿಕ್ಷಕರ ಕಾರ್ಯಾಗಾರಗಳನ್ನು ನಡೆಸಲಾಗಿದೆ. ಸಂಪನ್ಮೂಲ ತಂಡಗಳನ್ನು ರಚಿಸಿಕೊಂಡು ಪ್ರೌಢಶಾಲೆಗಳಿಗೆ ಭೇಟಿ ನೀಡಲಾಗುತ್ತಿದೆ. ವಾಟ್ಸಪ್ ಗುಂಪುಗಳ ರಚನೆ, ರಸಪ್ರಶ್ನೆ ಕಾರ್ಯಕ್ರಮಗಳ ಆಯೋಜನೆ, ವಾರಕ್ಕೊಂದು ವಿಜ್ಞಾನ ಪ್ರಯೋಗ, ಚಿತ್ರಕಲಾ ಸ್ಪರ್ಧೆ, ವಿದ್ಯಾರ್ಥಿಗಳಿಗೆ ಪರೀಕ್ಷಾ ಕೈಪಿಡಿ ವಿತರಣೆ, ಡಿಸೆಂಬರ್ ಮಾಹೆಯಿಂದ ಸತತವಾಗಿ ವಿದ್ಯಾರ್ಥಿಗಳಿಗೆ ಅಭ್ಯಾಸ ಪರೀಕ್ಷೆ ನಡೆಸಲಾಗುತ್ತಿದೆ. ಅಲ್ಲದೆ ವಿದ್ಯಾರ್ಥಿಗಳ ಪರೀಕ್ಷಾ ಭಯ ಹೋಗಲಾಡಿಸಿ ಮನೋಸ್ಥೈರ್ಯ ವೃದ್ಧಿಸಲು ಮನಶಾಸ್ತ್ರಜ್ಞರಿಂದ ಮಕ್ಕಳಿಗೆ ಕಾರ್ಯಾಗಾರ ಏರ್ಪಡಿಸುವಂತೆ ಮತ್ತು ತಾಯಂದಿರ ಸಭೆ ಮಾಡಿ ಮಕ್ಕಳ ಸಮ್ಮುಖದಲ್ಲಿ ಕಲಿಕಾ ಪ್ರಗತಿ ಬಗ್ಗೆ ಚರ್ಚಿಸುವಂತೆ ಪ್ರೌಢಶಾಲಾ ಮುಖ್ಯೋಪಾಧ್ಯಾಯರಿಗೆ ಸೂಚನೆ ನೀಡಲಾಗಿದೆ. ಪ್ರತಿ ವಿದ್ಯಾರ್ಥಿಗಳ ಕೃತಿ ಸಂಪುಟ ನಿರ್ವಹಿಸಿಕೊಂಡು ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಫಲಿತಾಂಶದಲ್ಲಿ ಪ್ರಥಮ ಸ್ಥಾನ ಪಡೆಯಲು 20 ಅಂಶಗಳ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಹಾಯವಾಣಿ ಆರಂಭಿಸಲಾಗಿದ್ದು, ಮಕ್ಕಳು, ಪೋಷಕರು ಹಾಗೂ ದೂರವಾಣಿ ಕರೆ ಮಾಡಿದವರಿಗೆ ಸಂಪನ್ಮೂಲ ಶಿಕ್ಷಕರು ಮಾಹಿತಿ ನೀಡಿ ಮಕ್ಕಳ ಕಲಿಕಾ ಸಮಸ್ಯೆಗಳನ್ನು ನಿವಾರಿಸಲಾಗುತ್ತಿದೆ. ಪ್ರಸಕ್ತ ವರ್ಷ 4,189 ಮಕ್ಕಳು ಪರೀಕ್ಷೆ ಬರೆಯುತ್ತಿದ್ದು, ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ನಮಗೆ 531 ಮಕ್ಕಳು ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಲಭಿಸಿದ್ದು, ಇವರಿಗೆ ವಿಶೇಷ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಾಯದೊಂದಿಗೆ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ವಾಸ್ತವ್ಯ ಏರ್ಪಡಿಸಿ ವಿಶೇಷ ತರಗತಿಗಳನ್ನು ನಡೆಸಿಕೊಡಲಾಗುತ್ತಿದೆ ಎಂದು ತಿಳಿದರು.

ಕಾರ್ಯಕ್ರಮದಲ್ಲಿ ಹನಗೋಡು ಶಾಲೆ ಉಪಪ್ರಾಂಶುಪಾಲ ಕೆ.ಸಂತೋಷ್ ಕುಮಾರ್ ಮಾತನಾಡಿದರು. ಶಿಕ್ಷಣ ಸಂಯೋಜಕ ಹೇಮಂತ್ ಕುಮಾರ್, ಸಂಪನ್ಮೂಲ ವ್ಯಕ್ತಿ ಶಶಿಕುಮಾರ್, ವಿಕ್ರಂ, ನವೀನ್, ಮಂಜುನಾಥ್, ಛಾಯಾಮಣಿ ಹಾಜರಿದ್ದು, ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ಪ್ರೇರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಹೋಬಳಿ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ತಗಡೂರು ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ


ತಗಡೂರು ಪಿಎಸಿಎಸ್‌ಗೆ 12 ನಿರ್ದೇಶಕರು ಆಯ್ಕೆಯಾದರು.

ನಂಜನಗೂಡು, ಫೆ.17– ತಾಲೂಕಿನ ತಗಡೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಟಿ.ಎನ್.ಗುರುಮಲ್ಲೇಶ್ ಬೆಂಬಲಿತ 12 ನಿರ್ದೇಶಕರು ಗೆಲುವು ಸಾಧಿಸಿದ್ದಾರೆ.

ಒಟ್ಟು 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ 17 ಅಭ್ಯರ್ಥಿಗಳು, ಸಾಲಗಾರರಲ್ಲದ ಕ್ಷೇತ್ರದಿಂದ ಇಬ್ಬರು ಸೇರಿದಂತೆ ಒಟ್ಟು 19 ಅಭ್ಯರ್ಥಿಗಳು ಕಣದಲ್ಲಿದ್ದರು. ಸಾಮಾನ್ಯ ಕ್ಷೇತ್ರದಿಂದ ಟಿ.ಎನ್.ಗುರುಮಲ್ಲೇಶ್, ಗುರು ಸಿದ್ದೇಗೌಡ, ಜಯಪ್ರಕಾಶ್, ಟಿ.ಎಂ.ನಟೇಶ್, ಕೆ.ಪಿ. ಸುಬ್ಬಪ್ಪ, ಪ.ಜಾತಿ ಮೀಸಲು ಕ್ಷೇತ್ರದಿಂದ ದೇವರಾಜು, ಹಿಂದುಳಿದ ವರ್ಗ 'ಎ' ನಿಂದ ರಂಗಶೆಟ್ಟಿ, ಹಿಂದುಳಿದ 'ಬಿ' ವರ್ಗದ ಬಸವಣ್ಣ, ಮಹಿಳಾ ಮೀಸಲು ಕ್ಷೇತ್ರದಿಂದ ನಾಗಮ್ಮ, ಪ.ಪಂಗಡದಿಂದ ಟಿ.ಆರ್.ಶ್ರೀನಿವಾಸ್ ನಾಯಕ ಸಾಲಗಾರ ರಲ್ಲದ ಕ್ಷೇತ್ರದಿಂದ ಮಹದೇವಸ್ವಾಮಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಕೆ.ಸಿ.ರಘು ಕಾರ್ಯ ನಿರ್ವಹಿಸಿದರು.

ಟಿ.ಎನ್.ಗುರುಮಲ್ಲೇಶ್ ಮಾತನಾಡಿ, ಈ ಹಿಂದಿನ ಅವಧಿಯಲ್ಲಿ ನಿರ್ವಹಿಸಿದ ಉತ್ತಮ ಕೆಲಸ ನೋಡಿ ಸದಸ್ಯರು ಮತ್ತೆ ನನ್ನ ತಂಡವನ್ನು ಆಯ್ಕೆ ಮಾಡಿರುವುದಕ್ಕೆ ತಗಡೂರು, ಕೊಂತಯ್ಯನಹುಂಡಿ ಮತ್ತು ಗೋಣಹಳ್ಳಿ ಗ್ರಾಮದ ರೈತ ಸದಸ್ಯರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಸಂಘದ ಕಾರ್ಯದರ್ಶಿ ಮಹದೇವಪ್ಪ, ಟಿ.ಆರ್.ಸುಭಿಕ್ಷ, ಕಾಂಗ್ರೆಸ್ ಮುಖಂಡರಾದ ಮಹೇಶ್, ಶಿವರಾಂ, ಗುರು, ದೇವಣ್ಣ, ರಂಗಸ್ವಾಮಿ, ನಾಗೇಶ್ ನಾಯಕ್, ಜಯಪ್ರಕಾಶ್, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ

ನೂತನ ಅಧ್ಯಕ್ಷರಾಗಿ ಎಸ್.ಚಂದ್ರಶೇಖರ್ ಆಯ್ಕೆ

ಮೈಸೂರು, ಫೆ.17– ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಮೈಸೂರಿನ ಹಿರಿಯ ಸಹಕಾರಿ ಧುರೀಣ ಎಸ್.ಚಂದ್ರಶೇಖರ್ ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿಗೆ ಜ.28ರಂದು ಚುನಾವಣೆ ನಡೆದಿತ್ತು. ಫೆ.13ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಎಸ್.ಚಂದ್ರಶೇಖರ್ ಅಧ್ಯಕ್ಷರಾಗಿ ಹಾಗೂ ಧರೆಪ್ಪ ಮಹದೇವ ಆಲಗೂರ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಸಿಇಓ ಕೆಎನ್.ಪ್ರಜ್ವಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಎಸ್.ಚಂದ್ರಶೇಖರ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದಲ್ಲಿ ನಡೆದಿರುವ 19 ಕೋಟಿ ರೂ. ಹಗರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ. ಈ ಮೂಲಕ ದುರುಪಯೋಗಪಡಿಸಿಕೊಂಡಿರುವ ಹಣವನ್ನು ವಸೂಲಿ ಮಾಡಿ ಮಹಾಮಂಡಳದ ಬೊಕ್ಕಸಕ್ಕೆ ಸೇರಿಸುತ್ತೇವೆ. ಇದನ್ನು ಲಾಭದಾಯಕ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸಿ, ಹೊಸ ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಅಧ್ಯಕ್ಷ ಮೈಸೂರಿನ ಹಿರಿಯ ಸಹಕಾರಿ ಧುರೀಣ ಎಸ್.ಚಂದ್ರಶೇಖರ್ ಅವರನ್ನು ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು.

ಉತ್ತಮ ಸಹಕಾರಿ: ಎಸ್.ಚಂದ್ರಶೇಖರ್ ಅವರು ಜನತಾ ಬಜಾರ್ ಚಂದ್ರು ಎಂದೇ ಪರಿಚಿತರು. ಎರಡು ದಶಕಗಳಿಂದ ಸಹಕಾರ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಇವರು, 2009ರಿಂದ 2019ರವರೆಗೆ ಜನತಾ ಬಜಾರ್ ಅಧ್ಯಕ್ಷರಾಗಿ, 2013ರಿಂದ 2018ರವರೆಗೆ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಉಪಾಧ್ಯಕ್ಷ, ನಂತರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. 2014–16ರವರೆಗೆ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಲದ ಅಧ್ಯಕ್ಷರಾಗಿ, 2014ರಿಂದ 19ರವರೆಗೆ ಕರ್ನಾಟಕ ರಾಜ್ಯ ಗ್ರಾಹಕರ ಮಹಾಮಂಡಲದ ನಿರ್ದೇಶಕರಾಗಿ, ಇದೇ ಅವಧಿಯಲ್ಲಿ ಪತ್ತಿನ ಸಹಕಾರ ಮಹಾಮಂಡಲದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಹಾಲಿ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ ಆಪರೇಟಿವ್ ಸ್ಥಾಪಕ ಅಧ್ಯಕ್ಷರಾಗಿದ್ದಾರೆ.

ಮಾದರಿ ನಿರ್ಧಾರ: 2010ರಲ್ಲಿ ಅಕ್ಕಿ ಸೇರಿದಂತೆ ಧವಸ–ಧಾನ್ಯಗಳ ಬೆಲೆ ಏರಿಕೆಯಿಂದ ಸಾರ್ವಜನಿಕರು ತತ್ತರಿಸಿದ್ದ ಸಂದರ್ಭದಲ್ಲಿ ಜನತಾ ಬಜಾರ್ ಅಧ್ಯಕ್ಷರಾಗಿದ್ದ ಎಸ್.ಚಂದ್ರಶೇಖರ್ ನೇತೃತ್ವದಲ್ಲಿ ದಿಟ್ಟ ಹಾಗೂ ಮಾದರಿ ನಿರ್ಧಾರ ಕೈಗೊಳ್ಳಲಾಗಿತ್ತು. ಅಕ್ಕಿ ಇನ್ನಿತರ ದಿನಬಳಕೆ ಧವಸ–ಧಾನ್ಯಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಮೂಲಕ ಮುಕ್ತ ಮಾರುಕಟ್ಟೆಗೆ ಬಿಸಿ ಮುಟ್ಟಿಸಲಾಗಿತ್ತು. ಅಕ್ಕಿ ದರ ವಿಪರೀತ ಏರಿಕೆಯಾದಾಗ ಐದು ದಿನಗಳ ಕಾಲ ಅಕ್ಕಿ ಮೇಳದ ಮೂಲಕ ಭಾರಿ ರಿಯಾಯ್ತಿಯಲ್ಲಿ ಅಕ್ಕಿ ಮಾರಾಟ ಮಾಡಲಾಗಿತ್ತು. ಇದರಿಂದ ವರ್ತಕರು ಸ್ವಯಂ ಅಕ್ಕಿ ದರ ಇಳಿಕೆ ಮಾಡಿ, ಸಹಕರಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ತಂಡೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಿದ್ಲಿಂಗು–2 (ಕ)	4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ಛಾವಾ (ಹಿ)	4 ಪ್ರದರ್ಶನಗಳು
ಲಿಡೋ	
ಭುವನಂ ಗಗನಂ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ಡಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಶ್ರೀ ಕೃಷ್ಣದೇವರಾಯರ ಜಯಂತಿ



ಮೈಸೂರಿನ ವಿಜಯನಗರದಲ್ಲಿರುವ ಶ್ರೀಕೃಷ್ಣದೇವರಾಯರ ವೃತ್ತದಲ್ಲಿ ಶ್ರೀ ಕೈವಾರ ತಾತಯ್ಯ ಬಲಿಜ ನಾಯ್ಡು ಒಕ್ಕೂಟದಿಂದ ಶ್ರೀ ಕೃಷ್ಣದೇವರಾಯರ 554ನೇ ಜಯಂತಿ ಆಚರಿಸಲಾಯಿತು.

ಮೈಸೂರು, ಫೆ.17(ಜಿಎ)– ಮೈಸೂರಿನ ವಿಜಯನಗರದಲ್ಲಿರುವ ಶ್ರೀಕೃಷ್ಣದೇವರಾಯರ ವೃತ್ತದಲ್ಲಿ ಶ್ರೀ ಕೈವಾರ ತಾತಯ್ಯ ಬಲಿಜ ನಾಯ್ಡು ಒಕ್ಕೂಟದಿಂದ ಶ್ರೀ ಕೃಷ್ಣದೇವರಾಯರ 554ನೇ ಜಯಂತಿ ಆಚರಿಸಲಾಯಿತು.


ಈ ವೇಳೆ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಾಕೇಶ್ ನಾಯ್ಡು ಮಾತನಾಡಿ, ಹಕ್ಕಬುಕ್ಕರು ಸ್ಥಾಪನೆ ಮಾಡಿರುವ ವಿಜಯನಗರ ಸಾಮ್ರಾಜ್ಯವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಶ್ರೀ ಕೃಷ್ಣದೇವರಾಯರಿಗೆ ಸಲ್ಲುತ್ತದೆ. ಅವರು ಸಮಾಜ ಸುಧಾರಣೆಗೆ ನೀಡಿದ ಸಂದೇಶವನ್ನು ಎಲ್ಲರೂ ಪಾಲಿಸಬೇಕು ಎಂದು ಕರೆ ನೀಡಿದರು.

ವಿಜಯನಗರ ಸಾಮ್ರಾಜ್ಯ ಕಾಲದ ಹಂಪಿ ವಿಶ್ವಮಟ್ಟಕ್ಕೆ ಬೆಳೆಯಲು ಹಲವು ರಾಜರು ಶ್ರಮಿಸಿದ್ದು, ಅವರಲ್ಲಿ ಕೃಷ್ಣದೇವರಾಯರ ಸಾಧನೆ ಅಪಾರ. ಹಂಪಿಯಲ್ಲಿ ಬಂಗಾರ, ಮುತ್ತು ರತ್ನ, ವಜ್ರಗಳ ಮಾರಾಟದ ಮಾರುಕಟ್ಟೆ ನಡೆಸಿ ವಿಜಯನಗರವನ್ನು ಶ್ರೀಮಂತ ಸಾಮ್ರಾಜ್ಯವಾಗಿ ಮಾಡಿದ್ದ ಕೀರ್ತಿ ಶ್ರೀ ಕೃಷ್ಣದೇವರಾಯರಿಗೆ ಸಲ್ಲುತ್ತದೆ. ಶ್ರೀ ಕೃಷ್ಣದೇವರಾಯರು ದೇವಾಲಯ, ಮಂಟಪಗಳು ನಿರ್ಮಾಣ ಮಾಡುವ ಮೂಲಕ ವಾಸ್ತುಶಿಲ್ಪಕ್ಕೆ ಆದ್ಯತೆ ನೀಡುವುದರ ಜೊತೆಗೆ ಕೆರೆ, ಕಾಲುವೆಗಳನ್ನು ನಿರ್ಮಿಸಿ ಜನರ ಬದುಕಿಗೆ ಕಾರಣಕರ್ತರಾಗಿದ್ದರು ಎಂದು ಸ್ಮರಿಸಿದರು.

ಸರ್ಕಾರದಿಂದ ಶ್ರೀ ಕೃಷ್ಣದೇವರಾಯರ ಜಯಂತಿಯನ್ನು ಆಚರಣೆ ಮಾಡಬೇಕು. ರಾಜ್ಯದ ಎಲ್ಲಾ ಸರ್ಕಾರಿ ಕಚೇರಿ, ತಾಲ್ಲೂಕು ಆಡಳಿತದಿಂದ ಜಯಂತಿಯನ್ನು ಆಚರಣೆ ಮಾಡುವ ಕುರಿತು ಸರ್ಕಾರ ಘೋಷಣೆ ಮಾಡಬೇಕೆಂದು ಮನವಿ ಮಾಡಿದರು.

ಈ ವೇಳೆ ಒಕ್ಕೂಟದ ಸದಸ್ಯರಾದ ಹರೀಶ್, ಮಂಜುನಾಥ್, ರಾಘವೇಂದ್ರ, ಭಾನುಪ್ರಕಾಶ್, ಕಾಮರಾಜ್, ಪ್ರಕಾಶ್, ಗಜೇಂದ್ರ ನಾಯ್ಡು, ದೇವೇಂದ್ರ ನಾಯ್ಡು, ಚಿನ್ನಸ್ವಾಮಿ, ವಿಜಯ ಕುಮಾರ, ಯೋಗೀಶ್ ಭರತ್ ಕುಮಾರ್, ಸಂತೋಷ ರವಿಕುಮಾರ್, ರೋಹಿತ್ ನಾಯ್ಡು, ಹರ್ಷ ಮತ್ತು ಸಂಘದ ಸದಸ್ಯರು ಉಪಸ್ಥಿತರಿದ್ದರು.

ವಾರಾಂತ್ಯದಲ್ಲಿ ವಸ್ತುಪ್ರದರ್ಶನ ಮೈದಾನದಲ್ಲಿ ಪೊಲೀಸ್ ಬ್ಯಾಂಡ್ ಕಾರ್ಯಕ್ರಮಕ್ಕೆ ಚಿಂತನೆ



ಮೈಸೂರು, ಫೆ.17(ಜಿಎ)–ಮೈಸೂರಿನ ಜನತೆ ಹಾಗೂ ಸಾರ್ವಜನಿಕರಿಗೆ ವಾರಾಂತ್ಯದಲ್ಲಿ ಮನರಂಜನೆ ನೀಡಲು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಚಿಂತಿಸಿದ್ದು, ಪ್ರತಿ ಭಾನುವಾರ ಕರ್ನಾಟಕ ಪೊಲೀಸ್ ಬ್ಯಾಂಡ್ ಜೊತೆ ಕಲಾವಿದರಿಗೆ ಅವಕಾಶ ನೀಡಲು ವಿಶೇಷ ಕಾರ್ಯಕ್ರಮ ರೂಪಿಸುತ್ತಿದೆ.

> ಪೊಲೀಸ್ ಬ್ಯಾಂಡ್ ಪ್ರದರ್ಶನ ಕುರಿತು ಪೊಲೀಸ್ ಆಯುಕ್ತರೊಟ್ಟಿಗೆ ಚರ್ಚಿಸಲಾಗುತ್ತದೆ. ಈ ರೀತಿ ಕಾರ್ಯಕ್ರಮದಿಂದ ಪ್ರವಾಸಿಗರು ಮತ್ತೊಂದು ದಿನ ಮೈಸೂರಿನಲ್ಲಿ ನೆಲೆಸುತ್ತಾರೆ. ಇದರಿಂದ ಪ್ರವಾಸೋದ್ಯಮಕ್ಕೂ ಒಳಿತಾಗಲಿದೆ.
> -ಅಯೂಬ್ ಖಾನ್, ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ವಾರಾಂತ್ಯಕ್ಕೆ ಮೈಸೂರಿಗೆ ಪಕ್ಕದ ಜಿಲ್ಲೆ, ರಾಜ್ಯ ಹಾಗೂ ವಿದೇಶದಿಂದ ಪ್ರವಾಸಿಗರು ಸಾಗರೋಪಾದಿಯಲ್ಲಿ ಇಲ್ಲಿನ ಪ್ರವಾಸಿ ತಾಣಗಳನ್ನು ನೋಡಲು ಆಗಮಿಸುತ್ತಾರೆ. ಅವರಿಗೆ ಸಂಜೆ ಮನರಂಜನೆ ನೀಡುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ, ಸ್ಥಳೀಯ ವ್ಯಾಪಾರಿಗಳಿಗೂ ನೆರವಾಗಲು ಪ್ರಾಧಿಕಾರ ಮುಂದಾಗಿದೆ.

ಮೈಸೂರಿಗೆ ಬರುವ ಪ್ರವಾಸಿಗರು ಬೆಳಗ್ಗೆಯಿಂದ ಚಾಮುಂಡಿಬೆಟ್ಟ, ಕಾರಂಜಿ ಕೆರೆ, ನಂಜನಗೂಡು, ಅರಮನೆ ಸೇರಿದಂತೆ ಎಲ್ಲಾ ಸ್ಥಳಗಳನ್ನು ಸಂಜೆಯೊಳಗೆ ಮುಗಿಸಿಕೊಂಡು ನಂತರ ಕೆಆರ್‌ಎಸ್ ಕಡೆಗೆ ಮುಖ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಸಂಜೆ ನಂತರ ಪ್ರವಾಸಿಗರ ಗಮನ ಸೆಳೆಯಲು ವಾರಾಂತ್ಯದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ನಿರ್ಧರಿಸಿದ್ದಾರೆ.

ಕರ್ನಾಟಕದಲ್ಲಿ ಮೈಸೂರು ಪೊಲೀಸ್ ಬ್ಯಾಂಡ್‌ಗೆ ವಿಶೇಷ ಸ್ಥಾನಮಾನ, ಗೌರವವಿದ್ದು, ದಸರಾ ಸಂದರ್ಭದಲ್ಲಿ ಅದನ್ನು ವೀಕ್ಷಿಸಲು ಲಕ್ಷಾಂತರ ಮಂದಿ ಅರಮನೆ ಮುಂದೆ ನೆರೆದಿರುತ್ತಾರೆ. ಇಷ್ಟು ಮನ್ನಣೆ ಗಳಿಸಿರುವ ಪೊಲೀಸ್ ಬ್ಯಾಂಡ್‌ಗೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಸ್ತುಪ್ರದರ್ಶನದ ಅಧ್ಯಕ್ಷ ಅಯೂಬ್ ಖಾನ್ ಈ ತಂಡವನ್ನು ಬಳಸಿಕೊಂಡು ಮೈಸೂರಿನ ಪ್ರವಾಸೋದ್ಯಮಕ್ಕೆ ಹೊಸ ರೂಪ ನೀಡಲು ಚಿಂತಿಸಿ, ತಿಂಗಳ ಪ್ರತಿ ಭಾನುವಾರದಂದು ವಸ್ತುಪ್ರದರ್ಶನ ಮೈದಾನದ ದ್ವಾರದ ಮುಂಭಾಗ ಬೃಹತ್ ವೇದಿಕೆ ನಿರ್ಮಿಸಿ, ಅಲ್ಲಿ ಪೊಲೀಸ್ ಬ್ಯಾಂಡ್ ಪ್ರದರ್ಶನ ಆಯೋಜಿಸಿ, ನಂತರ ಪ್ರಖ್ಯಾತ ಕಲಾವಿದರಿಂದ ವಿಶೇಷ ಕಾರ್ಯಕ್ರಮಗಳನ್ನು ನಡೆಸಲು ಆಲೋಚಿಸಿದ್ದಾರೆ.

ಸ್ಮಾರಕಗಳ ಸಂರಕ್ಷಣೆಗೆ ಪುರಾತತ್ವ ವಿಚಾರಗಳ ಆಸಕ್ತಿ ಅಗತ್ಯ

ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿವೃತ್ತ ವ್ಯವಸ್ಥಾಪಕ ಪದ್ಮಶ್ರೀ ಎಸ್.ಸುಬ್ಬರಾಮನ್ ಅಭಿಮತ

ಮೈಸೂರು, ಫೆ.17(ಜಿಎ)–ಬೆಲೆ ಬಾಳುವ ಪುರಾತನ ವರ್ಣಚಿತ್ರ, ಸ್ಮಾರಕ ರಕ್ಷಿಸಲು ಬಣ್ಣಗಳ ಬಗ್ಗೆ ತಿಳಿದಿದ್ದರೆ ಸಾಲದು, ಪುರಾತತ್ವ ವಿಚಾರಗಳ ಬಗ್ಗೆ ಆಸಕ್ತಿಯೂ ಇರಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿವೃತ್ತ ವ್ಯವಸ್ಥಾಪಕ ಪದ್ಮಶ್ರೀ ಎಸ್.ಸುಬ್ಬರಾಮನ್ ತಿಳಿಸಿದರು.

ಮೈಸೂರಿನ ಗೋಕುಲಂನಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು 'ಇಂಡಿಯನ್ ನಾಲೆಡ್ಜ್ ಸಿಸ್ಟಂ (ಐಕೆಎಸ್)' ಕುರಿತು ಸೋಮವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಬ್ರಿಟಿಷ್ ಆಡಳಿತದಲ್ಲಿ ಭಾರತವನ್ನು ಆರ್ಥಿಕವಾಗಿ ಶೋಷಣೆ ಮಾಡಿದರೂ, ಸ್ಮಾರಕಗಳ ಸಂರಕ್ಷಣೆಯಲ್ಲಿ ವಿಶೇಷ ಪಾತ್ರವಹಿಸಿದ್ದರು. ಪುರಾತತ್ವ ವಿಚಾರಗಳ ಬಗ್ಗೆ ಅವರಿಗೆ ಅಪಾರ ಕಾಳಜಿಯಿತ್ತು ಎಂದರು.

ಹೈದರಾಬಾದ್‌ನ ನಿಜಾಮರು ಹಾಗೂ ಇನ್ನೂ ಅನೇಕ ರಾಜರು ದೇಶದ ಐತಿಹಾಸಿಕ ಕಲಾ ಸಂಪತ್ತನ್ನು ಉಳಿಸುವಲ್ಲಿ ಶ್ರಮಿಸಿದ್ದರಿಂದ, ಇಂದಿನ ಪೀಳಿಗೆಗೆ ನಮ್ಮ ದೇಶದ ಕಲಾ ಶ್ರೀಮಂತಿಕೆಯ ಬಗ್ಗೆ ಅರಿಯಲು ಸಾಧ್ಯವಾಗಿದೆ. 1977ರಲ್ಲಿ ಅಫ್ಘಾನಿಸ್ತಾನದಲ್ಲಿರುವ ಭಾಮಿಯನ್ ಬುದ್ಧ ಪ್ರತಿಮೆಯ ಪುನಶ್ಚೇತನ ಕಾರ್ಯ ಆರಂಭಿಸಲಾಯಿತು. ಆಗಿನ ವಿದೇಶಾಂಗ ಸಚಿವ ಅಟಲ್ ಬಿಹಾರಿ ವಾಜಪೇಯಿ ಪ್ರತಿಮೆಗಳನ್ನು ಅಲ್ಲಿನ ಸರ್ಕಾರಕ್ಕೆ ಹಸ್ತಾಂತರಿಸಿದ್ದರು. ಆದರೆ, 2001ರಲ್ಲಿ ತಾಲಿಬಾನ್ ಆ ಪ್ರತಿಮೆಗಳನ್ನು ನಾಶಪಡಿಸಿತು. ಈ ಘಟನೆಯು ಇತಿಹಾಸ ಹಾಗೂ ಕಲೆಯ ಬಗ್ಗೆ ಆಸಕ್ತಿಯಿಲ್ಲದಿದ್ದರೆ ನಡೆಯುವ ದುರಂತವನ್ನು ಪ್ರತಿಪಾದಿಸುತ್ತದೆ ಎಂದು ತಿಳಿಸಿದರು.



ಮೈಸೂರಿನ ಗೋಕುಲಂನಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಇಂಡಿಯನ್ ನಾಲೆಡ್ಜ್ ಸಿಸ್ಟಂ (ಐಕೆಎಸ್)' ಕುರಿತ ಕಾರ್ಯಾಗಾರದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿವೃತ್ತ ವ್ಯವಸ್ಥಾಪಕ ಪದ್ಮಶ್ರೀ ಎಸ್.ಸುಬ್ಬರಾಮನ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಕಾಲೇಜಿನ ಉಪಾಧ್ಯಕ್ಷ ಶೋಭಾ ಶಂಕರ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಗೋಪಾಲ್ ರೆಡ್ಡಿ, ಬೆಂಗಳೂರಿನ ಮಾಜಿ ಸಿಇಡಿಟಿ ಅಶೋಕ್ ರಾವ್ ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಫೆ.17– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ssp.postmatric.karnataka.gov.in ಮೂಲಕ ಫೆ.25 ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ Acknowledgement Print ಮತ್ತು ಆಧಾರ್ ಕಾರ್ಡ್ ಪ್ರತಿಯೊಂದಿಗೆ ಗ್ರಾಮ ಒನ್, ಕರ್ನಾಟಕ ಒನ್, ಮೈಸೂರು ಒನ್ ಹಾಗೂ ಇತರೆ ಸೇವಾಸಿಂಧು ಕೇಂದ್ರಗಳಿಗೆ ಭೇಟಿ ನೀಡಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಬಯೋಮೆಟ್ರಿಕ್ ಇ–ದೃಢೀಕರಣ ಮಾಡಬೇಕಾಗಿರುತ್ತದೆ. ಸದರಿ ಕೇಂದ್ರಗಳಲ್ಲಿ ಇದು ಉಚಿತವಾಗಿದ್ದು, ಯಾವುದೇ ಹಣ ಪಾವತಿಸುವಂತಿರುವುದಿಲ್ಲ. ಹೆಚ್ಚಿನ ಮಾಹಿತಿಗೆ ಪಡುವಾರಹಳ್ಳಿಯ ಆದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆಯ ಡಾ.ಬಾಬು ಜಗಜೀವನರಾಂ ಭವನ ಕಟ್ಟಡದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1, ದೂ.ಸಂಖ್ಯೆ : 0821–2520910 ಅನ್ನು ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.17– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿ ತುರ್ತು ಕಾಮಗಾರಿ ನಿಮಿತ್ತ ಫೆ.18 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿಜಯನಗರ ಮೊದಲನೇ ಹಂತ, ಅಂಬರೀಷ್ ರಸ್ತೆ, ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸುತ್ತಮುತ್ತಲ ಪ್ರದೇಶ, ಕೊಡವ ಸಮಾಜದ ಸುತ್ತಮುತ್ತ, ಕಾರ್ಪೊರೇಷನ್ ಬ್ಯಾಂಕ್ ಸುತ್ತಮುತ್ತ, ಹಿನಕಲ್, ಹುಣಸೂರು ರಸ್ತೆ ಮಿನಿವಾಟರ್ ಟ್ಯಾಂಕ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾಗಿ ಹೊಸಹುಂಡಿ ರಘು ಅವಿರೋಧ ಆಯ್ಕೆ



ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹೊಸಹುಂಡಿ ರಘು ಅವರನ್ನು ಸಂಘದ ನಿರ್ದೇಶಕರು ಅಭಿನಂದಿಸಿದರು.

ಮೈಸೂರು, ಫೆ17(ಎಂಟಿವೈ)– ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಹೊಸಹುಂಡಿ ರಘು ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಹಾಪ್‌ಕಾಮ್ಸ್ ಅಧ್ಯಕ್ಷರಾಗಿದ್ದ ಮಿರ್ಲೆ ಅಣ್ಣೇಗೌಡ ಅಧಿಕಾರ ಹಂಚಿಕೆಯ ಒಪ್ಪಂದದಂತೆ ಅಧ್ಯಕ್ಷ ಸ್ಥಾನಕ್ಕೆ ಅಣ್ಣೇಗೌಡ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ರಘು ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅಣ್ಣೇಗೌಡರು ಸೂಚಿಸಿದರೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದ್ದರಿಂದ ಹೊಸಹುಂಡಿ ರಘುರವರು ಅಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ವಸಂತಕುಮಾರ್ ಕಾರ್ಯನಿರ್ವಹಿಸಿದರು.

ಈ ವೇಳೆ ಪತ್ರಕರ್ತರೊಂದಿಗೆ ಹಾಪ್‌ಕಾಮ್ಸ್ ನೂತನ ಅಧ್ಯಕ್ಷ ರಘು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶೀರ್ವಾದದಿಂದ ನಾನು ಈ ಹಿಂದೆ ಮೈಸೂರು ಎಪಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ, ಗ್ರಾ.ಪಂ. ಸದಸ್ಯ, ಭೂನ್ಯಾಯ ಮಂಡಳಿ ಸದಸ್ಯ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿಯಾಗಿ ಕೆಲಸ ಮಾಡಿದ್ದೇನೆ. ನನಗೆ ರೈತರು ಮತ್ತು ಗ್ರಾಹಕರ ಸಮಸ್ಯೆಗಳ ಅರಿವಿದ್ದು ರೈತರು ಮತ್ತು ಗ್ರಾಹಕರ ನಡುವೆ ಸೇತುವೆಯಾಗಿ ಗ್ರಾಹಕರಿಗೆ ಗುಣಮಟ್ಟದ ಹಣ್ಣು ತರಕಾರಿಗಳನ್ನು ಸರಬರಾಜು ಮಾಡುವುದರೊಂದಿಗೆ ಹಾಪ್‌ಕಾಮ್ಸ್ ಸಿಬ್ಬಂದಿಗಳ ಹಿತವನ್ನು ಕಾಯಲು ಬದ್ಧನಾಗಿದ್ದೇನೆ ಎಂದ ಅವರು, ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರುಗಳಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ಬಿ.ಪಿ. ಬೋರೇಗೌಡ, ಉಪಾಧ್ಯಕ್ಷ ಸರ್ವೇಶ್ ಆರ್., ನಿರ್ದೇಶಕರುಗಳಾದ ಜೆ. ಮಹಾದೇವ, ಬಿ.ಎನ್. ಪ್ರಭುಸ್ವಾಮಿ, ಟಿ. ರಾಮೇಗೌಡ, ವೈ.ಜಿ. ಮಹೇಂದ್ರ, ಎಸ್.ಆರ್. ಶ್ರೀನಿವಾಸ್, ಡಿ. ಪದ್ಮನಾಭ್, ಕೆ. ಸುಜಾತ, ಎಸ್.ಜಿ. ನಳಿನಿ, ಹೆಚ್.ಎಸ್. ಚಂದ್ರೇಗೌಡ, ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಇಂದೂಧರ್ ಇನ್ನಿತರರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಮೈಸೂರು ಜಿಲ್ಲೆ 1ರಿಂದ 5ನೇ ಸ್ಥಾನ ಪಡೆಯುವ ಗುರಿ

• ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಅನುತ್ತೀರ್ಣ, ಕನಿಷ್ಠ ತೇರ್ಗಡೆಯಾದ 5,327 ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿ • ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ 30 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು

ಮೈಸೂರು,ಫೆ.17(ಪಿಎಂ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯು 1ರಿಂದ 5ನೇ ಸ್ಥಾನದೊಳಗೆ ಬರಬೇಕೆಂಬ ಗುರಿಯೊಂದಿಗೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ನೇತೃತ್ವದಲ್ಲಿ ತಯಾರಿ ನಡೆಯುತ್ತಿದ್ದು, ತಾಲೂಕು ಮತ್ತು ಜಿಲ್ಲಾ ಹಂತದ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಉನುತ್ತೀರ್ಣರಾದ ಮತ್ತು ಕನಿಷ್ಠ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.



ಮೈಸೂರಿನ ತಮ್ಮ ಕಚೇರಿಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಎಸ್.ಟಿ.ಜವರೇಗೌಡ ಸೋಮವಾರ ಇಲಾಖಾ ಅಧಿಕಾರಿಗಳೊಂದಿಗೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮಪಡಿಸುವ ಸಂಬಂಧ ಸಭೆ ನಡೆಸಿದರು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2024– 25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವೇಳಾ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು, ಮಾ.21ರಿಂದ ಏ.4ರವರೆಗೆ ಪರೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 276 ಸರ್ಕಾರಿ ಪ್ರೌಢಶಾಲೆಗಳಿದ್ದು, ಈ ಶಾಲೆಗಳಿಂದ ಒಟ್ಟು 16,610 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಅಂತೆಯೇ ಅನುದಾನಿತ ಪ್ರೌಢಶಾಲೆಗಳು 124 ಇದ್ದು, ಈ ಶಾಲೆಗಳಿಂದ 863 ಹಾಗೂ ಖಾಸಗಿ ಶಾಲೆಗಳು 289 ಇದ್ದು, ಈ ಶಾಲೆಗಳಿಂದ 13,031 ವಿದ್ಯಾರ್ಥಿಗಳು ಸೇರಿದಂತೆ ಜಿಲ್ಲೆಯಲ್ಲಿ 30 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ಜಿಲ್ಲೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಿಂದ ಕಲಿಕೆಯಲ್ಲಿ ಹಿಂದುಳಿದ 5,327 ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ಬೋಧನೆ, ಪರೀಕ್ಷೆ ನಡೆಸಿ ಫಲಿತಾಂಶ ಸುಧಾರಣೆಗೆ ಕ್ರಮ ವಹಿಸಲಾಗಿದೆ. ತಾಲೂಕು ಮತ್ತು ಜಿಲ್ಲಾ ಹಂತದ ಪೂರ್ವ ಸಿದ್ಧತಾ ಪರೀಕ್ಷೆ ನಡೆಸಿ ಈ ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ.

ಪ್ರಗತಿ ಪರಿಶೀಲಿಸಿದ ಡಿಡಿಪಿಐ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯು ಉತ್ತಮ ಸ್ಥಾನ ಗಳಿಸುವ ಸಂಬಂಧ ನಡೆದಿರುವ ಸಿದ್ಧತೆ ಹಾಗೂ ಮುಂದಿನ ಕ್ರಮಗಳ ಬಗ್ಗೆ ಮೈಸೂರಿನ ತಮ್ಮ ಕಚೇರಿಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ.ಜವರೇಗೌಡ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಮೈಸೂರು ನಗರದ ಉತ್ತರ ವಲಯ, ದಕ್ಷಿಣ ವಲಯ ಹಾಗೂ ಗ್ರಾಮಾಂತರ ವಲಯ ಸೇರಿದಂತೆ ಎಲ್ಲಾ 9 ವಲಯಗಳ (6 ತಾಲೂಕುಗಳು) ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಓ), ಬಿಆರ್‌ಸಿಗಳು, ನೋಡಲ್ ಅಧಿಕಾರಿಗಳು ಸೇರಿದಂತೆ ಇನ್ನಿತರ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿ ಪ್ರಗತಿ ಪರಿಶೀಲಿಸಿದರು.

ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಡಿಪಿಐ ಎಸ್.ಟಿ.ಜವರೇಗೌಡ, ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರು ಜಿಲ್ಲೆಯು 1ರಿಂದ 5ನೇ ಸ್ಥಾನದೊಳಗೆ ಬರಬೇಕೆಂದು ಗುರಿ ಹೊಂದಲಾಗಿದೆ. ಈಗಾಗಲೇ ಹಾಕಿಕೊಂಡಿರುವ 50 ಅಂಶಗಳ ಕಾರ್ಯಕ್ರಮದೊಂದಿಗೆ ಕಾರ್ಯೋನ್ಮುಖರಾಗಿದ್ದು, ಇದರ ಜೊತೆಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಆಯುಕ್ತರ ನೇತೃತ್ವದ ನಡೆದ ಸಭೆಯಲ್ಲಿ ಸೂಚಿಸಿದಂತೆ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹಾಗೂ ಕನಿಷ್ಠ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆಯ ಕ್ರಿಯಾಯೋಜನೆ ಮಾಡಿದ್ದು, ಆ ಕ್ರಿಯಾ ಯೋಜನೆಯಲ್ಲಿ ಆಗಿರುವ ಪ್ರಗತಿ ಬಗ್ಗೆ ಈ ದಿನ ಪರಿಶೀಲನೆ ಮಾಡಿದ್ದೇನೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಫಲಿತಾಂಶವನ್ನು ಇಂದಿನ ಸಭೆಯಲ್ಲಿ ಪರಿಶೀಲಿಸಲಾಗಿದ್ದು, ಸರ್ಕಾರಿ ಶಾಲೆಗಳ ಫಲಿತಾಂಶವು ಶೇ.80ರಷ್ಟು ಇರುವುದು ಕಂಡು ಬಂದಿದೆ. ಪರೀಕ್ಷೆಗೆ ಉಳಿದಿರುವ 30 ದಿನಗಳಲ್ಲಿ ವಿಶೇಷ ಗಮನಹರಿಸಿ ಅಭ್ಯಾಸದ ಹಾಳೆಗಳನ್ನು ಕೊಟ್ಟು ಅನುತ್ತೀರ್ಣರಾದ ಹಾಗೂ ಕನಿಷ್ಠ ತೇರ್ಗಡೆಯಾದ ಮಕ್ಕಳ ಕಲಿಕೆ ಉತ್ತಮಪಡಿಸಲು ಹೆಚ್ಚಿನ ಗಮನ ನೀಡುವಂತೆ ಎಲ್ಲಾ ಬಿಇಓಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಜಿಲ್ಲೆಯಾದ್ಯಂತ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಅನುತ್ತೀರ್ಣ ಹಾಗೂ ಕನಿಷ್ಠ ತೇರ್ಗಡೆಯಾದ ಮಕ್ಕಳಿಗೆ ವಿಶೇಷ ಬೋಧನಾ ತರಗತಿ ನಡೆಸಲಾಗುತ್ತಿದೆ. ಅದೇ ರೀತಿಯಲ್ಲಿ ದಕ್ಷಿಣ ವಲಯದ ಕಲಿಕಾಮೃತ ವಿಶೇಷ ಬೋಧನಾ ತರಗತಿ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಲಾಗಿದೆ ಎಂದರು.

PUBLIC NOTICE

General public are hereby notified that I R.M. Haneef @ R.M. Haneef Rawthar, son of late R.M. Moidu, permanent resident of Napoklu village. Madikeri taluk have revoked, terminated and cancelled all the power of attorney's executed by me in favour of my brother Mr. R.M. Abdul Salam @ R.M. Abdul Salam Rawthar, Nisargadhama shopping village (NTC), Madapatna village, Guddehosuru, B.M. Road, Kushalnagar, Kodagu district given at any point of time. By virtue of the said cancellation of the power of attorney my brother Mr. R.M. Abdul Salam @ R.M. Abdul Salam Rawthar has no authority to represent me or act on my behalf in respect of any transactions pertaining to property owned by me. General public are cautioned not to deal with my said erstwhile attorney in respect of any dealings pertaining to my affairs or my property.

Sd/- R.M. Haneef @
R.M. Haneef Rawthar
Mob: 9663954369
Date: 17-2-2025

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಸಿ.ಎನ್. ಶ್ರೀನಿವಾಸ ಕುಮಾರ್ ಬಿನ್ ಲೇಟ್ ನಾರಾಯಣ ಶೆಟ್ಟಿ ರವರು ನನ್ನ ಕಕ್ಷಿದಾರರುಗಳಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವ ವಿಧವಾದ ಹಕ್ಕು, ಆಸಕ್ತಿಗಳಿದ್ದಲ್ಲಿ ದಾಖಲಾತಿಗಳ ಸಮೇತ ಈ ಕೆಳಕಂಡ ಕಛೇರಿಯ ವಿಳಾಸಕ್ಕೆ 7 ದಿನಗಳ ಒಳಗಾಗಿ ಸಂಪರ್ಕಿಸಲು ಕೋರಲಾಗಿದೆ, ತಪ್ಪಿದ್ದಲ್ಲಿ ಯಾವುದೇ ಆಕ್ಷೇಪವಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಕ್ರಯವನ್ನು ಊರ್ಜಿತಗೊಳಿಸುತ್ತಾರೆ. ನಂತರದಲ್ಲಿ ಬಂದ ಯಾವುದೇ ಹಕ್ಕುಗಳನ್ನು ಪರಿಗಣಿಸುವುದಿಲ್ಲ ಹಾಗೂ ಕಾನೂನಿನ ರೀತಿ ಊರ್ಜಿತವಿಲ್ಲವೆಂದು ತಿಳಿಯುವುದು. ಕಛೇರಿ ಸಂಖ್ಯೆ 51/1, ಎರಡನೇ ಮಹಡಿ, 5ನೇ ತಿರುವು, 6ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–09.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ತಂಡಸೀಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 27/2 ರ ವಿಸ್ತೀರ್ಣ 2 ಎಕರೆ 23 ಗುಂಟೆ, 27/3 ರ ವಿಸ್ತೀರ್ಣ 20 ಗುಂಟೆ, 27/4 ರ ವಿಸ್ತೀರ್ಣ 33 ಗುಂಟೆ ಹಾಗೂ 47/2 ರ ವಿಸ್ತೀರ್ಣ 1 ಎಕರೆ 12 ಗುಂಟೆ ಒಟ್ಟು ವಿಸ್ತೀರ್ಣ 5 ಎಕರೆ 08 ಗುಂಟೆಯ ಸ್ವತ್ತಿಗೆ ಚೌತರ್ಫು:

ಪೂರ್ವಕ್ಕೆ: ರಸ್ತೆ,
ಪಶ್ಚಿಮಕ್ಕೆ: ಶ್ರೀ. ದೊಡ್ಡಗೌಡ ಮತ್ತು ಶ್ರೀ. ನಂಜಯ್ಯರವರ ಜಮೀನು,
ಉತ್ತರಕ್ಕೆ: ಶ್ರೀ. ಮಾಕೇಗೌಡ ರವರ ಜಮೀನು,
ದಕ್ಷಿಣಕ್ಕೆ: ಶ್ರೀ. ತಮ್ಮಣ್ಣೇಗೌಡರವರ ಜಮೀನು.

Sd/- Srikanth A.R., B.A., LL.B.
Advocate, KAR 2044/2006
Office No. 51/1, 2nd Floor,
5th Cross, 6th Main,
Saraswathipuram, Mysore.
Mob: 9900411143
Place: Mysore
Date: 17-2-2025

EMBEDDED PRODUCT DESIGN CERTIFICATION COURSE

Outcome: Placement in Core Engineering Companies
Duration: 6 Months
Classes: Offline, Classroom
Method: Hands-on, Industry Standard
Starting: 19th Feb, 2025
Location: DTRI, SJCE-STEP, Mysuru
Website: www.dtri.in
Whatsapp:+91 63607 24725

ಕಳೆದಿದೆ

ಹೆಚ್.ಡಿ. ಕೋಟೆ: ಹೆಬ್ಬಲಗುಪ್ಪೆ ಗ್ರಾಮದಲ್ಲಿ ವಾಸವಾಗಿದ್ದು ಹೆಬ್ಬಲಗುಪ್ಪೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಹೆಬ್ಬಲಗುಪ್ಪೆ ಗ್ರಾಮದ ಜಂಜರ್ ನಂಬರ್ 755/869/71 ನಿವೇಶನ ಪತ್ರವನ್ನು ನನ್ನ ತಾಯಿಯವ ರಾದ ಆಲಮ್ಮ ನನ್ನ ಹೆಸರಿಗೆ ಬರೆದು ಕೊಟ್ಟಿದ್ದ ನೋಂದಣಿ ಹಾಗೂ ಮುದ್ರಾಂಕ ಇಲಾಖೆಯಲ್ಲಿ ಅಧಿಕೃತವಾಗಿ ನೀಡಲಾಗಿದ್ದ 481ರ ಕ್ರಮ ಸಂಖ್ಯೆಯ ದಾನ ಪತ್ರಗಳು ನನ್ನ ಬಳಿ ಇದ್ದು ನಾನು ಸದರಿ ಸ್ವತ್ತಿನ ಆಧಾರದ ಮೇಲೆ ಸಂಬಂಧಪಟ್ಟ ಬ್ಯಾಂಕಿನಲ್ಲಿ ಸಾಲ ಪಡೆಯಲು ಸದರಿ ಸ್ವತ್ತಿನ ನೊಂದಾಯಿತ ಪತ್ರದ ಜೆರಾಕ್ಸ್ ಪ್ರತಿಗಳು ಬೇಕಾಗಿರುವುದರಿಂದ ಸದರಿ ಪತ್ರಗಳನ್ನು ಜೆರಾಕ್ಸ್ ಮಾಡಿಸಲು ದಿನಾಂಕ 05–02–2025 ರಂದು ಹೆಚ್.ಡಿ. ಕೋಟೆ ಬಸ್ ನಿಲ್ದಾಣದಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಿಕೊಂಡು ಬರುವಾಗ ಮೇಲ್ಕಂಡ ಪತ್ರಗಳು ಕಳೆದುಹೋಗಿರುತ್ತದೆ ಎಂದು ಹೆಚ್.ಡಿ. ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ.

ಸಿಕ್ಕಿದವರು ಸಂಪರ್ಕಿಸಿ: ಕೃಷ್ಣಯ್ಯ
Mob: 9611417162

MEGA JOB DRIVE

ANANT CARS — SMILE AT EVERY SMILE
@ Anant Cars Auto Pvt. Ltd.
mahindra

WE ARE HIRING-ANANT CARS AUTO PVT. LTD.
Upcoming Mahindra Car Dealership in Mysore!

JOB OPENINGS
- Sales Consultant
- Digital Engagement Manager
- Accessories Executive
- Accounts Executive
- Cashier
- Finance Executive
- Service Manager
- ICRE
- Insurance Executive

Walk in Date 21st Feb 2025, Timings: 10AM to 4PM
CONTACT
98459-87625 / 98459-53513
Location: Mysore
Interview Address: Jade Garden Hotel (Iconic Resto)
New Ramaswamy Circle, Chamaraja Mohalla
Lakshmipuram, Mysore - 570008

WANTED IMMEDIATELY

For a reputed resort in Mysore City
COOKS & ASST.COOKS
Chinese,South Indian,Tandoor
WAITERS
Fresher/Experienced
Contact:- 99455 46713

ಕಳೆದಿದೆ

ನಾಗರಾಜು ಎಸ್.ಟಿ. ಹಾಗೂ ನಾಗೇಂದ್ರ ಎಸ್.ಎನ್. ಆದ ನಾನು ನಂ. 5066, 2ನೇ ಘಟ್ಟ, 3ನೇ ಕ್ರಾಸ್, ವಿಜಯನಗರ 4ನೇ ಹಂತ, ಮೈಸೂರು ಇಲ್ಲಿ ವಾಸವಿದ್ದು, ನನಗೆ ಸೇರಿದ ನಿವೇಶನ ಸಂಖ್ಯೆ 5066 ಸ್ವತ್ತಿನ ಮೂಲ ಖಾತಾ ವರ್ಗಾವಣೆ ಪತ್ರ ಕಳೆದಿದ್ದು, ಸಿಕ್ಕಿದವರು ಸಂಪರ್ಕಿಸಿ:

Mob: 9611523523



ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಮತ್ತು ವಿವರಿಸಲಾಗಿರುವ ಸ್ವತ್ತನ್ನು ಅದರ ಮಾಲೀಕರಾದ, ಶ್ರೀ ಎಂ.ಆರ್.ಎ. ರಾವ್ ರವರ ಮಗನಾದ **ಶ್ರೀ ಎ. ನಾರಾಯಣ ರಾವ್**, ವಿಳಾಸ ನಂ.257, 1ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, ಹೆಚ್‌ಎಎಲ್ 2ನೇಹಂತ, ಇಂದಿರಾನಗರ, ಬೆಂಗಳೂರು–560038 ಎಂಬುವರ ಜೊತೆ ಜಂಟಿ ಅಭಿವೃದ್ಧಿ ಒಪ್ಪಂದದ ಕರಾರು ಮತ್ತು ಷೆಡ್ಯೂಲ್ ಸ್ವತ್ತಿನ ಅಭಿವೃದ್ಧಿಗಾಗಿ ಇಚ್ಛಿಸಿದ್ದು, ಸ್ವತ್ತಿನ ಮಾಲೀಕರು ಪ್ರತಿನಿಧಿಸಿದಂತೆ ಷೆಡ್ಯೂಲ್ ಸ್ವತ್ತು ಅವರ ಸಂಪೂರ್ಣ ಸ್ವತ್ತಾಗಿದ್ದು ಅವರ ವಿನ: ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು–ಬಾದ್ಯತೆಗಳು ಇರುವುದಿಲ್ಲ ಹಾಗೂ ನನ್ನ ಕಕ್ಷಿದಾರರ ವಿನ: ಯಾರೊಂದಿಗೂ ಷೆಡ್ಯೂಲ್ ಸ್ವತ್ತುಗಳನ್ನು ಯಾವ ರೀತಿಯಲ್ಲೂ ಪರಭಾರೆ, ಆಧಾರ, ಕರಾರು ಒಪ್ಪಂದ ಮಾಡಿಕೊಂಡಿಲ್ಲವೆಂದು ಹಾಗೂ ಷೆಡ್ಯೂಲ್ ಸ್ವತ್ತು ಯಾವ ವಿಧವಾದ ಸಾಲ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಯಾವುದೇ ನ್ಯಾಯ ಸಮ್ಮತವಾದ ತಂಟೆ ತಕರಾರುಗಳು, ನ್ಯಾಯಾಲಯದ ಕೋರ್ಟ್ ಅಟ್ಯಾಚ್‌ಮೆಂಟ್, ಡಿಕ್ರಿ ವಗೈರೆ ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು–ಬಾದ್ಯತೆ, ಅಭ್ಯಂತರಗಳಿದ್ದಲ್ಲಿ **ಈ ದಿನದಿಂದ ಹತ್ತು (10) ದಿವಸದೊಳಗೆ** ಈ ಕೆಳಕಂಡ ವಿಳಾಸಕ್ಕೆ ತಮ್ಮ ಅಭ್ಯಂತರಗಳನ್ನು ದಾಖಲಾತಿಗಳೊಂದಿಗೆ ತಿಳಿಸುವುದು, ತಪ್ಪಿದಲ್ಲಿ ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗೂ ಯಾವುದೇ ರೀತಿಯ ಹಕ್ಕು–ಬಾದ್ಯತೆ, ತಂಟೆ–ತಕರಾರು ಹಾಗೂ ಅಭ್ಯಂತರಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಜಂಟಿ ಅಭಿವೃದ್ಧಿ ವಹಿವಾಟನ್ನು ಮುಂದುವರಿಸುವರು.

ಷೆಡ್ಯೂಲು ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, **ಹಿನ್‌ಕಲ್ ಗ್ರಾಮದ, ಸರ್ವೆ ನಂ. 276/1, 02 ಎಕರೆ** ವಿಸ್ತೀರ್ಣದ ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತನೆಯಾದ ಸ್ವತ್ತಿಗೆ **(ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು ಇವರ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ ALN: (1):254/2006-07** ದಿನಾಂಕ **06–11–2007**) ಚಕ್ಕುಬಂದಿ:

ಪೂರ್ವಕ್ಕೆ : ಸರ್ವೆ ನಂ. 276/1ರ ಉಳಿಕೆ ಸ್ವತ್ತು;
ಪಶ್ಚಿಮಕ್ಕೆ : ನಾಲ ಮತ್ತು ಹಿನ್‌ಕಲ್–ಬೋಗಾದಿ ರಸ್ತೆ;
ಉತ್ತರಕ್ಕೆ : ಸರ್ವೆ ನಂ. 277ರ ಸ್ವತ್ತು; ಮತ್ತು
ದಕ್ಷಿಣಕ್ಕೆ : ಸರ್ವೆ ನಂ. 276/2 ಮತ್ತು ಸರ್ವೆ ನಂ. 276/1ರ ಉಳಿಕೆ ಸ್ವತ್ತು;

ಜಯಂತ್ ಎಂ. ಪಟ್ಟಣ್‌ಶೆಟ್ಟಿ, ವಕೀಲರು
ಜಯಂತ್ ಪಟ್ಟಣ್‌ಶೆಟ್ಟಿ ಅಸೋಸಿಯೆಟ್ಸ್ ಎಲ್ ಎಲ್ ಪಿ,
102, ನೆಲ ಮಹಡಿ, ರಾಮ್ಸ್ ಇನ್‌ಫ್ಯಾಂಟ್ರಿ ಮ್ಯಾನರ್, ನಂ.70,
ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು–560001
ದೂರವಾಣಿ : 080 41238516 / 41238367
ಸ್ಥಳ : ಬೆಂಗಳೂರು
ದಿನಾಂಕ : 17–02–2025

ಉಚಿತ ಕೀಲು ನೋವಿನ ಕ್ಲಿನಿಕ್



Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road,Srirampura Mysore – 570 008

No. CS&RTI/JRF/MAR/2024-25 Date:14/02/2025

WALK-IN-INTERVIEW FOR THE POST OF JUNIOR RESEARCH FELLOW

A Walk-in-Interview will be held on 06/03/2025 at Central Sericultural Research and Training Institute, Srirampura, Mysuru - 570 008 as shown below:

'A' 03 (Three) Junior Research Fellow (JRF) purely on contract basis under CSB approved Project "Studies on the factors responsible for non-spinning in mulberry silkworm"(Project Code: SPR01046MIC, Component 1, 2 & 3), purely on contract basis for a period Up to September 2027 or completion of project whichever is earlier under CSB Terms and Conditions.

Qualifications for Junior Research Fellow (JRF): M.Sc. degree in Biochemistry/Microbiology/Zoology/Sericulture/Bio-Technology with 60% marks (55% for SC/ST candidates). Walk-in-Interview will be held on 06/03/2025, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director, CSR & TI,Mysuru

ಪಟ್ಟಣ ಪಂಚಾಯತಿ ಕಾರ್ಯಾಲಯ, ಸರಗೂರು

Email: ka.sargur.tp@gmail.com 08228-265532
Website:www.sargurtown.mrc.gov.in

ಸಂಖ್ಯೆ: ಸ.ಪ.ಪಂ./ಕ.ಶಾ/ಪಿ.ಆರ್–3/2024–25 ದಿನಾಂಕ: 17–2–2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸರಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಟ್ಟಡಗಳು/ನಿವೇಶನಗಳನ್ನು ಹೊಂದಿರುವ ಆಸ್ತಿ ಮಾಲೀಕರಿಗೆ/ಅನುಭೋಗದಾರರಿಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಅಂತಿಮ ಅಧಿಸೂಚನೆ ನಂ: **UDD 126 GEL 2023(e)** ದಿ:**-11-02-2025** ರನ್ವಯ ಪಟ್ಟಣ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಎಲ್ಲಾ ರೀತಿಯ ಕಟ್ಟಡ/ನಿವೇಶನಗಳಿಗೆ ಆಸ್ತಿ ತೆರಿಗೆ ನಿರ್ಧರಣೆಗೊಳಿಸಿ ಆಸ್ತಿ ತೆರಿಗೆ ಯನ್ನು 2024–25ನೇ ಸಾಲಿನ ಅಂತ್ಯದವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿಕೊಂಡು ಸಂಬಂಧಪಟ್ಟ ಆಸ್ತಿ ಮಾಲೀಕರಿಂದ ಅವಶ್ಯಕ ದಾಖಲಾತಿಗಳನ್ನು ಪಡೆದು ಕರ್ನಾಟಕ ಪೌರಸಭೆಗಳ ಅಧಿನಿಯಮದ 1964ರ ಸೆಕ್ಷನ್ **106(1ಬಿ)(ii)** ಅನ್ವಯ **Register-A**ರಲ್ಲಿ (ನಮೂನೆ–3) ಅಧಿಕೃತ ಸ್ವತ್ತುಗಳು ಹಾಗೂ **Register-B** ರಲ್ಲಿ (ನಮೂನೆ–**3A**) ಅನಧಿಕೃತ ಸ್ವತ್ತುಗಳ ಮಾಹಿತಿಯುಳ್ಳ ವಹಿಯನ್ನು ನಿರ್ವಹಿಸಬೇಕಾಗುತ್ತದೆ.

ಆದ್ದರಿಂದ ಪಟ್ಟಣ ವ್ಯಾಪ್ತಿಯೊಳಗೆ ಬರುವ ಸರ್ಕಾರಿ ಜಾಗ/ಅರೆಸರ್ಕಾರಿ/ ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡಗಳ/ನಿವೇಶನಗಳ ಮಾಲೀಕರು ನಿಮ್ಮ ನಿಮ್ಮ ಆಸ್ತಿಗಳಿಗೆ ಸಂಬಂಧಿಸಿದ ಪೂರಕ ನೊಂದಾಯಿತ ದಾಖಲೆ ಪತ್ರಗಳ/ಸ್ವತ್ತಿನ ಭಾವಚಿತ್ರ/ಮಾಲೀಕರ ಫೋಟೋ/ನಮೂನೆ–15(**EC**)/ಕೆ.ಇ.ಬಿ ಬಿಲ್/ಕುಡಿಯುವ ನೀರಿನಬಿಲ್/ಕಟ್ಟಡ ಪರವಾನಗಿ ಮತ್ತು ಅನುಮೋದಿನ ನಕ್ಷೆ /ಅಲಿನೇಷನ್ ನಕಲು ಪ್ರತಿ/**RTC**/ಮ್ಯೂಟೇಶನ್ ನಕಲು ಪ್ರತಿ/ ಮಾಲೀಕರ ಪಾನ್ ಕಾರ್ಡ್ ಪ್ರತಿ ಅಥವಾ ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಪುರಸಭಾ ಕಛೇರಿಗೆ ಸಲ್ಲಿಸಿ ಸ್ವತ್ತಿಗೆ ಸಂಬಂಧಪಟ್ಟ ಆಸ್ತಿ ತೆರಿಗೆಯನ್ನು ಪಾವತಿಸಿ, ಆಸ್ತಿಯನ್ನು ಗಣಕೀಕರಿಸಿಕೊಂಡು ನಮೂನೆ–3/ನಮೂನೆ–**3A**/ಗಳನ್ನು ಪಡೆದುಕೊಂಡು ನೊಂದಾಯಿತ ಕಛೇರಿಯಲ್ಲಿ ಕ್ರಯಪತ್ರ / ದಾನ ಪತ್ರ / ವಿಭಾಗಪತ್ರ / ವಿಭಾಗ ಪತ್ರ / ಹಕ್ಕು ಖುಲಾಸೆ ಹಾಗೂ ಇತರೆ ದಾಖಲೆ ಪತ್ರಗಳನ್ನು ನೋಂದಣಿ ಮಾಡಿಸಿಕೊಂಡು ಸದುಪಯೋಗ ಮಾಡಿಕೊಳ್ಳಲು ಅವಕಾಶ ಪಡೆಯಬಹುದಾಗಿರುತ್ತದೆ. ಪ್ರಯುಕ್ತ ಈ ಮೇಲ್ಕಂಡ ಸರ್ಕಾರದ ಅಧಿಸೂಚನೆಯಂತೆ ಗಣಕೀಕೃತ ನಮೂನೆ–3 ಮತ್ತು ನಮೂನೆ–**3A** ರನ್ನು ಪಡೆದುಕೊಳ್ಳವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರುಗಳಿಗೆ ನಿಯಮ 104 ರಂತೆ ನಿಯಾಮಾನುಸಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಯಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ/ಕಂದಾಯಾಧಿಕಾರಿ/ಕಂದಾಯ ಶಾಖೆಯ ಸಿಬ್ಬಂದಿರವರನ್ನು ಸಂಪರ್ಕಿಸಲು ತಿಳಿಯಪಡಿಸಿದೆ.

ಸಹಿ/– ರಾಧಿಕ ಶ್ರೀನಾಥ್, ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಸರಗೂರು
ಸಹಿ/– ಶಿವಕುಮಾರ್, ಉಪಾಧ್ಯಕ್ಷರು, ಪಟ್ಟಣ ಪಂಚಾಯಿತಿ, ಸರಗೂರು
ಸಹಿ/– ಸಂತೋಷ್‌ಕುಮಾರ್ S.K., ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸರಗೂರು

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ, ಮಾದಾಪುರ ಪೋಸ್ಟ್, ಚಾಮರಾಜನಗರ-571313

पीएम श्री केंद्रीय विद्यालय, मादापुरा पोस्ट, चामराजनगर-५७१३१३
PM SHRI KENDRIYA VIDYALAYA CHAMARAJANAGAR
Madapura Post, Chamarajanagar, - 571313 (Karnataka)
E-mail:kvchamarajanagaramedia@gmail.com | Tele. No. : 08226-297179

WALK-IN-INTERVIEW

Walk-In-Interviews for the following posts will be conducted on 04-03-2025 to prepare panel of Part time/ Contractual Teachers for the Academic Year 2025-26 on contractual basis.

Sl.no	Name of the post	Date of interview
1.	Primary Teachers(PRT), PRT Music Salary: Rs. 21,250/- Per month	04/03/2025
2.	Trained Graduate Teacher(TGT) - English, Hindi, Sanskrit, Mathematics, Science, Social Studies, Physical and Health education, Art, Work Education, Librarian, Salary: Rs. 26,250/- Per month	
3.	Post Graduate Teacher(PGT) - English, Hindi, Mathematics, Physics, Chemistry, Biology, Computer Science. Salary: Rs 27,500/- Per month	
4.	Balavatika Teachers, Sports Coach, Staff Nurse, Computer Instructor, Special Educator, Kannada Teacher, Art & Craft Teacher. Salary: Rs. 21,250/- Per month	

Note: Verification of the documents: **08:30 AM to 09:30 AM**

1. Eligible candidates may attend interview with complete Bio-Data, Original documents and one set of self-attested qualification certificates.
2. For further information regarding eligibility, Bio-Data form etc log on to Vidyalaya website https://chamrajnagar.kvs.ac.in
3. Candidates from the selected panel will be appointed on need basis.
4. The posts are purely contractual and other terms & conditions applicable as per KVS rules.
5. No TA/ DA will be admissible for interview.

Sd/-Principal

ನಗರಸಭಾ ಕಾರ್ಯಾಲಯ, ಹುಣಸೂರು

ಸಂ:ಹುನಕಾ:/ಆಶ್ರಯ/ಪಿ.ಆರ್/01/2024–25 ದಿನಾಂಕ : 17/02/2025

ಸಾರ್ವಜನಿಕ ಪ್ರಕಟಣೆ

ಹುಣಸೂರು ಪಟ್ಟಣದಲ್ಲಿ ಈ ಹಿಂದೆ ಪುರಸಭೆಯಿಂದ 870 ಫಲಾನುಭವಿಗಳನ್ನು ಆಯ್ಕೆಮಾಡಿ ಹಕ್ಕು ಪತ್ರ ವಿತರಿಸಿರುವ ಫಲಾನುಭವಿಗಳಿಂದ ಅವಶ್ಯ ದಾಖಲಾತಿಗಳನ್ನು ಹಕ್ಕು ಪತ್ರದೊಂದಿಗೆ ಕಛೇರಿಗೆ ಅರ್ಜಿ ಸಲ್ಲಿಸಲು ದಿನಾಂಕ 02-01-2025 ರಿಂದ 31-01-2025 ರವರೆಗೆ ಕಾಲಾವಕಾಶ ನೀಡಲಾಗಿತ್ತು. ಸದರಿ ಅವಧಿಯನ್ನು ದಿನಾಂಕ 18-02-2025 ರಿಂದ 19-03-2025 ರವರೆಗೆ ವಿಸ್ತರಿಸಲಾಗಿದ್ದು, ಈ ಹಿಂದೆ ಹುಣಸೂರು ಪುರಸಭೆಯಿಂದ ಹಕ್ಕು ಪತ್ರ ಪಡೆದಿರುವ ಫಲಾನುಭವಿಗಳು ದಿನಾಂಕ 19-03-2025 ರ ಒಳಗಾಗಿ ಹಕ್ಕು ಪತ್ರ ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಹುಣಸೂರು ನಗರಸಭೆಗೆ ಸಲ್ಲಿಸಲು ಸೂಚಿಸಲಾಗಿದೆ.

- ಹಕ್ಕುಪತ್ರ ಜೆರಾಕ್ಸ್ ಪ್ರತಿ
- ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ
- ಪಡಿತರ ಚೀಟಿ ಜೆರಾಕ್ಸ್ ಪ್ರತಿ
- ಫಲಾನುಭವಿಯವರ ಭಾವಚಿತ್ರ (ಪಾಸ್‌ಪೋರ್ಟ್ ಸೈಜ್)

ಸಹಿ/– ಕಾರ್ಯದರ್ಶಿ/ಪೌರಾಯುಕ್ತರು, ನಗರ ಆಶ್ರಯ ಸಮಿತಿ, ಹುಣಸೂರು
ಸಹಿ/– ಅಧ್ಯಕ್ಷರು ಹಾಗೂ ಶಾಸಕರು, ನಗರ ಆಶ್ರಯ ಸಮಿತಿ ಹುಣಸೂರು

ನಗರಸಭಾ ಕಾರ್ಯಾಲಯ, ಹುಣಸೂರು

ಮೈಸೂರು ಜಿಲ್ಲೆ – 571105
CITY MUNICIPAL COUNCIL HUNSUR
E-mail: itstaff_ulb_hunsur@yahoo.co.in ಫೋನ್ : 08222-252048

ಸಂ:ಹುನಕಾ:/ಕಂ.ಶಾ/ಇತರೆ/ಸಿ.ಆರ್–02/2024–25 ದಿನಾಂಕ: 14.02.2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ಕಟ್ಟಡಗಳು/ನಿವೇಶನಗಳನ್ನು ಹೊಂದಿರುವ ಆಸ್ತಿ ಮಾಲೀಕರಿಗೆ /ಅನುಭೋಗದಾರರಿಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರುರವರ 2: UDD 126 GEL 2023(e) 2:11-02-2025 ನಗರಸಭಾ ವ್ಯಾಪ್ತಿಯೊಳಗೆ ಬರುವ ಎಲ್ಲಾ ರೀತಿಯ ಕಟ್ಟಡ/ ನಿವೇಶನಗಳಿಗೆ ಆಸ್ತಿ ತೆರಿಗೆ ನಿರ್ಧರಣೆಗೊಳಿಸಿ ಆಸ್ತಿ ತೆರಿಗೆಯನ್ನು 2024–25ನೇ ಸಾಲಿನ ಅಂತ್ಯದವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿಕೊಂಡು ಸಂಬಂಧಪಟ್ಟ ಆಸ್ತಿ ಮಾಲೀಕರಿಂದ ಅವಶ್ಯಕ ದಾಖಲಾತಿಗಳನ್ನು ಪಡೆದು. ಕರ್ನಾಟಕ ಪೌರಸಭೆಗಳ ಅಧಿನಿಯಮದ 1964ರ ಸೆಕ್ಷನ್ 106(1ಬಿ) (ii) ಅನ್ವಯ Register-A ರಲ್ಲಿ (ನಮೂನೆ–3) ಅಧಿಕೃತ ಸ್ವತ್ತುಗಳು ಹಾಗೂ Register-B ರಲ್ಲಿ (ನಮೂನೆ–3ಎ) ಅನಧಿಕೃತ ಸ್ವತ್ತುಗಳ ಮಾಹಿತಿಯುಳ್ಳ ವಹಿಯನ್ನು ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ನಗರಸಭಾ ವ್ಯಾಪ್ತಿಯೊಳಗೆ ಬರುವ ಸರ್ಕಾರಿ ಜಾಗ/ಅರೆಸರ್ಕಾರಿ/ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡಗಳ/ನಿವೇಶನಗಳ ಮಾಲೀಕರು ನಿಮ್ಮ ನಿಮ್ಮ ಆಸ್ತಿಗಳಿಗೆ ಸಂಬಂಧಿಸಿದ ಪೂರಕ ನೋಂದಾಯಿತ ದಾಖಲೆ ಪತ್ರಗಳು/ ಸ್ವತ್ತಿನ ಭಾವಚಿತ್ರ/ ಮಾಲೀಕರ ಫೋಟೊ/ನಮೂನೆ–15(ಇಸಿ)/ ಕೆಇಬಿಬಿಲ್/ ಕುಡಿಯುವ ನೀರಿನ ಬಿಲ್/ಕಟ್ಟಡ ಪರವಾನಗಿ ಮತ್ತು ಅನುಮೋದಿತ ನಕ್ಷೆ/ ಏಕ ನಿವೇಶನ ವಿನ್ಯಾಸ ಅನುಮೋದನೆ ಅಥವಾ ಅನುಮೋದಿತ ಬಡಾವಣೆಯ ನಕ್ಷೆ/ ಅಲಿನೇಷನ್ ನಕಲು ಪ್ರತಿ /ಆರ್ ಟಿ ಸಿ/ ಮ್ಯೂಟೇಶನ್ ನಕಲು ಪ್ರತಿ/ ಮಾಲೀಕರ ಆಧಾರ್ ಕಾರ್ಡ್ ಪ್ರತಿ/ ಮಾಲೀಕರ ಪಾನ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ನಗರಸಭಾ ಕಛೇರಿಗೆ ಸಲ್ಲಿಸಿ ಸಂಬಂಧಪಟ್ಟ ಆಸ್ತಿ ತೆರಿಗೆಯನ್ನು ಪಾವತಿಸಿ, ಆಸ್ತಿಯನ್ನು ಗಣಕೀಕರಿಸಿಕೊಂಡು ನಮೂನೆ –3/ನಮೂನೆ– 3ಎಗಳನ್ನು ಪಡೆದುಕೊಂಡು ನೋಂದಾಯಿತ ಕಛೇರಿಯಲ್ಲಿ ಕ್ರಯಪತ್ರ / ದಾನಪತ್ರ/ವಿಭಾಗ ಪತ್ರ/ಹಕ್ಕು ಖುಲಾಸೆ ಹಾಗೂ ಇತರ ದಾಖಲೆ ಪತ್ರಗಳನ್ನು ನೋಂದಣಿ ಮಾಡಿಸಿಕೊಂಡು ಸದುಪಯೋಗ ಮಾಡಿಕೊಳ್ಳುವ ಅವಕಾಶ ಪಡೆಯಬಹುದಾಗಿರುತ್ತದೆ. ಪ್ರಯುಕ್ತ ಈ ಮೇಲ್ಕಂಡ ಸರ್ಕಾರದ ಅಧಿಸೂಚನೆಯಂತೆ ಗಣಕೀಕೃತ ನಮೂನೆ –3/ ನಮೂನೆ–3ಎ ರನ್ನು ಪಡೆದುಕೊಳ್ಳುವುದು. ತಪ್ಪಿದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರುಗಳಿಗೆ ನಿಯಮ 10ಎ ರಂತೆ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಯಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಪೌರಾಯುಕ್ತರು /ಕಂದಾಯಾಧಿಕಾರಿ/ ಕಂದಾಯ ಶಾಖೆಯ ಸಿಬ್ಬಂದಿರವರನ್ನು ಸಂಪರ್ಕಿಸಲು ತಿಳಿಯಪಡಿಸಿದೆ.

ಸಹಿ/–(ಎಸ್. ಶರವಣ) ಅಧ್ಯಕ್ಷರು, ನಗರಸಭೆ, ಹುಣಸೂರು
ಸಹಿ/– (ಹರೀಶ್ ಕುಮಾರ್) ಸ್ಥಾಯಿ ಸಮಿತಿ, ಅಧ್ಯಕ್ಷರು, ನಗರಸಭೆ ಹುಣಸೂರು
ಸಹಿ/– (ಹೆಚ್.ಡಿ. ಆಶಾ) ಉಪಾಧ್ಯಕ್ಷರು, ನಗರಸಭೆ ಹುಣಸೂರು
ಸಹಿ/– (ಮಾನಸ. ಎಂ) ಪೌರಾಯುಕ್ತರು, ನಗರಸಭೆ ಹುಣಸೂರು

ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಶ್ರೀರಾಂಪುರ ಪಟ್ಟಣ್ಣ ಪಂಚಾಯ್ತಿ, ವ್ಯಾಪ್ತಿಯಲ್ಲಿ ಕಟ್ಟಡಗಳು/ನಿವೇಶನಗಳನ್ನು ಹೊಂದಿರುವ ಆಸ್ತಿ ಮಾಲೀಕರಿಗೆ ಅನುಭೋಗದಾರರಿಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು , ನಗರಾಭಿವೃದ್ಧಿ ಇಲಾಖೆ : UDD 126 GEL 2023(e) Date: 11-02-2025 ರನ್ವಯ ಪಟ್ಟಣ ಪಂಚಾಯ್ತಿ ವ್ಯಾಪ್ತಿಯೊಳಗೆ ಬರುವ ಎಲ್ಲಾ ರೀತಿಯ ಕಟ್ಟಡ/ನಿವೇಶನಗಳಿಗೆ ಆಸ್ತಿ ತೆರಿಗೆ ನಿರ್ಧರಣೆಗೊಳಿಸಿ ಆಸ್ತಿ ತೆರಿಗೆಯನ್ನು 2024–25ನೇ ಸಾಲಿನ ಅಂತ್ಯದವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿಕೊಂಡು ಸಂಬಂಧಪಟ್ಟ ಆಸ್ತಿ ಮಾಲೀಕರಿಂದ ಅವಶ್ಯಕ ದಾಖಲಾತಿಗಳನ್ನು ಪಡೆದು ಕರ್ನಾಟಕ ಪೌರಸಭೆಗಳ ಅಧಿನಿಯಮದ 1964ರ ಸೆಕ್ಷನ್ 106(1ಬಿ)(ii) ಅನ್ವಯ Register-A ರಲ್ಲಿ (ನಮೂನೆ–3) ಅಧಿಕೃತ ಸ್ವತ್ತುಗಳು ಹಾಗೂ Register-B ರಲ್ಲಿ (ನಮೂನೆ–3A) ಅನಧಿಕೃತ ಸ್ವತ್ತುಗಳ ಮಾಹಿತಿಯುಳ್ಳ ವಹಿಯನ್ನು ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಶ್ರೀರಾಂಪುರ ಪಟ್ಟಣ್ಣ ಪಂಚಾಯ್ತಿ, ವ್ಯಾಪ್ತಿಯೊಳಗೆ ಬರುವ ಸರ್ಕಾರಿ ಜಾಗ/ಅರೆಸರ್ಕಾರಿ/ ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡಗಳ/ನಿವೇಶನಗಳ ಮಾಲೀಕರು ನಿಮ್ಮ ನಿಮ್ಮ ಆಸ್ತಿಗಳಿಗೆ ಸಂಬಂಧಿಸಿದ ಪೂರಕ ನೋಂದಾಯಿತ ದಾಖಲೆ ಪತ್ರಗಳು/ಸ್ವತ್ತಿನ ಭಾವಚಿತ್ರ/ಮಾಲೀಕರ ಫೋಟೋ । ನಮೂನೆ–15(EC)/ಕೆ.ಇ.ಬಿ ಬಿಲ್ / ಕುಡಿಯುವ ನೀರಿನ ಬಿಲ್ / ಕಟ್ಟಡ ಪರವಾನಗಿ ಮತ್ತು ಅನುಮೋದಿತ ನಕ್ಷೆ / ಏಕ ನಿವೇಶನ ವಿನ್ಯಾಸ ಅನುಮೋದನೆ ಅಥವಾ ಅನುಮೋದಿತ ಬಡಾವಣೆಯ ನಕ್ಷೆ / ಅಲಿನೇಷನ್ ನಕಲು ಪ್ರತಿ / RTC / ಮ್ಯೂಟೇಶನ್ ನಕಲು ಪ್ರತಿ /ಮಾಲೀಕರ ಆಧಾರ್ ಕಾರ್ಡ್ ಪ್ರತಿ / ಮಾಲೀಕರ ಪಾನ್ ಕಾರ್ಡ್ ಪ್ರತಿ ಅಥವಾ ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಶ್ರೀರಾಂಪುರ ಪಟ್ಟಣ್ಣ ಪಂಚಾಯ್ತಿ ಕಛೇರಿಗೆ ಸಲ್ಲಿಸಿ ಸ್ವತ್ತಿಗೆ ಸಂಬಂಧಪಟ್ಟ ಆಸ್ತಿ ತೆರಿಗೆಯನ್ನು ಪಾವತಿಸಿ, ಆಸ್ತಿಯನ್ನು ಗಣಕೀಕರಿಸಿಕೊಂಡು ನಮೂನೆ–3 / ನಮೂನೆ–3A ಗಳನ್ನು ಪಡೆದುಕೊಂಡು ನೋಂದಾಯಿತ ಕಛೇರಿಯಲ್ಲಿ ಕ್ರಯ ಪತ್ರ/ ದಾನ ಪತ್ರ/ವಿಭಾಗ ಪತ್ರ/ಹಕ್ಕು ಖುಲಾಸೆ ಹಾಗೂ ಇತರೆ ದಾಖಲೆ ಪತ್ರಗಳನ್ನು ನೋಂದಣಿ ಮಾಡಿಸಿಕೊಂಡು ಸದುಪಯೋಗ ಮಾಡಿಕೊಳ್ಳುವ ಅವಕಾಶ ಪಡೆಯಬಹುದಾಗಿರುತ್ತದೆ. ಪ್ರಯುಕ್ತ ಈ ಮೇಲ್ಕಂಡ ಸರ್ಕಾರದ ಅಧಿಸೂಚನೆಯಂತೆ ಗಣಕೀಕೃತ ನಮೂನೆ–3 ಮತ್ತು ನಮೂನೆ–34 ರನ್ನು ಪಡೆದುಕೊಳ್ಳುವುದು. ತಪ್ಪಿದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರುಗಳಿಗೆ ನಿಯಮ 104 ರಂತೆ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಯಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ ಪ.ಪಂ. ಮುಖ್ಯಾಧಿಕಾರಿಗಳು/ಕಂದಾಯ ನಿರೀಕ್ಷಕರು ಹಾಗೂ ಕಂದಾಯ ಶಾಖೆಯ ಸಿಬ್ಬಂದಿರವರನ್ನು ಸಂಪರ್ಕಿಸಲು ತಿಳಿಯಪಡಿಸಿದೆ.
ಮೊ.: 99160 68791

ಸಹಿ/– ಶ್ರೀ ಮಹೇಶ್ ಕುಮಾರ್ ಕೆ.ಎಂ., ಕೆ.ಎ.ಎಸ್, ಆಡಳತಾಧಿಕಾರಿಗಳು ಪಟ್ಟಣ ಪಂಚಾಯ್ತಿ, ಶ್ರೀರಾಂಪುರ
ಸಹಿ/– ಶ್ರೀ ಸುರೇಶ ಹೆಚ್.ಎಂ., ಮುಖ್ಯಾಧಿಕಾರಿ, ಪಟ್ಟಣ ಪಂಚಾಯ್ತಿ, ಶ್ರೀರಾಂಪುರ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

CHAMUNDESHWARI ELECTRICITY SUPPLY CORPORATION LIMITED
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ) (A Government of Karnataka Undertaking)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು–570017
Corporate Office, CESC, Mysuru-570017
Website: www.https://cescmysore.karnataka.gov.in/
E-mail ID:gmcommcesc@@gmail.com
Company Identity Number[CIN]:- U40109KA2004SGC035177

ಕ್ರಸಂ: ಚಾವಿಸನಿನಿ/ಪ್ರವ್ಯ(ವಾ)/ಉಪ್ರವ್ಯ(ನಿವ್ಯ–1)/ಸಪ್ರವ್ಯ(ನಿವ್ಯ–1)/2024–25/29070 ದಿನಾಂಕ: 12.02.2025

ವಿಷಯ : ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಆರ್ಥಿಕ ವರ್ಷ–26, 27 & 28ರ ವಿದ್ಯುತ್ ದರ ಪರಿಷ್ಕರಣೆ ಅರ್ಜಿಯ ಸಾರ್ವಜನಿಕ ವಿಚಾರಣೆಯ ಪ್ರಕಟಣೆ ಬಗ್ಗೆ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ) ಮುಂದೆ ಅನುಮೋದನೆಗಾಗಿ "ಆರ್ಥಿಕ ವರ್ಷ 2023–24 ನೇ ಸಾಲಿನ ವಾರ್ಷಿಕ ಕಾರ್ಯಕ್ಷಮತೆ ವಿಮರ್ಶೆ ವರದಿ ಹಾಗೂ ಆರ್ಥಿಕ ವರ್ಷ 2025–26, 2026–27 ಹಾಗೂ 2027–28 ನೇ ವಾರ್ಷಿಕ ಕಂದಾಯ ಅಗತ್ಯತೆ(ಎ.ಆರ್.ಆರ್)/ ಶುಲ್ಕಗಳಿಂದ ಬರಬಹುದಾದ ನಿರೀಕ್ಷಿತ ಆದಾಯ(ಇ.ಆರ್.ಸಿ) ಹಾಗೂ ವಿದ್ಯುತ್ ದರ ಪರಿಷ್ಕರಣೆ ಅರ್ಜಿಯನ್ನು ಸಲ್ಲಿಸಿದೆ."

ಈ ಬಗ್ಗೆ ಆಸಕಿಯುಳ್ಳವರ ಸಲಹೆ/ಪ್ರತಿಕ್ರಿಯೆಗಳನ್ನು ಆಲಿಸಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಕೆಳಗೆ ಸೂಚಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದೆ. ಈ ಪ್ರಸ್ತಾವನೆಯ ಸಂಕ್ಷಿಪ್ತ ವರದಿಯನ್ನು ದಿನಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟಿಸಿದ್ದು, ವಿವರಗಳು ನಿಗಮದ ಅಂತರ್ಜಾಲ https://cescmysore.karnataka.gov.in ನಲ್ಲಿ ಲಭ್ಯವಿದೆ.

ಸಾರ್ವಜನಿಕ ವಿಚಾರಣೆ ದಿನಾಂಕ ಮತ್ತು ಸಮಯ	ಸ್ಥಳ
ದಿ:19.02.2025 ರಂದು ಬುಧವಾರ ಬೆಳಿಗ್ಗೆ 11:00 ಗಂಟೆಗೆ	ಜಿಲ್ಲಾ ಪಂಚಾಯತ್ ಸಭಾಂಗಣ, ಮೈಸೂರು–570002

ಆಸಕ್ತ ವ್ಯಕ್ತಿಗಳು "ಸಾರ್ವಜನಿಕ ವಿಚಾರಣೆ"ಯಲ್ಲಿ ಭಾಗವಹಿಸಿ, ತಮ್ಮ ಸಲಹೆಗಳನ್ನು ಮೌಖಿಕ/ಲಿಖಿತರೂಪದಲ್ಲಿ ಸಾರ್ವಜನಿಕ ವಿಚಾರಣೆಯ ದಿನಾಂಕದಂದು ಕೆ.ಇ.ಆರ್.ಸಿಗೆ ಸಲ್ಲಿಸುವಂತೆ ಕೋರಲಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
DIPR/DDMYS/12/KSMCA/934/2024-25